॥ ಶ್ರೀ ॥

CC-O. In Public Domain. Digitized by eGangotri

ಸ್ಕಾಂದಪುರಾಣಾಂತರ್ಗತ

# ಶ್ರೀ ಮೂಕಾಂಬಿಕಾ ಕ್ಷೇತ್ರಮಹಾತ್ಮ್ಯೆ



ಶ್ರೀ ಕೊಲ್ಲಾಪುರ ಆದಿಮಹಾಲಕ್ಷ್ಮಿ

Sri Vidyabharathi Book Centre, Sringeri

CC-O. In Public Domain. Digitized by eGangotri

# ಇಂದ್ರಕೃತ ಮಹಾಲಕ್ಷ್ಮೀ ಅಷ್ಟಕಂ

ನಮಸ್ತೇಽಸ್ತು ಮಹಾಮಾಯೇ ! ‡ ಶ್ರೀಪೀಠೇ ಸುರಪೂಜಿತೇ !
ಶಂಖಚಕ್ರಗದಾಹಸ್ತೇ ! ‡ ಮಹಾಲಕ್ಷ್ಮಿ ! ನಮೋಽಸ್ತು ತೇ ॥೧॥

ನಮಸ್ತೇ ಗರುಡಾರೂಢೇ ! ಡೋಲಾಸುರಭಯಂಕರಿ !
ಸರ್ವಪಾಪಹರೇ ! ದೇವಿ ! ‡ ಮಹಾಲಕ್ಷ್ಮಿ ನಮೋಽಸ್ತು ತೇ ॥೨॥

ಸರ್ವಜ್ಞೇ ! ಸರ್ವವರದೇ ‡ ಸರ್ವದುಷ್ಟಭಯಂಕರಿ ! !
ಸರ್ವದುಃಖಹರೇ ! ದೇವಿ ‡ ಮಹಾಲಕ್ಷ್ಮಿ ನಮೋಽಸ್ತು ತೇ ॥೩॥

ಸಿದ್ಧಿಬುದ್ಧಿಪ್ರದೇ ! ದೇವಿ ! ‡ ಭುಕ್ತಿಮುಕ್ತಿಪ್ರದಾಯಿನಿ !
ಮಂತ್ರಮೂರ್ತೇ ! ಸದಾ ದೇವಿ ‡ ಮಹಾಲಕ್ಷ್ಮಿ ! ನಮೋಽಸ್ತು ತೇ ॥೪॥

ಆದ್ಯಂತರಹಿತೇ ! ದೇವಿ ‡ ಆದಿಶಕ್ತೇ ! ಮಹೇಶ್ವರಿ !
ಯೋಗಜೇ ! ಯೋಗಸಂಭೂತೇ ‡ ಮಹಾಲಕ್ಷ್ಮಿ ! ನಮೋಽಸ್ತು ತೇ ॥೫॥

ಸ್ಥೂಲಸೂಕ್ಷ್ಮ ಮಹಾರೌದ್ರೇ ‡ ಮಹಾಶಕ್ತೇ ! ಮಹೋದಯೇ !
ಮಹಾಪಾಪಹರೇ ! ದೇವಿ ‡ ಮಹಾಲಕ್ಷ್ಮಿ ! ನಮೋಽಸ್ತು ತೇ ॥೬॥

ಪದ್ಮಾಸನಸ್ಥಿತೇ ! ದೇವಿ ‡ ಪರಬ್ರಹ್ಮಸ್ವರೂಪಿಣಿ !
ಪರಮೇಶಿ ! ಜಗನ್ಮಾತಃ ‡ ಮಹಾಲಕ್ಷ್ಮಿ ! ನಮೋಽಸ್ತು ತೇ ॥೭॥

ಶ್ವೇತಾಂಬರಧರೇ ! ದೇವಿ ‡ ನಾನಾಲಂಕಾರಭೂಷಿತೇ !
ಜಗತ್ಸ್ಥಿತೇ ! ಜಗನ್ಮಾತಃ ‡ ಮಹಾಲಕ್ಷ್ಮಿ ! ನಮೋಽಸ್ತು ತೇ ॥೮॥

Sri Vidyabharathi Book Centre, Sringeri

CC-O. In Public Domain. Digitized by eGangotri

# ವಿನಂತಿ

'ಮೂಕಾಂಬಿಕಾ ಕ್ಷೇತ್ರಮಹಾತ್ಮ್ಯೆ' ಎಂಬ ಶಿರೋನಾಮೆಯುಳ್ಳ ಈ ಪುಟ್ಟ ಹೊತ್ತಿಗೆಯು ಈ ಹಿಂದೆ ಪ್ರಕಟವಾಗಿದ್ದು ಪ್ರತಿಗಳೆಲ್ಲವೂ ಮುಗಿದು ಹೋದುದರ ಸಲುವಾಗಿ ಈ ಮೂರನೆ ಆವೃತ್ತಿಯನ್ನು ಹೊರತರಲಾಯಿತು. ಇದರಲ್ಲಿ ದೇವಿಯ ಮಾಹಾತ್ಮ್ಯೆಯು ಮೂರು ಅಧ್ಯಾಯಗಳಲ್ಲಿ ವರ್ಣಿಸಲಾಗಿದೆ. ಮೊದಲನೆಯದರಲ್ಲಿ ದೇವೀ ನಿವಾಸವಾದ ಕ್ಷೇತ್ರವರ್ಣನೆಯನ್ನು ಎರಡನೆಯದರಲ್ಲಿ ಜ್ಯೋತಿರ್ಲಿಂಗಾರ್ಚನೆಯ ಕ್ರಮವನ್ನೂ,ಮೂರನೆಯದರಲ್ಲಿ ದೇವಿಯ ಪ್ರಸಾದನಾ ವರ್ಣನೆಯನ್ನೂ ಮಾಡಿರುತ್ತದೆ. ಮೊತ್ತಕ್ಕೆ ಇನ್ನೂ-ರರವತ್ತಾರು ಶ್ಲೋಕಗಳನ್ನೊಳಗೊಂಡ ಈ ಮೂರು ಅಧ್ಯಾಯಗಳಲ್ಲಿ ದೆವೀಯ ನಿವಾಸವೆನಿಸಿದ ಕೋಲಾಪುರ ಕ್ಷೇತ್ರದ ಮಹಿಮೆಯನ್ನೊಳಗೊಂಡ ಇದು ಸ್ಕಾಂದ ಪುರಾಣದಿಂದ ಹೊರತೆಗೆದುದು. ಆ ದೇವಿಯ ಭಕ್ತರ ಇಷ್ಟಾರ್ಥವನ್ನು ಸಲ್ಲಿಸುವುದಕ್ಕಾಗಿ ಈ ಕಿರು ಹೊತ್ತಿಗಯನ್ನು ಬೆಳಕಿಗೆ ತಂದಿದೆ. ಇದರ ಪ್ರಯೋಜನವನ್ನು ಶ್ರೀದೇವಿಯ ಭಕ್ತರು ಪಡೆಯುವರೆಂಬ ಬಯಕೆ ಈ ಸಂಗ್ರಾಹಕ ಮತ್ತು ಅನುವಾದಕನಿಗಿದೆ.

ಈ ಗ್ರಂಥರತ್ನವನ್ನು ಪ್ರಕಟಿಸಲು ಆರ್ಥಿಕ ನೆರವನ್ನು ಜದಗಿಸಿದ ಆಸ್ತಿಯ ಶಿರೋಮಣಿ ಶ್ರೀಮಾನ್ ಎಸ್. ಸುಬ್ರಹ್ಮಣ್ಯ ಅಯ್ಯರ್ ರವರಿಗೂ ಮತ್ತು ಇದನ್ನು ಅಂದವಾಗಿ ಬಹು ಶೀಘ್ರದಲ್ಲಿ ಮುದ್ರಿಸಿ ಕೊಟ್ಟ ಶ್ರೀ ಸುಧಾಮ ಪ್ರಿಂಟರ್ಸ್ ಮಾಲಿಕರಾದ ಶ್ರೀಮಾನ್ ಜೆ. ಎನ್. ಕೃಷ್ಣಮೂರ್ತಿಯವರಿಗೂ ಓದುಗರು ಋಣಿಗಳಾಗಿರಬೇಕಾಗಿದೆ.

ಇತಿ

**ಬುರಗನಹಳ್ಳಿ ಭೀಮಸೇನಶರ್ಮಾ**

**(B. BHEEMASENA RAO)**

13–2–1988

Sri Vidyabharathi Book Centre, Sringeri

CC-O. In Public Domain. Digitized by eGangotri

ಗ್ರಂಥಕರ್ತ

ಅಧ್ಯಾತ್ಮ ವಿದ್ಯಾಪ್ರವೀಣ
**ಬುರುಗನಹಳ್ಳಿ ಭೀಮಸೇನಶರ್ಮಾ**, ಎಂ.ಏಸ್ಸಿ.,

ಪ್ರಕಾಶಕರು :

**ಶ್ರೀ ಎಸ್. ಸುಬ್ರಹ್ಮಣ್ಯ ಅಯ್ಯರ್**
ಭದ್ರಾವತಿ

ಪುಟಗಳು : 72+2

13-2-1988

ಪ್ರತಿಗಳು : 3000

ಹಕ್ಕು ಕಾದಿರಿಸಲಾಗಿದೆ

ಮುದ್ರಕರು :

**ಸುಧಾನು ಪ್ರಿಂಟರ್ಸ್**
537/ಎ, 15ನೇ ಮುಖ್ಯರಸ್ತೆ
ಬಿ.ಎಸ್.ಕೆ. ಮೊದಲನೇ ಹಂತ
ಬೆಂಗಳೂರು-560050

ಪ್ರತಿಗಳು ದೊರೆಯುವ ಸ್ಥಳ :
ಬಿ. ಭೀಮಸೇನ ರಾವ್
ನಂ. 2, 9ನೇ ಅಡ್ಡರಸ್ತೆ, ಎನ್. ಆರ್. ಕಾಲೋನಿ
ಬೆಂಗಳೂರು-560019

ಬೆಲೆ : 3 ರೂ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಃ

॥ ಶ್ರೀ ಮಹಾಲಕ್ಷ್ಮ್ಯೈ ನಮಃ ॥

# ಶ್ರೀ ಮೂಕಾಂಬಿಕಾ ಕ್ಷೇತ್ರಮಾಹಾತ್ಮ್ಯಂ

# ಶ್ರೀ ಕೋಲಾಪುರಕ್ಷೇತ್ರ ಮಾಹಾತ್ಮ್ಯಮ್

## ಶ್ರೀಸ್ಕಾಂದಪುರಾಣಾಂತರ್ಗತಂ

## ಪ್ರಥಮೋಽಧ್ಯಾಯಃ

**ಅಸ್ತು ವಃ ಶ್ರೇಯಸೇ ಕಿಂಚಿತ್ ‡ ವಸ್ತು ವಾಮಂ ಮಹೇಶಿತುಃ ।**
**ನಿಸ್ತುಲಂ ವಿಸ್ತೃತಂ ಚಾಸ್ತಿ ‡ ಪ್ರಸ್ತುತಂ ಭುವನಂ ಯತಃ ॥೧॥**
**ಕದಾಚಿತ್ ನೈಮಿಷಾರಣ್ಯೇ ‡ ಋಷಯಃ ಶೌನಕಾದಯಃ ।**
**ಪಪ್ರಚ್ಛುಃ ವಿನಯೇನೇದಂ ‡ ಸೂತಂ ಪೌರಾಣಿಕೋತ್ತಮಂ ॥೨॥**

**ಋಷಯ ಊಚುಃ—**

**ಸೂತ ! ಸರ್ವಜ್ಞ ! ಗೋಕರ್ಣ- ‡ ಕ್ಷೇತ್ರಮಾಹಾತ್ಮ್ಯಮುತ್ತಮಂ ।**
**ಶ್ರುತಂ ಕೋಲಾಪುರಕ್ಷೇತ್ರ- ‡ ಮಾಹಾತ್ಮ್ಯಂ ವದ ಸಾಂಪ್ರತಂ ॥೩॥**

ಯಾವುದರಿಂದ ಈ ವಿಸ್ತಾರವಾದ ಭೂಭಾಗವು ನಿರ್ಮಿಸಲ್ಪಟ್ಟಿತೋ ಅಂತಹ ಮಹೇಶ್ವರನ ಎಡಭಾಗವನ್ನಲಂಕರಿಸಿದ ಶಕ್ತಿರೂಪವಾದ ವಸ್ತು ನಿಮಗೆಲ್ಲರಿಗೂ ಶ್ರೇಯಸ್ಸನ್ನು ತರಲಿ (ಎಂಬ ಮಂಗಳವನ್ನು ಓದುಗರಿಗೆ ಆಶ್ವಾಸಿಸಿ ಬಳಿಕ ಕಥೆಯನ್ನು ಪ್ರಾರಂಭಿಸಿದೆ) ॥೧॥ ಒಂದಾನೊಂದು ಕಾಲದಲ್ಲಿ ನೈಮಿಶಾರಣ್ಯದಲ್ಲಿ (ಸತ್ಯ ಯಾಗದಲ್ಲಿ ತೊಡಗಿದ್ದ) ಶೌನಕಾದಿ ಋಷಿಗಳು ಪೌರಾಣಿಕ ಶ್ರೇಷ್ಠನೆನಿಸಿದ ಸೂತಪುರಾಣಿಕನನ್ನು ಕುರಿತು ವಿನಯದಿಂದ ಕೂಡಿ ಈ ಮುಂದಿನಂತೆ ಕೇಳಿಕೊಂಡರು ॥೨॥ ಋಷಿಗಳು ಸೂತನನ್ನು ಕುರಿತು "ಸಮಸ್ತ ವಿಷಯಗಳನ್ನು ತಿಳಿದ ಸೂತ ಪುರಾಣಿಕ! ನಿನ್ನಿಂದ ಈಗಾಗಲೆ

Sri Vidyabharathi Book Centre, Sringeri

CC-O. In Public Domain. Digitized by eGangotri



ಸೂತ ಉವಾಚ—

ಭೋ! ಭೋ! ದ್ವಿಜವರಾಃ! ಸರ್ವೇ ‡ ಸರ್ವಾರ್ಥದಮನುತ್ತಮಂ
ಯತ್ ಪೃಷ್ಟಮಿಹಯುಷ್ಮಾಭಿಃ ‡ ತತ್ ಶೃಣುಧ್ವಂ ಸಮಾಹಿತಾಃ ॥೪॥

ಪುರಾ ಸರ್ವೇಶ್ವರಂ ದೇವಂ ‡ ಮಂದರಾಚಲಸಂಸ್ಥಿತಂ ।
ಸ್ಕಂದಃ ಸ್ವಪಿತರಂ ನತ್ವಾ ‡ ಪಪ್ರಚ್ಛೇದಂ ಮಹಾಮತಿಃ ॥೫॥

ಸ್ಕಂದ ಉವಾಚ—

ತಾತ ! ಭೂತೇಶ ! ಭಗವನ್ ! ‡ ಮಯಾ ತ್ವತ್ತಃ ಶ್ರುತಂ ಮಹತ್ ।
ಗೋಕರ್ಣ ಕ್ಷೇತ್ರಮಾಹಾತ್ಮ್ಯಂ ‡ ತಲ್ಲಿಂಗಂ ಚ ಸುಪೂಜಿತಂ ॥೬॥
ಏತಾದೃಶಂ ಮಹಾಕ್ಷೇತ್ರಂ ‡ ಭುಕ್ತಿಮುಕ್ತಿಪ್ರದಂ ಪರಂ ।
ತ್ರಿಲೋಕ್ಯಾಮಪಿ ನೈವಾಸ್ತೀ- ‡ ತ್ಯೇವಂ ಮೇ ಭಾತಿ ಶಂಕರ ! ॥೭॥

---

ಗೋಕರ್ಣ ಕ್ಷೇತ್ರ ಮಾಹಾತ್ಮ್ಯೆಯನ್ನು ತಿಳಿದುಕೊಂಡೆವು, ಈಗ ದಯವಿಟ್ಟು ಶ್ರೀ ಕೋಲಾಪುರಕ್ಷೇತ್ರದ ಮಹಾತ್ಮ್ಯೆಯನ್ನು ಕೇಳಬೇಕೆಂದು ಬಯಸುತ್ತಿರುವ ನಮಗೆ ಆ ವಿಷಯವನ್ನು ವಿವರಿಸು ॥ ಎಂದು ಬೇಡಿದರು. ಸೂತ ಪುರಾಣಿಕನು ಋಷಿಗಳನ್ನುದ್ದೇಶಿಸಿ ಹೀಗೆಂದು ಹೇಳಿದನು. “ಪೂಜ್ಯರಾದ ಬ್ರಾಹ್ಮಣೋತ್ತಮರೆ ! ನೀವು ಯಾವುದನ್ನು ತಿಳಿಯಬೇಕೆಂದು ಬಯಸಿದಿರೋ ಅದು ಅತಿ ಶ್ರೇಷ್ಠವಾದದು, ಸಮಸ್ತ ಇಷ್ಟಾರ್ಥಗಳನ್ನೂ ಸಲ್ಲಿಸುವಂಥದು. ಅದನ್ನು ವಿಸ್ತರಿಸುತ್ತೇನೆ, ಗಮನವಿಟ್ಟು ಕೇಳಿರಿ ॥೪॥ ಈ ಹಿಂದೆ ಮಂದರಾಚಲದಲ್ಲಿ ನೆಲೆಸಿದ್ದ ಸರ್ವೇಶ್ವರನೆನಿಸಿದ ಮತ್ತು ತನ್ನ ಹೆತ್ತ ತಂದೆಯಾದ ಶಂಕರನನ್ನು ಕುರಿತು, ಆದೇವನ ಔರಸಪುತ್ರನೆನಿಸಿದ ಮಹಾಜ್ಞಾನಿಯೆನಿಸಿದ ಸ್ಕಂದನು ವಂದಿಸಿ, ಈ ಮುಂದಿನಂತೆ ಕೇಳಿಕೊಂಡನು. ॥೫॥ ಸ್ಕಂದನು ತನ್ನ ತಂದೆಯನ್ನು ಕುರಿತು ಹೇಳಿದುದೇನೆಂದರೆ, “ಷಡ್ಗುಣೈಶ್ವರ್ಯ ಸಂಪನ್ನನೆನಿಸಿ ಭೂತಪತಿಯಾದ ದೇವ, ಈ ಹಿಂದೆ ಅತಿ ಶ್ರೇಷ್ಠವೆನಿಸಿದ ಗೋಕರ್ಣಕ್ಷೇತ್ರದ ಮಾಹಾತ್ಮ್ಯೆಯನ್ನು ನಿನ್ನಿಂದ ಕೇಳಿ ತಿಳಿದುಕೊಂಡೆನು ಮಾತ್ರವಲ್ಲದೆ ಅಲ್ಲಿ ಪ್ರತಿಷ್ಠಿತವಾದ ಈಶ್ವರಲಿಂಗಕ್ಕೂ ಪೂಜೆ ಸಲ್ಲಿಸಿದೆನು ॥೬॥

Sri Vidyabharathi Book Centre, Sringeri

CC-O. In Public Domain. Digitized by eGangotri


ತಥಾಽಪಿ ಸಿದ್ಧಿದಂ ಲೋಕೇ ‡ ತಾದೃಶಂ ಕ್ಷೇತ್ರಮಸ್ತಿ ಚೇತ್ ।
ಅಕಥ್ಯಮಪಿ ಸರ್ವಜ್ಞ! ‡ ಕೃಪಯಾ ತತ್ ವದಾದ್ಯ ಮೇ ॥೮॥

ಈಶ್ವರ ಉವಾಚ—

ಶೃಣು ಪುತ್ರ ! ಮಹಾಪ್ರಾಜ್ಞ! ‡ ಕ್ಷೇತ್ರೋತ್ತಮತಮಂ ಮಹತ್।
ಕೋಲಾಪುರಮಿತಿ ಖ್ಯಾತಂ ‡ ಸ್ನೇಹಾತ್ ತತ್ ಪ್ರಕಟೀಕೃತಂ ॥೯॥
ಸರ್ವಸ್ಯಾದ್ಯಾ ಮಹಾಲಕ್ಷ್ಮೀಃ ‡ ತ್ರಿಗುಣಾ ಪರಮೇಶ್ವರೀ ।
ಲಕ್ಷ್ಯಾಲಕ್ಷ್ಯಸ್ವರೂಪಾ ಸಾ ‡ ವ್ಯಾಪ್ಯ ಕೃತ್ಸ್ನಂ ವ್ಯವಸ್ಥಿತಾ ॥೧೦॥
ಇತ್ಯೇಷಾ ಶ್ರೀಮಹಾಲಕ್ಷ್ಮೀಃ ‡ ಅಸ್ಮದಾದಿಜಗತ್ಪ್ರಸೂಃ ।
ಆಸ್ತೇ ಯತ್ರಾತ ಏವೇದಂ ‡ ಕ್ಷೇತ್ರಂ ಗೋಕರ್ಣತೋಽಧಿಕಂ ॥೧೧॥

---

ಇಹಲೋಕದ (ಭುಕ್ತಿ) ಸುಖವನ್ನೂ ಮತ್ತು ಪರಲೋಕದ (ಮುಕ್ತಿ) ಸುಖವನ್ನೂ ಕಲ್ಲಿಸಬಲ್ಲ ಅತಿ ಶ್ರೇಷ್ಠವಾದ ಇಂತಹ ಮಹಾಕ್ಷೇತ್ರವು ಮೂರು ಲೋಕದಲ್ಲಿಯೂ ದೊರಕದು ಎಂಬ ಭಾವನೆಯು ನನ್ನಲ್ಲಿ ಮೂಡಿದೆ ॥೭॥ ಇಷ್ಟಾದರೂ ಈ ಲೋಕದಲ್ಲಿ ಇಂತಹ ಕ್ಷೇತ್ರವು ಇನ್ನೊಂದಿರುವುದಾದರೆ. ಭೋ ಸರ್ವಜ್ಞ ! ಅದು ಹೇಳಬಾರದೆಂದಿದ್ದರೂ ಕೂಡ ಅದರ ವಿಷಯವನ್ನು ನನಗೆ ಕರುಣೆಯಿಂದ ಅನುಗ್ರಹಿಸು" ಎಂದು ಕೇಳಿದೊಡನೆಯೇ ಮಹೇಶ್ವರನು ಸ್ಕಂದನನ್ನು ಕುರಿತು ಹೀಗೆಂದು ಉತ್ತರಕೊಟ್ಟನು ! "ಸೂಕ್ಷ್ಮ ಬುದ್ಧಿ ಯುಳ್ಳ ಪುತ್ರರತ್ನವೇ ಕೇಳು. ಕೋಲಾಪುರವೆಂಬ ಅತ್ಯಂತ ಪವಿತ್ರವಾದ ಮತ್ತೊಂದು ಕ್ಷೇತ್ರವುಂಟು. ನಿನ್ನಲ್ಲಿ ನನಗಿರುವ ಪ್ರೇಮದಿಂದ ಅದರ ವಿಷಯವನ್ನು ವಿವರಿಸುತ್ತೇನೆ ಕೇಳು. ಸತ್ವರಜಸ್ತಮಗಳೆಂಬ ತ್ರಿಗುಣಾತ್ಮಕಳಾಗಿಯೂ, ಸಮಸ್ತ ಸೃಷ್ಟಿಗಿಂತ ಮೊದಲನೆಯವಳಾಗಿಯೂ ಕಂಡೂಕಾಣದಿರುವ ಸ್ವರೂಪಳಾಗಿಯೂ ಇರುವ ಆ ಆದಿಮಹಾಲಕ್ಷ್ಮೀಸ್ವರೂಪಿಣಿಯು ನನ್ನಿಂದೊಡಗೂಡಿ ಇರುವ ಈ ಜಗತ್ತನ್ನು ಸೃಷ್ಟಿಸಿ ಅದೆಲ್ಲವನ್ನೂ ವ್ಯಾಪಿಸಿ ಬಳಿಕ ಅದರಲ್ಲಿ ಗೋಕರ್ಣಕ್ಷೇತ್ರಕ್ಕಿಂತಲೂ ಅತಿಶ್ರೇಷ್ಠವೆನಿಸಿದ ಈ ಕೋಲಾಪುರ ಕ್ಷೇತ್ರವನ್ನು ನಿರ್ಮಿಸಿದಳು ॥೧೦॥ ಪೂರ್ವದಲ್ಲಿ ಉತ್ತಮನೆಂಬ ಮೂರನೆಯ ಮನುವಿನ

Sri Vidyabharathi Book Centre, Sringeri

CC-O. In Public Domain. Digitized by eGangotri

ಪೂರ್ವಂ ಖಲೂತ್ತಮಮನೋಃ ‡ ಅಂತರೇ ಬ್ರಹ್ಮವಿತ್ತಮಃ ।
ಕೋಲೋ ನಾಮ ಮುನಿಶ್ರೇಷ್ಠಃ ‡ ಸರ್ವಲೋಕೇಷು ವಿಶ್ರುತಃ
||೧೨||

ಗೋಕರ್ಣಾತ್ ದ್ದಕ್ಷಿಣೇ ದೇಶೇ ‡ ದಶಯೋಜನಸಮ್ಮಿತೇ ।
ಉಪತ್ಯಕಾಯಾಂ ಸಹ್ಯಾದ್ರೇಃ ‡ ಮಹಾರಣ್ಯಪುರಾಭಿಧೇ ||೧೩||

ಕಲ್ಪಯಿತ್ವೋಟಜಂ ಸೋಽಯಂ ‡ ಮಾಮುದ್ದಿಶ್ಯ ಮಹತ್ತಪಃ ।
ತಪ್ತ್ವಾಽತ್ರ ಸುಚಿರಂ ಮತ್ತಃ ‡ ಪ್ರಸನ್ನಾತ್ ಈಪ್ಸಿತಾನ್ ವರಾನ್
||೧೪||

ಲಬ್ಧ್ವಾಽಪ್ಯಥ ಮುನಿಶ್ರೇಷ್ಠಃ ‡ ಕ್ಷೇತ್ರಮೇತತ್ ಮದಾಖ್ಯಯಾ ।
ಪ್ರಸಿದ್ಧಿಂಯಾತ್ವಿತಿ ಸ ಮಾಂ ‡ ಪ್ರಾರ್ಥಯಾಮಾಸ ಸಾದರಂ ||೧೫||

ತಥಾಸ್ತ್ವಿತಿಮಯಾಪ್ರೋಕ್ತೇ ‡ ತತ್ಪ್ರಭೃತ್ಯೇಷ ಆಶ್ರಮಃ ।
ಕೋಲಾಪುರಕ್ಷೇತ್ರಮಿತಿ ‡ ಪ್ರಖ್ಯಾತಃ ಪೃಥಿವೀತಲೇ ||೧೬||

ಇದಮನ್ಯದೃಷೀಶಂ ತಂ ‡ ಪುನರಪ್ಯಹಮಬ್ರುವಂ ।
ತಪಃ ಪ್ರಭಾವಾತ್ ತೇ ಮೇ ಚ ‡ ಅನುಗ್ರಹಾತ್ ಅಧುನೈವ ಹಿ
||೧೭||

---

ಅಂತರದಲ್ಲಿ ಬ್ರಹ್ಮನಿಷ್ಠನಾದ 'ಕೋಲ' ಎಂಬ ಹೆಸರಿನಿಂದ ಪ್ರಸಿದ್ಧನಾದ ಮಹರ್ಷಿಯು ಸರ್ವಲೋಕಪ್ರಸಿದ್ಧನಾಗಿದ್ದನು. ಆತನು ಗೋಕರ್ಣಕ್ಷೇತ್ರಕ್ಕೆ ದಕ್ಷಿಣಭಾಗದಲ್ಲಿ ಹತ್ತು ಯೋಜನ ವಿಸ್ತೀರ್ಣವಾದ ಸಹ್ಯಾದ್ರಿಯ ತಪ್ಪಲಿನಲ್ಲಿ ಮಹಾರಣ್ಯಪುರವೆಂದು ಪ್ರಸಿದ್ಧವಾದ ಪಟ್ಟಣವೊಂದರಲ್ಲಿ ಒಂದು ಪರ್ಣಶಾಲೆ ಯನ್ನು ಮಾಡಿಕೊಂಡು ನನ್ನನ್ನು ಕುರಿತು ಘೋರವಾದ ತಪಸ್ಸನ್ನಾಚರಿಸಿ ದನು. ಬಹುಕಾಲ ಮಾಡಿದ ಈ ಋಷಿಯ ತಪಸ್ಸಿನಿಂದ ತೃಪ್ತನಾದ ನನ್ನಿಂದ ಅನೇಕ ಇಷ್ಟಾರ್ಥವಾದ ವರಗಳನ್ನು ಪಡೆದು ನನ್ನ ಹೆಸರಿನಲ್ಲಿ ಆ ಮುನಿ ಶ್ರೇಷ್ಠನು "ತನ್ನ ಹೆಸರಿನಲ್ಲಿಯೇ ಈ ಕ್ಷೇತ್ರವು ಪ್ರಸಿದ್ಧಿಯಾಗಬೇಕು" ಎಂದು ನನ್ನನ್ನು ಪ್ರಾರ್ಥಿಸಿದನು. 'ಹಾಗೆಯೇ ಆಗಲಿ' ಎಂದು ನನ್ನ ಸಮ್ಮತಿಯನ್ನು ಪಡೆದದ್ದರಿಂದ ಆ ಕಾಲದಿಂದ ಇದು ಭೂಲೋಕದಲ್ಲಿ ಕೋಲಾಪುರಕ್ಷೇತ್ರ ವೆಂಬ ಪ್ರಸಿದ್ಧಿಯನ್ನು ಪಡೆಯಿತು. ಇದಾದ ಬಳಿಕ ಆ ಮುನಿಶ್ರೇಷ್ಠನನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri


ಇದಂ ಕೋಲಾಪುರಂ ಸಿದ್ಧ ‡ ಕ್ಷೇತ್ರಮೇವಾಸ್ತಿ ಚೇದಪಿ ।
ಇತಃ ಪ್ರಭೃತಿ ಮನ್ಮೂರ್ತಿಂ ‡ ಪಾರ್ಥಿವೀಂ ಪೂಜಯನ್ ಸದಾ
॥೧೮॥

ತಪಃ ಕರೋಷಿ ಚೇತ್ ತಾಪ ‡ ಸಾಕ್ಷಿಮನ್ವಂತರೇಽತ್ರ ತು ।
ಪರಾ ಶೈವೀತಿ ಯಾ ಶಕ್ತಿ: ‡ ಯಾ ಮಹಾವೈಷ್ಣವೀತಿ ಚ ॥೧೯॥

ತಸ್ಯಾಃ ಶ್ರೀಮನ್ಮಹಾಲಕ್ಷ್ಮ್ಯಾಃ ‡ ನಿವಾಸೋ ಭವಿತಾ ಸ್ಫುಟಂ ।
ತದಾಪ್ರಭೃತಿ ಅದಃ ಸ್ಥಾನಂ ‡ ಸರ್ವಕ್ಷೇತ್ರೋತ್ತಮಂ ಭವೇತ್
॥೨೦॥

ಏವಮುಕ್ತ್ವಾ ತದಾನೀಂ ತು ‡ ತಸ್ಮೈ ಕೋಲರ್ಷಯೇ ಮಯಿ ।
ಅಂತರ್ಧಾನಂ ಗತೇ ತೇನ ‡ ಕೃತಂ ಸರ್ವಂ ಯಥೋದಿತಂ ॥೨೧॥

ಅಥ ಕಂಹಾಸುರೋ ನಾಮ ‡ ದೈತ್ಯಃ ಶ್ರೀಭೈರವೀಂ ಭೃಶಂ ।
ಆರಾಧ್ಯ ತಪಸಾ ಪುಂಭಿಃ ‡ ಅವಧ್ಯತ್ವಂ ಗತಃ ಪುನಃ ॥೨೨॥

---

ಕುರಿತು ನಾನು ಹೀಗೆಂದು ಹೇಳಿದೆನು–"ಇದು ನಿನ್ನ ತಪಃ ಪ್ರಭಾವದಿಂದಲೂ ನನ್ನನುಗ್ರಹದ ಪ್ರಭಾವದಿಂದಲೂ ಇಂದಿನಿಂದಲೂ ಕೋಲಾಪುರ ಸಿದ್ಧ ಕ್ಷೇತ್ರವೆನಿಸಿದರೂ ನೀನು ಇದು ಮೊದಲುಗೊಂಡು ಪ್ರತಿದಿನವೂ ನನ್ನ ಸಂಬಂಧವಾದ ಪಾರ್ಥಿವಲಿಂಗವನ್ನು ಪೂಜೆ ಮಾಡುತ್ತ ತಪಸ್ಸನ್ನು ಆಚರಿಸುತ್ತಿರುವೆಯಾದರೆ ನಾಲ್ಕನೆಯ ತಾಪಸವೆಂಬ ಮನ್ವಂತರದಲ್ಲಿ ಈ ಕೋಲಾಪುರ ಕ್ಷೇತ್ರದಲ್ಲಿ ಪರಾಶೈವೀ ಎಂದೂ ಮತ್ತು ಮಹಾವೈಷ್ಣವೀಯೆಂದೂ ಹೆಸರಾಂತ ಮಹಾಶಕ್ತಿಸ್ವರೂಪಿಣಿಯಾದ ಮಹಾಲಕ್ಷ್ಮಿಯು ಇಲ್ಲಿ ನೆಲೆಯಾಗಿ ನಿಲ್ಲುವಳು. ಈ ಕಾರಣದಿಂದ ಈ ಕ್ಷೇತ್ರವು ಕ್ಷೇತ್ರಗಳಲ್ಲೆಲ್ಲ ಅತ್ಯುತ್ತಮವೆಂದು ಪ್ರಸಿದ್ಧಿಗೊಳ್ಳುವುದು" ॥೨೦॥ ಈ ರೀತಿಯಾಗಿ ಆ ಮುನಿಗೆ ಹೇಳಿ ನಾನು ಕಣ್ಮರೆಯಾದೆನು. ಆ ಮುನಿಯಾದರೋ ನಾನು ಹೇಳಿದ ರೀತಿಯಲ್ಲಿಯೇ ಎಲ್ಲವನ್ನೂ ನೆರವೇರಿಸಿದನು ॥೨೧॥ ಇದಾದ ಕೆಲವು ಕಾಲದ ಮೇಲೆ ಕಂಹಾಸುರನೆಂಬ ರಕ್ಕಸನು ಭೈರವೀದೇವಿಯನ್ನು ತನ್ನ ತಪಸ್ಸಿನಿಂದ ಆರಾಧಿಸಿ, ಆ ದೇವಿಯಿಂದ ಯಾವ ಪುರುಷನಿಂದಲೂ ತನಗೆ ಮರಣವಾಗ–

Sri Vidyabharathi Book Centre, Sringeri

CC-O. In Public Domain. Digitized by eGangotri

ಸಮಾಗತ್ಯಾಽಶ್ರಮೇಽತ್ರೈನಂ ‡ ಸಮಾಧಿಸ್ಥಂ ಮಹಾಮುನಿಂ ।
ದೂರತಃ ಸ್ಥಾಪಯಿತ್ವಾಽಥ ‡ ಸ್ವಯಂ ವಾಸಂ ಚಕಾರ ಹ ॥೨೩॥

ತತಸ್ತು ಸ್ವಜನೈಃ ಸಾರ್ಧಂ ‡ ಭೃಶಂ ತೇನಾಮರಾರಿಣಾ ।
ತ್ರೈಲೋಕ್ಯೇ ದೂಷಿತೇ ಚಾಸ್ಮಿನ್ ‡ ಕ್ಷೇತ್ರೇ ಸತಿ ಸುದುರ್ಗಮೇ ॥೨೪॥

ಯುದ್ಧಾರ್ಥಂ ಆಗತಾಂ ದೇವೀಂ ‡ ದೃಷ್ಟ್ವಾ ತ್ರಿಪುರಭೈರವೀಂ ।
ಋಷ್ಯಮೂಕಗಿರಿಂ ಯಾತೋ ‡ ಭೀತೋಽಯಂ ತಪತೇ ಖಲಃ ॥೨೫॥

ಮನ್ವಂತರೇ ತುರೀಯೇ ತು ‡ ಗತೇ ಪಶ್ಚಾತ್ ಕೃತೇ ಯುಗೇ ।
ಚತುಃಷಷ್ಟಿತಮೇ ಜಾತೋ ‡ ಮಹಿಷೋ ನಾಮ ದೈತ್ಯರಾಟ್ ॥೨೬॥

ಸ ಚಾಸ್ಮಿನ್ ಕಂಹನಗರೇ ‡ ದೈತ್ಯಸೇನಾಸಮಾವೃತಃ ।
ಕೃತ್ವಾ ವಾಸಂ ತ್ರಿಲೋಕೀಂ ಚ ‡ ಜಿತೇಂದ್ರೋಽಸೌಬಭೂವ ಹ ॥೨೭॥

---

ದಿರುವ ವರವನ್ನು ಗಳಿಸಿದನು. ಆ ಬಳಿಕ ಆ ದೈತ್ಯನು ಈ ಆಶ್ರಮಕ್ಕೆ ಬಂದು ಅಲ್ಲಿ ತಪಸ್ಸನ್ನಾಚರಿಸುತ್ತಿದ್ದ ಮುನಿಶ್ರೇಷ್ಠನನ್ನು ಹೊರ ಹೊರಡಿಸಿ ಅದನ್ನು ತನ್ನ ವಾಸಸ್ಥಾನವನ್ನಾಗಿ ಮಾಡಿಕೊಂಡನು. ॥೨೩॥ ಅನಂತರ ಆ ದೈತ್ಯನು ಸ್ವಜನರಾದ ಇತರ ದೈತ್ಯರೊಡಗೂಡಿ ಈ ಸಿದ್ಧಾಶ್ರಮವನ್ನು ಅಪವಿತ್ರ ಗೊಳಿಸಲಿಕ್ಕಾಗಿ ಇತರರು ಯಾರೂ ಅದನ್ನು ಪ್ರವೇಶಿಸಲು ಅಸಾಧ್ಯವಾದುದ ರಿಂದ ಇವನ ಭಾಧೆಯನ್ನು ತಪ್ಪಿಸಲು ಅವನೊಡನೆ ಯುದ್ಧ ಮಾಡಲು ತ್ರಿಪುರ ಭೈರವೀದೇವಿಯು ಮುಂದೆಬರಲು ಆ ದೈತ್ಯನು ಹೆದರಿ ಆ ಸ್ಥಳವನ್ನು ತೊರೆದು ಋಷ್ಯಮೂಕಪರ್ವತದ ತಪ್ಪಲನ್ನು ಸೇರಿ ಅಲ್ಲಿ ತಪಸ್ಸಿನಲ್ಲಿ ನಿರತ ನಾದನು ॥೨೫॥ ಆ ಬಳಿಕ ನಾಲ್ಕನೆಯ ಮನ್ವಂತರದಲ್ಲಿ ಅರವತ್ತನಾಲ್ಕನೆಯ ಕೃತಯುಗವು ಪ್ರಾಪ್ತವಾದಂದು, ಮಹಿಷಾಸುರನೆಂಬ ರಾಕ್ಷಸ ರಾಜನೊಬ್ಬನು ಹುಟ್ಟಿದನು. ಅವನು ಈ ಕಂಹನಿಂದ ಆಕ್ರಮಿಸಲ್ಪಟ್ಟಿದ್ದ ಕೋಲಾಪುರದಲ್ಲಿ ವಾಸಿಸುತ್ತ, ದೈತ್ಯಸೇನೆಯೊಡಗೂಡಿ ಮೂರು ಲೋಕಗಳಿಗೂ ಕಂಟಕನಾಗಿ

Sri Vidyabharathi Book Centre, Sringeri

CC-O. In Public Domain. Digitized by eGangotri



ಏಕದಾ ಮುನಿರಾಟ್ ಸ್ಸೋಽಯಂ ‡ ಪ್ರಾಪ್ತಬೋಧಃ ಸಮಾಧಿತಃ ।
ಜ್ಞಾತ್ವಾ ಕಂಹಕೃತಂ ದೈತ್ಯೈಃ ‡ ಆವೃತಂ ಚ ನಿಜಾಶ್ರಮಂ ॥೨೮॥

ತಪಃ ತ್ತೇಪೇ ಪುನರ್ವಿಷ್ಣುಂ ‡ ಮಾಂ ಚ ಸಾದರಂ ಆತ್ಮಜ ।
ಕದಾಚಿದಾವಾಂ ಯಾವತ್ತಂ ‡ ಬೋಧಯೋವ ಸಮಾಧಿತಃ ॥೨೯॥

ತಾವತ್ ಸಮಾಗತಾಃ ದೇವಾಃ ‡ ಯತ್ರೇಶಗರುಡಧ್ವಜೌ ।
ಗತಾವಾಸಾನ್ ಹೃತಶ್ರೀಕಾನ್ ‡ ಸಾಜಾನ್ ತಾನ್ ಮಹಿಷಾರ್ದಿ
ತಾನ್ ॥೩೦॥

ವಿಜ್ಞಾಪಿತಸ್ವವೃತ್ತಾಂತಾನ್ ‡ ದೃಷ್ಟ್ವಾಽಸ್ಮತ್ತಃ ಕುದುತ್ಥಿತಃ ।
ತತೋಽತಿಕೋಪಪೂರ್ಣಸ್ಯ ‡ ಹರೇಃ ಮಮ ಚ ವೇಧಸಃ ॥೩೧॥

ಇಂದ್ರಾದೀನಾಂ ತಥಾನ್ಯೇಷಾಂ ‡ ಸರ್ವೇಷಾಂ ಅಸುರದ್ವಿಷಾಂ ।
ಮುಖೇಭ್ಯೋ ನಿರ್ಗತಂ ಸದ್ಯಃ ತೇಜೋ ಭೂಯೋ
ಮಹೋಜ್ಜ್ವಲಂ ॥೩೨॥

ಸ ತೇಜೋ ಗಿರಿರೇಕಸ್ಥಃ ‡ ಪುನಃ ಸದ್ಯುವತಿರ್ಬಭೌ ।
ಅಥೈಷಾ ಶ್ರೀ ಮಹಾಲಕ್ಷ್ಮೀಃ ‡ ಸರ್ವದೇವಾತ್ಮಿಕಾ ಪರಾ ॥೩೩॥

---

ಸ್ವರ್ಗವಾಸಿಯಾದ ಇಂದ್ರನನ್ನೂ ಕೂಡ ಜಯಿಸಿದನು. ಆ ಸ್ಥಳದಲ್ಲಿಯೇ ವಾಸಿಸುತ್ತ ತಪಸ್ಸಿನಲ್ಲಿ ಮಗ್ನನಾದ ಮುನಿಶ್ರೇಷ್ಠನು ತನ್ನ ಸಮಾಧಿಸ್ಥಿತಿಯಿಂದೆಚ್ಚತ್ತು ತನ್ನಾಶ್ರಮವು ದೈತ್ಯರಿಂದ ಆಕ್ರಮಿಸಲ್ಪಟ್ಟ ವಿಷಯವನ್ನು ಮನಗಂಡು ನನ್ನನ್ನೂ ವಿಷ್ಣುದೇವನನ್ನೂ ಕುರಿತು ಘೋರವಾದ ತಪಸ್ಸನ್ನಾಚರಿಸಿದನು. ಆ ತಪಸ್ಸಿಗೆ ಮೆಚ್ಚಿ ನಾನೂ ವಿಷ್ಣುದೇವನೂ ಸಮಾಧಿನಿಷ್ಠನಾದ ಆ ಋಷಿಯು ಎಚ್ಚರಗೊಂಡಾಗ ಅವನಿಗೆ ಪ್ರತ್ಯಕ್ಷರಾದೆವು. ಇತರ ದೇವತೆಗಳೂ ಕೂಡ ಅಲ್ಲಿಗೆ ಬಂದರು. ಅದರಿಂದ ಮಹಿಷಾಸುರನಿಂದ ತಮಗಾದ ಸ್ಥಾನಭ್ರಷ್ಟತ್ವ, ಐಶ್ವರ್ಯನಾಶ ಮೊದಲಾದವುಗಳನ್ನು ತಿಳಿದೊಡನೆಯೇ ನಮಗೆ ಆ ದೈತ್ಯನ ಮೇಲೆ ಅರಿಯಾದ ಕೋಪವು ಉಕ್ಕಿತು. ಆ ಬಳಿಕ ನನ್ನ, ಮಹಾವಿಷ್ಣುವಿನ ಮತ್ತು ಬ್ರಹ್ಮದೇವನ, ಇಂದ್ರಾದಿಗಳ. ಅದರಂತೆಯೇ ಇತರ ದೇವತೆಗಳ ಮುಖದಿಂದ ಕೋಪಾಗ್ನಿಯು ಹೊರಬಿದ್ದು

Sri Vidyabharathi Book Centre, Sringeri

CC-O. In Public Domain. Digitized by eGangotri


ಮಹಾಟ್ಟಹಾಸಂ ಅಕರೋತ್ ‡ ರಿಪುಹೃತ್ಕಂಪಹೇತವೇ ।
ಶ್ರುತ್ವಾ ತಂ ನಿನದಂ ಘೋರಂ ‡ ಸಸೈನ್ಯೋ ಮಹಿಷಾಸುರಃ ॥೩೪॥

ಯೋದ್ಧುಂ ಅಭ್ಯಾಗತಸ್ತೇನ ‡ ಯುಯುಧೇ ಸಹಸಾಂಬಿಕಾ ।
ತತೋ ಯುದ್ಧೇ ಸಮಾರಬ್ಧೇ ‡ ತಯೋ ರ್ಲೋಕಭಯಂಕರೇ ॥೩೫॥

ಮಯಿವಿಷ್ಣೌ ಚ ಕೋಲರ್ಷೌ ‡ ಅಸ್ಥಾಸ್ವೇಕತ್ರ ಚ ತ್ರಿಷು ।
ಪಶ್ಯತ್ಸು ತದ್ವಿಶಸನಂ ‡ ಸೂಪವಿಷ್ಟೇಷು ಸತ್ಸ್ವಹಂ ॥೩೬॥
ಪೂರ್ವಂ ವಿನಿರ್ಗತಂ ತೇಜೋ ‡ ಗಿರಿಂ ನಿರುಪಮಂ ಪುನಃ ।
ಸ್ಮೃತ್ವಾ ತು ಧ್ಯಾನಸಾಮರ್ಥ್ಯಾತ್ ‡ ದೃಷ್ಟಂ ಶ್ರೀಪತೌ ಸ್ಫುಟಂ ॥೩೭॥

ಯತ್ರ ಕೋಲರ್ಷಿಣಾ ಲಿಂಗಂ ‡ ಪಾರ್ಥಿವಂ ಬಹುಧಾಽರ್ಚಿತಂ ।
ತತ್ರಾತಿಪಾವನೇ ಸ್ಥಾನೇ ‡ ಸರ್ವಲೋಕಹಿತಾಯ ಚ ॥೩೮॥

---

ಬಂದು ಮಹಾತೇಜಸ್ಸಿನಿಂದ ಕೂಡಿ ಉರಿಯಾಗಿ ಪರಿಣಮಿಸಿತು. ಉರಿಯುವ ಪರ್ವತದಂತೆ ಕಾಣಿಸಿಕೊಂಡ ಅದು ಒಂದು ಮಹಾ ಸ್ತ್ರೀ ರೂಪವನ್ನು ತಳೆಯಿತು. ಆ ದೇವತೆಯೇ ಆದಿಮಹಾಲಕ್ಷ್ಮಿ. ಆ ದೇವಿಯೇ ಸರ್ವದೇವಾತ್ಮಕವಾದ ಪರಾಶಕ್ತಿಸ್ವರೂಪಿಣಿ. ಈ ಶಕ್ತಿಸ್ವರೂಪಿಣಿಯು ಶತ್ರುಗಳಿಗೆ ನಡುಕ ಹುಟ್ಟುವಂತೆ ಮಹಾಟ್ಟಹಾಸವನ್ನು ವ್ಯಕ್ತಪಡಿಸಿದಳು. ಆ ಭಯಂಕರವಾದ ಅಟ್ಟಹಾಸದ ಧ್ವನಿಯನ್ನು ಕೇಳಿದ ಮಹಾಸುರನಾದ ಮಹಿಷನು ದೈತ್ಯಸೈನ್ಯದೊಡನೆ ಆ ದೇವಿಯೊಡನೆ ಯುದ್ಧಕ್ಕೆ ತೊಡಗಿದನು, ಅಂಬಿಕಾಸ್ವರೂಪಿಣಿಯಾದ ದೇವಿಯೂ ಅವನೊಡನೆ ಯುದ್ಧವನ್ನು ಮಾಡಲು ಆರಂಭಿಸಿದಳು. ಅವರಿಬ್ಬರಿಗೂ ಭಯಂಕರವಾದ ಯುದ್ಧವು ನಡೆಯುತ್ತಿರುವಾಗ ನಾನೂ, ವಿಷ್ಣುದೇವನೂ ಮತ್ತು ಕೋಲಮಹರ್ಷಿಯೂ ಒಂದೆಡೆಯಲ್ಲಿ ನಿಂತು ಅದನ್ನು ನಿರೀಕ್ಷಿಸಿದೆವು. ಆ ಘೋರ ಯುದ್ಧವನ್ನು ನೋಡುತ್ತಿರುವಂತೆಯೇ ನಾನು ಈ ಹಿಂದೆ ದೇವತೆಗಳಿಂದ ಹೊರಹೊರಟ

Sri Vidyabharathi Book Centre, Sringeri

CC-O. In Public Domain. Digitized by eGangotri


ಮಹತ್ ಜ್ಯೋತಿಃ ತದಲಿಖಂ ‡ ಅಹಂ ಯದ್ಧಿ ಪರಾತ್ಪರಂ ।
ಮಯಾತ್ರ ಲಿಖಿತಂ ಪ್ರಾಹುಃ ‡ ಲೋಕೇ ಶ್ರೀಚಕ್ರಮಿತ್ಯದಃ
॥ ೩೯ ॥

ಯಚ್ಚೈತನ್ಯಮಯಂ ಸಾಕ್ಷಾತ್ ‡ ಪ್ರಾಣರೂಪೇಣ ಸಂಸ್ಥಿತಂ
ಅಪರಿಚ್ಛೇದ್ಯಚರಿತಂ ‡ ಸಾಕ್ಷಾತ್ ಚಿದ್ಬಿಂಬಸನ್ಮಿತಂ ॥ ೪೦ ॥

ಮಹಾಭೂತಿ ಸಂಪ್ರೋತ ‡ ಸಹಸ್ರಾಜಾಂಡ ಮುಚ್ಛ್ರಿತಂ ।

ಪೂರ್ವಂ ಹಿ ಪ್ರಕೃತಿಃ ಸೇಯಂ ‡ ವಿತತ್ ಚಕ್ರಂ ಮಯಾ ಯತಃ ।
ಅತಃ ಶ್ರೀಚಕ್ರ ಮೇತದ್ಧಿ ‡ ವಿದ್ಧಿ ಸಾಕ್ಷಾತ್ ಶಿವಾತ್ಮಕಂ ॥ ೪೧ ॥

---

ಕೋಪಾಚಲೆಯ ಪರ್ವತವನ್ನು ಮನಸ್ಸಿನಲ್ಲಿ ಸ್ಮರಿಸಿ ವಿಷ್ಣುವು ನೋಡುತ್ತಿರು ವಂತೆಯೇ ನನ್ನ ಧ್ಯಾನಸಾಮರ್ಥ್ಯದ ಮೂಲಕ ಈ ಹಿಂದೆ ಕೋಲಮಹರ್ಷಿ ಯಿಂದ ಬಹುಭಕ್ತಿಪೂರ್ವಕವಾಗಿ ಪೂಜಿಸಲ್ಪಟ್ಟ ಪಾರ್ಥಿವಲಿಂಗವು ಪವಿತ್ರ ವಾದ ಎಡೆಯಲ್ಲಿ ಸಮಸ್ತಭಕ್ತರಿಗೂ ಉಪಕಾರ ಮಾಡಲೋಸುಗ ಆ ಸರ್ವ ಶ್ರೇಷ್ಠವಾದ ತೇಜಃಸ್ವರೂಪವನ್ನು ಸ್ಪಷ್ಟವಾಗಿ ಬರೆದನು.

ನನ್ನಿಂದ ರಚಿಸಲ್ಪಟ್ಟ ಆ ತೇಜೋಮಯ ಚಕ್ರವು ಶ್ರೀಚಕ್ರವೆಂದು ಲೋಕದಲ್ಲಿ ಪ್ರಸಿದ್ಧವಾಯಿತು. ಈ ಚಕ್ರವಾದರೋ ಸಾಕ್ಷಾತ್ ಚೈತನ್ಯ ಮಯವಾದ, ಪ್ರಾಣರೂಪದಿಂದ ನೆಲೆಸಿರುವಂಥದು. ವ್ಯಾಪಕವಾದ ಚರಿತ್ರೆಯನ್ನುಳ್ಳದು. ಅಲ್ಲದೆ ಸಾಕ್ಷಾತ್ ಚಿದ್ಬಿಂಬದಿಂದ ಕೂಡಿರುವಂಥದು, ಇದು ಸಹಸ್ರ ಬ್ರಹ್ಮಾಂಡಗಳನ್ನೂ ತನ್ನ ಮಹತ್ತಿನಿಂದ ಗ್ರಂಥಿಸಿರುವಂಥದು. ಹಿಂದೆ ಅಂದರೆ ಸೃಷ್ಟ್ಯಾದಿಯಲ್ಲಿ ಪ್ರಕೃತಿಸ್ವರೂಪವಾಗಿ ನನ್ನಿಂದ ರಚಿಸಲ್ಪಟ್ಟಿತು. ಮಹಾಲಕ್ಷ್ಮಿಯೇ ಆ ಪ್ರಕೃತಿ. ಈ ಕಾರಣದಿಂದ ಸಾಕ್ಷಾತ್ ಶಿವಾತ್ಮಕವಾದ ಅಂದರೆ ಮಂಗಳಾತ್ಮಕವಾದ ಶ್ರೀಚಕ್ರ ಎಂಬ ಹೆಸರು ಇದಕ್ಕೆ ಅನ್ವರ್ಥವಾದುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ತತೋऽಪಿ ವಿಷ್ಣುಃ ದೃಷ್ಟ್ವೇದಂ ‡ ಗೋಪಯಾಮಾಸ ಯತ್ನತಃ ।
ತಸ್ಯಾಕಾರವಿಮಂ ವಕ್ಷ್ಯೇ ‡ ಸಮಾಕರ್ಣಯ ಹೇ ಸುತ ॥ ೪೨ ॥
ಯಸ್ಯಾಸ್ತಿ ಪ್ರತಿಸಂಧಿವೃತ್ತಸಹಿತಂ ‡ ಮಧ್ಯಂ ಸ ಬಿಂದುಂ ಕ್ರಮಾತ್ ।
ರಾಮಾಷ್ಟಾರ್ಕ ಮಭೂಪವಿಂಶತಿಜನಾಃ ‡ ಕೋಣಾನ್ಯಥಾಷ್ಟಾ ನೃಪಾಃ ॥ ೪೩ ॥
ಷಟ್ತ್ರಿಂಶತ್ ಪಾಶರಾದಲಾನಿ ಪರಿತೋ ‡ ವೃತ್ತದ್ವಯಂ ಭೂಪುರಂ ।
ಶ್ರೀಚಕ್ರಂ ಪ್ರಕೃತೇರಿಂದು ಹಿ ಸಕಲಾ ‡ ಮತ್ಯೋರ್ನೇತ್ಥ-ತೇಜೋಮಯಂ ॥ ೪೪ ॥
ಏವಂ ವಿರಚಿತೇ ಜ್ಯೋತಿ ‡ ಶ್ಚಕ್ರೇ ಸತಿ ಷಡಾನನ ! ।
ನಿಯುಧ್ಯ ದೇವೀ ಸುಚಿರಂ ‡ ಅವಧೀತ್ ಮಹಿಷಾಸುರಂ ॥ ೪೫ ॥

---

ಇದಾದ ಬಳಿಕ ಶ್ರೀಮಹಾವಿಷ್ಣುದೇವನು ಇದರ ಮಹತ್ವನ್ನರಿತು ಸರ್ವಪ್ರಯತ್ನದಿಂದಲೂ ಇದನ್ನು ರಹಸ್ಯವಾಗಿ ಬೈಚಿಟ್ಟನು.

"ಪುತ್ರ ! ಇದರ ರಹಸ್ಯಾಕಾರವನ್ನು ವರ್ಣಿಸುತ್ತೇನೆ, ಗಮನವಿಟ್ಟು ಕೇಳು

ಇದರ ಮಧ್ಯದಲ್ಲಿ ಒಂದು ಬಿಂದು. ಅದರ ಸುತ್ತಲೂ ಒಂದು ತ್ರಿಕೋಣ, ಅಷ್ಟ (8) ಕೋಣ, ದ್ವಾದಶಕೋಣ (12). ಷೋಡಶ (16) ಕೋಣ, ವಿಂಶತಿಕೋಣ (20), ಚತುರ್ವಿಂಶತಿ (24) ಕೋಣಗಳು ಆ ಬಳಿಕ ಅಷ್ಟ (8) ದಳ, ಷೋಡಶಿ (16) ದಳ, ಷಟ್ತ್ರಿಂಶತಿ (36)ದಳ, ಪಂಚಾಶತ್ (50) ದಳ, ಅದರ ಸುತ್ತಲೂ ಎರಡು ಮಾತ್ರೆಗಳು, ಭೂಪುರಗಳು ಮೂರು, ಈ ಕ್ರಮದಲ್ಲಿ ಮಧ್ಯದ ಬಿಂದುವಿನಿಂದ ಪ್ರಾರಂಭಿಸಿ ಪಂಚಾಶತ್ (50) ದಳಗಳವರೆಗೂ ಹಬ್ಬಿರುವ ಇದರೆ ಹನ್ನೊಂದು ಸಂಧಿಗಳಲ್ಲಿಯೂ ಒಂದೊಂದು ವೃತ್ತವಿರುತ್ತದೆ. ಇದು ದಿವ್ಯವಾದ ತೇಜಸ್ಸಿನಿಂದ ಬೆಳಗುವಂಥದು. ಇಂತಹ ಜ್ಯೋತಿಶ್ಚಕ್ರದಲ್ಲಿ ನಿಂತು ದೇವಿಯು ಬಹುಕಾಲ ಹೋರಾಡಿ ಮಹಿಷಾಸುರನನ್ನು ಕೊಂದು ಕೆಡಹಿದಳು.

Sri Vidyabharathi Book Centre, Sringeri

CC-O. In Public Domain. Digitized by eGangotri



ಇತಿ ಸಮಸ್ತ ಸುರಾಸ್ಯವಿನಿರ್ಗತಾ ‡ ಜಿತಸಮಸ್ತಸುರಾರಿ
ಕದಂಬಕಾ ।
ಶತಸಹಸ್ರಸಹಸ್ರಕರದ್ಯುತಿಃ ‡ ಅತಿಸಹಸ್ರಜಯುಕ್ಸಮಸುಂದರೀ
॥ ೪೬ ॥

ಸುರಗಣಾರ್ಪಿತ ರತ್ನಲಸದ್ವರಾ- ‡ ಭರಣ-ವಸ್ತ್ರ-ಸುಮಾವಳಿ
ಭೂಷಿತಾ ।
ಕರಧೃತಾರಿದರಾಭಯದೇಷ್ಟದಾ ‡ ಹರಿಹರದ್ರುಹಿಣಾದಿ-
ಸಮರ್ಚಿತಾ ॥ ೪೭ ॥

ಅತಿಮುದಾನ್ವಿತ ದೈವತ ಸಂಸ್ತುತಾ ‡ ಸ್ಮಿತಮುಖಾಂಬುರುಹಾ
ಹರಿಸಂಸ್ಥಿತಾ ।
ಸ್ಮೃತಿಬಲಾದ್ವರದಾsತ್ರ ಸಮಾಗತಾ ‡ ಯತಿಪತಿಂ ಕಿಟಮೋ
ಸಮಭಾಷತ ॥ ೪೮ ॥

---

ಈ ಬಗೆಯಿಂದ ಹರಿಹರಬ್ರಹ್ಮಾದಿ ಸಮಸ್ತ ದೇವತೆಗಳ ಮುಖದಿಂದ ಹೊರಬಂದ ತೇಜೋರೂಪದಿಂದ ಉದ್ಭವಿಸಿದವಳಾಗಿಯೂ, ಸಮಸ್ತ ದೈತ್ಯರನ್ನೂ ಆ ಚಕ್ರದಲ್ಲಿ ನಿಂತು ಸಂಹರಿಸಿದವಳಾಗಿಯೂ, ಲಕ್ಷಾಂತರ ಸೂರ್ಯರ ಪ್ರಕಾಶದಂತೆ ಬೆಳಗುವವಳಾಗಿಯೂ, ಸಹಸ್ರಾರು ರತೀದೇವಿಯರನ್ನು ತನ್ನ ಸೌಂದರ್ಯರಾಶಿಯಿಂದ ಮೀರಿರುವಳಾಗಿಯೂ, ದೇವತೆಗಳ ಸಮೂಹದಿಂದ ಅರ್ಪಿತವಾದ ರತ್ನಗಳಿಂದ ಹೊಳೆಹೊಳೆವ ಕಿರೀಟ ತಾಟಂಕ (ಓಲೆ)ಹಾರಾದಿ ಭೂಷಣಗಳಿಂದ ಮೆರೆಯುವವಳಾಗಿಯೂ ಅಲ್ಲದೆ ಪೀತಾಂಬರ ಪುಷ್ಪಹಾರ ಇವುಗಳಿಂದಲಂಕೃತಳಾಗಿಯೂ ದೇವಿ ಮಹಾಲಕ್ಷ್ಮಿಯು ತನ್ನ ನಾಲ್ಕು ಕೈಗಳಿಂದ ಕ್ರಮವಾಗಿ ಶಂಖ, ಚಕ್ರ, ಅಭಯ ಮತ್ತು ವರದ ಮುದ್ರೆಗಳನ್ನು ಧರಿಸಿದವಳಾಗಿ, ಹರಿಹರಬ್ರಹ್ಮಾದಿಗಳಿಂದ ಪೂಜಿತಳಾಗಿ ಅತ್ಯಂತ ಭಕ್ತಿಭಾವಗಳಿಂದ ಕೂಡಿದ ದೇವಗಣಗಳಿಂದ ಹೊಗಳಲ್ಪಟ್ಟಳು.

Sri Vidyabharathi Book Centre, Sringeri

CC-O. In Public Domain. Digitized by eGangotri



ಶ್ರೀದೇವಿ ಉವಾಚ-

ಋಷೇ ! ವದ ಮಹಾಯೋಗಿನ್ ‡ ಯತ್ತೆ ಮನಸಿ ವರ್ತತೇ ।
ತದಿಷ್ಟಮಿಹ ದಾಸ್ಯೇಽಹಂ ‡ ತವಧ್ಯಾನಾತ್ ವಶೀಕೃತಾ ॥ ೪೯ ॥

ಋಷಿರುವಾಚ-

ದೇವೇಶಿ ! ಶ್ರೀಮಹಾಲಕ್ಷ್ಮಿ ! ‡ ಸರ್ವಚೈತನ್ಯರೂಪಿಣಿ ! ।
ತೇಜೋಮಯೇಽಸ್ಮಿನ್ ಶ್ರೀಚಕ್ರೇ ‡ ಶಿವೇನ ರಚಿತೇ ಶಿವೇ ।
॥ ೫೦ ॥

ನಿವಸ ತ್ವಂ ಹರೀಶಾಧ್ಯೈ ‡ ಸಹಿತಾ ಪರಯಾ ಮುದಾ ।
ಸಾ ತ್ವಂ ಮಯಾ ಆರಾಧನೀಯಾ ‡ ಚಿರಮಿತ್ಯೇವ ಮೇ ವರಃ
॥ ೫೧ ॥

ಈಶ್ವರ ಉವಾಚ-

ಇತಿ ವಿಜ್ಞಾಪಿತಾ ತೇನ ‡ ಶ್ರೀದೇವೀ ಲಿಂಗರೂಪಿಣೀ ।
ಉವಾಸ ಶ್ರೀಚಕ್ರ ಬಿಂದೌ ‡ ಯೇನವ್ಯಾಪ್ತಮಿದಂ ಜಗತ್ ॥ ೫೨ ॥

---

ಮಂದಹಾಸವನ್ನು ತೋರುತ್ತ ಕೋಲಮಹರ್ಷಿಯನ್ನು ಕುರಿತು ಹೀಗೆ ಹೇಳಿದಳು, ಮಹಾಯೋಗಿ, ನಿನ್ನ ಮನಭೀಷ್ಟವನ್ನು ತಿಳಿಸಿದುದಾದರೆ ಅದನ್ನು ಸಲ್ಲಿಸುತ್ತೇನೆ ಎಂದಳು. ಇದನ್ನು ಕೇಳಿ ಮುನಿಯು ದೇವಿಯನ್ನು ಕುರಿತು ಹೀಗೆ ಪ್ರಾರ್ಥಿಸಿಕೊಂಡನು-

"ದೇವತೆಗಳೆಲ್ಲರಿಗೂ ಒಡತಿಯೆನಿಸಿಕೊಂಡಿರುವ ಶ್ರೀ ಮಹಾಲಕ್ಷ್ಮೀ ! ಮತ್ತು ಸರ್ವಚೈತನ್ಯರೂಪಿಣೀ ! ಈ ಮಂಗಳಕರವೆನಿಸಿದ, ಸಾಕ್ಷಾತ್ ಈಶ್ವರನಿಂದಲೇ ರಚಿತವಾದ, ತೇಜಃಪುಂಜವಾದ ಈ ಶ್ರೀಚಕ್ರದಲ್ಲಿ ವಿಷ್ಣು, ಶಿವ ಇವರೇ ಮೊದಲಾದ ದೇವಶ್ರೇಷ್ಠರೊಡಗೂಡಿ ಸಂತೋಷದಿಂದ ನೆಲೆಸಿರುವವಳಾಗು. ಇದೇ ನಾನು ನಿನ್ನನ್ನು ಬಹುದಿನ ಆರಾಧನೆ ಮಾಡಿದ ಫಲವಾಗಿ ಬೇಡುತ್ತಿರುವ ವರ ಎಂದನು.

Sri Vidyabharathi Book Centre, Sringeri

CC-O. In Public Domain. Digitized by eGangotri



ಏವಮೇವಾತ್ರ ಯುಯುಜೇ ‡ ಹತ್ವಾ ವೇತ್ರಾಸುರಂ ಖಲಮ್
ವಿಷ್ಣೋಃ ಸಕಾಶಾತ್ ಉತ್ಪನ್ನಾ ‡ ಮಹಾ ಪೂರ್ವಾ ಹಿ
ವೈಷ್ಣವೀ ॥ ೫೩ ॥

ವಿಷ್ಣುಮಾಯಾ ಯಶೋದಾಯಾಃ ‡ ಪುತ್ರೀ ಲೋಕವಿಮೋಹಿನೀ ।
ಕಂಸಾಯ ಶಾಪಂ ದತ್ವಾ ಸಾ ‡ ದುರ್ಗಾಽಪ್ಯತ್ರೈವ
ಸಂಸ್ಥಿತಾ ॥ ೫೪ ॥

ಇತ್ಯತ್ರ ಶ್ರೀಮಹಾಲಕ್ಷ್ಮ್ಯಾಃ ‡ ನಿವಾಸಃ ಕಥಿತೋ ಮಯಾ ।
ಕ್ಷೇತ್ರಸಂಜ್ಞಾದಿ ಹೇತುಶ್ಚ ‡ ಶೃಣ್ವತಾಂ ಅಖಿಲಾರ್ಥದಃ ॥೫೫॥
ಇದಂ ಜೋತಿರ್ಮಯಂ ಲಿಂಗಂ ‡ ಪುಂ ಪ್ರಕೃತ್ಯಾತ್ಮಕಂ ಮಹತ್ ।
ಅಹಮಾದಿ ಸುರಶ್ರೇಷ್ಟ ‡ ವೃಂದಮೂಲಾಲಯಂ ಮತಮ್ ॥೫೬॥
ಯಲ್ಲಿಂಗ ದರ್ಶನಸಮುತ್ಥಫಲಂ ಸಹಸ್ರ-
ಸಲ್ಲಿಂಗ ದರ್ಶನ ಸಮುತ್ಥಫಲೇನ ತುಲ್ಯಂ ।
ತತ್ ಸಂಪ್ರತೀಹ ಸುತರಾಂ ಪ್ರಕಟೀಕೃತಂ ತೇ
ವಿಜ್ಞೇಯಮಸ್ತಿ ಕಿಮತಃ ಪರಮಾರ್ಯವರ್ಯ ! ॥೫೭॥

---

ಈ ಬಗೆಯಾಗಿ ಆ ಕೋಲಮುನಿಯು ಪ್ರಾರ್ಥಿಸಲಾಗಿ 'ಹಾಗೆಯೇ ಆಗಲಿ' ಎಂದು ಹೇಳಿ. ಆ ಶ್ರೀಚಕ್ರ ಬಿಂದುವಿನಲ್ಲಿ ದೇವಿಯು ಜಗತ್ತಿನಲ್ಲೆಲ್ಲ ವ್ಯಾಪಿಸಿಕೊಂಡಿರುವ ಲಿಂಗಸ್ವರೂಪಿಣಿಯಾಗಿ ನೆಲೆಸಿದಳು ॥೫೦॥ ಇದರಂತೆಯೇ ವಿಷ್ಣುಮಾಯೆಯಿಂದ ಉತ್ಪನ್ನಳಾದ 'ಮಹಾಪೂರ್ವಾ' ಎಂಬ ಮೂಲಪ್ರಕೃತಿಯು ದುಷ್ಟನಾದ ವೇತ್ರಾಸುರನನ್ನು ಕೊಂದು ಈ ಶ್ರೀಚಕ್ರದಲ್ಲಿ ನೆಲೆಸಿಡಳು. ॥೫೨॥

ಹೀಗೆಯೇ ವಿಷ್ಣುಮಾಯೆಯು ಲೋಕಗಳನ್ನು ಮೋಹಿಸುವವಳಾಗಿ ಯಶೋದಾದೇವಿಯ ಗರ್ಭದಲ್ಲಿ ಜನಿಸಿ ದುರ್ಗಾದೇವೀ ಎಂಬ ಹೆಸರನ್ನು ತಳೆದು ಕಂಸನಿಗೆ ಶಾಪವನ್ನು ಕೊಟ್ಟು ಶ್ರೀಚಕ್ರದಲ್ಲಿ ನೆಲಸಿದಳು ॥೫೩॥

ಈ ಬಗೆಯಾಗಿ ಈ ಕೋಲಾಪುರ ಕ್ಷೇತ್ರ ಎಂದು ಹೆಸರು ಬರುವುದಕ್ಕೆ ಕಾರಣವನ್ನೂ, ಶ್ರೀಮಹಾಲಕ್ಷ್ಮೀದೇವಿಯು ಇಲ್ಲಿ ನೆಲೆಸಿರುವುದಕ್ಕೆ ಕಾರಣವನ್ನೂ ನಿನಗೆ ತಿಳಿಸಿದನು.

Sri Vidyabharathi Book Centre, Sringeri

CC-O. In Public Domain. Digitized by eGangotri


ಸ್ಕಂದ ಉವಾಚ—

ತಪಃ ಕುರ್ವ ಸ ಕಂಹಾಖ್ಯಃ ‡ ಕಿಂ ಚಕಾರ ಮಹಾಸುರಃ ।
ಕೇನ ವಾ ನಿಹತಃ ತಾತ ! ‡ ವದ ಮೇ ಕರುಣಾಕರ ॥೫೮॥

ಈಶ್ವರ ಉವಾಚ—

ತಪಸ್ಯತಃ ತಸ್ಯ ದೈವ ‡ ಸ್ವತಮನ್ವಂತರೇ ಪುನಃ ।
ಅಷ್ಟಾವಿಂಶತ್ತಮೇ ತತ್ರ ‡ ದ್ವಾಪರೇಽಹಂ ಸುತೋಷಿತಃ ॥೫೯॥
ಯಾವತ್ ದದ್ಯೆಂ ಹಿ ಕಂಹಸ್ಯ ‡ ವರಾನ್ ತಾವತ್ ಭಯಾರ್ದಿತಾಃ ।
ದೇವಾಃ ಕೋಲಾಪುರಂ ಪ್ರಾಪ್ಯ ‡ ಮಹಾಲಕ್ಷ್ಮೀಂ ಪ್ರತಿಷ್ಟುವುಃ ॥೬೦॥

---

ಇದು ಕೇಳುವವರಿಗೂ ಹೇಳುವವರಿಗೂ ಸಕಲ ಪುರುಷಾರ್ಥಗಳನ್ನು ಕೊಡುವಂಥದು. ಈ ಜ್ಯೋತಿರ್ಮಯ ಲಿಂಗವು ಪ್ರಕೃತಿಪುರುಷರೆಂಬ ಸ್ತ್ರೀಪುರುಷಾತ್ಮಕವಾಗಿದೆಯಾದುದರಿಂದ ನಾನು ಮೊದಲಾಗಿ ಇತರ ದೇವತಾ ಶ್ರೇಷ್ಠರಿಗೆ ಆಶ್ರಯಸ್ಥಾನವಾಗಿದೆ. ॥೫೫॥ ಸ್ಕಂಧ ! ಕೇಳು. ಈ ಜ್ಯೋತಿರ್ಲಿಂಗದರ್ಶನ ಮಾತ್ರದಿಂದ ಸಹಸ್ರಲಿಂಗದರ್ಶನದಿಂದಾಗುವ ಫಲವು ಲಭಿಸ್ಯವುದು. ಈ ಕಾರಣದಿಂದ ಇದರ ವಿಷಯವನ್ನು ನಿನಗೆ ಪೂರ್ಣವಾಗಿ ತಿಳಿಯಹೇಳಿದ್ದೇನೆ. ಇದರ ವಿಷಯದಲ್ಲಿ ಇನ್ನೇನಾದರೂ ಹೆಚ್ಚಾಗಿ ತಿಳಿಯಬೇಕೆಂದಿದ್ದಲ್ಲಿ ಅದನ್ನು ವಿವರಿಸುತ್ತೇನೆ ಎಂದು ಈಶ್ವರನು ಸ್ಕಂದನನ್ನು ಕುರಿತು ಹೇಳಿದುದನ್ನು ಕೇಳಿ ಸ್ಕಂದನು 'ತಂದೆಯೇ ! ಕಂಹನೆಂಬ ಮಹಾಸುರನು ತಪಸ್ಸನ್ನಾಚರಿಸಿ ಏನು ಮಾಡಿದನು ? ಮತ್ತು ಯಾರಿಂದ ಅವನಿಗೆ ಮರಣವಾಯಿತು ? ಎಂಬುದನ್ನು ದಯವಿಟ್ಟು ತಿಳಿಸಲು ಕೋರುತ್ತೇನೆ' ಎಂದು ಕೇಳಿದನು.

ಇದಕ್ಕೆ ಉತ್ತರವಾಗಿ ಮಹೇಶ್ವರನು, 'ಸ್ಕಂದ ! ಕೇಳು. ಆ ಕಂಹಾಸುರನು ವೈವಸ್ವತಮನ್ವಂತರದ ಇಪ್ಪತ್ತೆಂಟನೆಯ ದ್ವಾಪರ ಯುಗದಲ್ಲಿ ನನ್ನನ್ನು ಕುರಿತು ಘೋರವಾದ ತಪಸ್ಸನ್ನಾಚರಿಸಿದನು. ಅದರಿಂದ ತುಷ್ಟನಾದ ನಾನು ಅವರಿಗೆ ವರಗಳನ್ನು ಕರುಣಿಸಿದೆನು. ಈ ವರಗಳನ್ನು ಪಡೆದು

Sri Vidyabharathi Book Centre, Sringeri

CC-O. In Public Domain. Digitized by eGangotri


ದೇವ ಊಚುಃ—

ನಮಸ್ತೇ ಜಗದ್ಧಾತ್ರಿ ! ಸತ್‌ಬ್ರಹ್ಮರೂಪೇ
ನಮಸ್ತೇ ಹರೋಪೇಂದ್ರ ದಾತ್ರಾದಿ ವಂದ್ಯೇ ।
ನಮಸ್ತೇ ಪ್ರಸನ್ನೇಷ್ಟದಾನೈಕ ದಕ್ಷೇ
ನಮಸ್ತೇ ಮಹಾಲಕ್ಷ್ಮಿ ! ಕೋಲಾಪುರೇಶಿ ॥೬೦॥

ವಿಧಿಃ ಕೃತ್ತಿವಾಸಾಃ ಹರಿಃ ವಿಶ್ವನೇತತ್
ಸೃಜತ್ಯತ್ತಿ ಪಾತೀತಿ ಯತ್ತತ್ ಪ್ರಸಿದ್ಧಂ ।
ಕೃಪಾಲೋಕನಾದೇವ ತೇ ಶಕ್ತಿರೂಪೇ
ನಮಸ್ತೇ ಮಹಾಲಕ್ಷ್ಮಿ ! ಕೋಲಾಪುರೇಶಿ ! ॥೬೧॥

---

ಆ ಕಂಸಾಸುರನು ದೇವತೆಗಳನ್ನು ಪೀಡಿಸಲು ಆರಂಭಿಸಿದನು. ಇದರಿಂದ ಭಯಪಟ್ಟ ದೇವತೆಗಳು ಕೋಲಾಪುರ ಕ್ಷೇತ್ರಕ್ಕೆ ಬಂದು ಅಲ್ಲಿ ನೆಲೆಸಿದ್ದ ಮಹಾಲಕ್ಷ್ಮೀದೇವಿಯನ್ನು ಕುರಿತು ಈ ಮುಂದಿನಂತೆ ಹೊಗಳತೊಡಗಿದರು.

'ಓ ಜಗನ್ಮಾತೆ! ನೀನು ಸತ್‌ಸ್ವರೂಪಿಯಾದ ಪರಬ್ರಹ್ಮಸ್ವರೂಪಿಣಿಯೇ ಹೌದು. ನಿನಗೆ ನಮಸ್ಕಾರ. ಅಲ್ಲದೆ ಶಿವ, ಉಪೇಂದ್ರ (ವಿಷ್ಣು). ಬ್ರಹ್ಮ ಎಂಬ ತ್ರಿಮೂರ್ತಿಗಳಿಂದ ವಂದ್ಯಳಾಗಿರುವವಳು ನೀನು. ಅದಕ್ಕಾಗಿ ನಿನಗೆ ನಮ್ಮ ವಂದನೆಗಳು. ಓ ತಾಯಿ ! ನಿನ್ನ ಅನುಗ್ರಹಕ್ಕೆ ಪಾತ್ರರಾದವರಿಗೆ ಇಷ್ಟಾರ್ಥಗಳನ್ನು ಸಲ್ಲಿಸತಕ್ಕವಳೆ ! ನಿನಗೆ ನಮಸ್ಕಾರ. ಭೋ ! ಕೋಲಾ ಪುರಕ್ಕೆ ಒಡೆಯಳಾದ ಓ ಮಹಾಲಕ್ಷ್ಮಿ ! ಇಗೋ ನಿನಗೆ ನಮಸ್ಕಾರ. ॥೬೦॥

ಬ್ರಹ್ಮನು, ಈಶ್ವರನು ಮತ್ತು ವಿಷ್ಣು ಈ ಮೂವರೂ ಕ್ರಮವಾಗಿ ಸೃಷ್ಟಿಸುವವನು, ಲಯಗೊಳಿಸುವವನು ಮತ್ತು ಕಾಪಾಡುವವನು ಎಂಬ ಕಾರ್ಯವನ್ನು ನೆರವೇರಿಸಿದರು ಎಂಬ ಸತ್ಯಾಂಶ ಯಾವುದುಂಟೋ ಅದನ್ನು ನಿರ್ವಹಿಸತಕ್ಕ ಶಕ್ತಿಯನ್ನು ಶಕ್ತಿಸ್ವರೂಪಿಣಿಯಾದ ನಿನ್ನ ಕೃಪಾನುಗ್ರಹ ದಿಂದಲೇ ಅವರು ಪಡೆದರು. ಅಂತಹ ಕೋಲಾಪುರವಾಸಿನಿಯಾದ ನಿನಗೆ ನಮಸ್ಕಾರವು. ॥೬೧॥

Sri Vidyabharathi Book Centre, Sringeri

CC-O. In Public Domain. Digitized by eGangotri



ತ್ವಯಾ ಮಾಯಯಾ ವ್ಯಾಪ್ತಮೇತತ್ ಸಮಸ್ತಂ
ಧೃತಂ ಲೀಲಯಾ ದೇವಿ ! ಕುಕ್ಷೌ ಹಿ ವಿಶ್ವಂ ।
ಸ್ಥಿತಂ ಬುದ್ಧಿರೂಪೇಣ ಸರ್ವತ್ರ ಜಂತೌ
ನಮಸ್ತೇ ಮಹಾಲಕ್ಷ್ಮಿ ! ಕೋಲಾಪುರೇಶಿ । ॥೬೩॥
ಯಯಾ ಭಕ್ತವರ್ಗಾಃ ಹಿ ಲಕ್ಷ್ಯಂತ ಏತೇ
ತ್ವಯಾತ್ರ ಪ್ರಕಾಮಂ ಕೃಪಾಪೂರ್ಣ ದೃಷ್ಟ್ಯಾ ।
ಅತೋ ಗೀಯತೇ ದೇವಿ ! ಲಕ್ಷ್ಮೀಃ ಇತಿ ತ್ವಂ
ನಮಸ್ತೇ ಮಹಾಲಕ್ಷ್ಮಿ ! ಕೋಲಾಪುರೇಶಿ ? ॥೬೪॥
ಪುನಃ ವಾಕ್ಪಟುತ್ವಾದಿಹೀನಾ ಹಿ ಮೂಕಾಃ
ನರೈಃ ತೈಃ ನಿಕಾಮಂ ಖಲು ಪ್ರಾರ್ಥ್ಯಸೇ ಯತ್ ।
ನಿಜೇಷ್ಟಾಪ್ತಯೇ ಹನ್ತ ಮೂಕಾಂಬಿಕಾ ತ್ವಂ
ನಮಸ್ತೇ ಮಹಾಲಕ್ಷ್ಮಿ ! ಕೋಲಾಪುರೇಶಿ ॥೬೫॥

---

ನಿಜವಾಗಿ ಹೇಳಬೇಕೆಂದರೆ ಈ ಸಮಸ್ತ ಜಗತ್ತು ಮಾಯಾಸ್ವರೂಪಿಣಿಯಾದ ನಿನ್ನಿಂದಲೇ ಆವರಿಸಲ್ಪಟ್ಟಿದೆ. ದೇವಿ ! ಈ ವಿಶ್ವವೆಲ್ಲವನ್ನೂ ನಿನ ಕುಕ್ಷಿಯಲ್ಲಿಯೇ ಲೀಲೆಯಿಂದ ಧರಿಸುತ್ತಿ. ಅಲ್ಲದೆ ಸಮಸ್ತ ಜಂತುಜಾಲಗಳಲ್ಲಿ ನೀನು ಬುದ್ಧಿರೂಪದಿಂದ ನೆಲೆಸಿರುತ್ತಿ. ಈ ಕಾರಣದಿಂದ ಸಮಸ್ತಕ್ಕೂ ನೀನೇ ಆಶ್ರಯಭೂತಳಾದುದರಿಂದ ಕೋಲಾಪುರ ವಾಸಸ್ಥಳಾದ ಮಹಾಲಕ್ಷ್ಮೀದೇವಿ ! ಇದೋ ನಿನಗೆ ನಮ್ಮ ನಮಸ್ಕಾರಗಳು. ॥೬೩॥

ಯಾವ ದೇವಿಯು ತನ್ನ ಅವಿಚ್ಛಿನ್ನಭಕ್ತರಾದ ಈ ದೇವತೆಗಳನ್ನು ತನ್ನ ಕರುಣಾದೃಷ್ಟಿಯಿಂದ ಅನುಗ್ರಹಿಸುವಳೋ, ಈ ಕಾರಣದಿಂದಲೇ ಮಹಾಲಕ್ಷ್ಮೀ ಎಂಬ ಅನ್ವರ್ಥನಾಮದಿಂದ ಅವರು ನಿನ್ನನ್ನು ಹೊಗಳುತ್ತಿರುವರೋ ಅಂತಹ ಕೋಲಾಪುರ ನಿವಾಸಿನಿಯಾದ ಮಹಾಲಕ್ಷ್ಮೀದೇವಿ! ಇದೋ ನಿನಗೆ ನಮ್ಮ ನಮಸ್ಕಾರವು. ॥೬೪॥

ಭೋ ದೇವಿ ! ನಿನ್ನನ್ನು ಬಾಯಿತುಂಬ ಹೊಗಳುವುದಕ್ಕೆ ವಾಕ್ಪಟುತ್ವ ಸಾಲದೆ ಯಾರು ಮೂಕರಾಗಿರುತ್ತಾರೋ ಅಂತಹವರ ಇಷ್ಟಕಾಮ್ಯಗಳನ್ನು ನೀನು ದಯೆಯಿಂದ [illegible] ಆದರಿಂದ ನೀನು

Sri Vidyabharathi Book Centre, Sringeri

CC-O. In Public Domain. Digitized by eGangotri


ಯದದ್ವೈಕರೂಪಾತ್ ಪರಬ್ರಹ್ಮಣ ಸ್ತ್ವಂ –
ಸಮುತ್ಥಾ ಪುನಃ ವಿಶ್ವಲೀಲೋದ್ಯಮಸ್ಥಾ ।
ತದಾಹುಃ ಜನಾಃ ತ್ವಾಂ ಹಿ ಗೌರೀಂ ಕುಮಾರೀಂ
ನಮಸ್ತೇ ಮಹಾಲಕ್ಷ್ಮಿ ! ಕೋಲಾಪುರೇಶಿ ! ॥೬೬॥

ಹರೇಶಾದಿ ದೇಹೋತ್ಥತೇಜೋಮಯ-
ಪ್ರಸ್ಫುರತ್ ಚಕ್ರರಾಜಾಖ್ಯ ಲಿಂಗಸ್ವರೂಪೇ ।
ಮಹಾಯೋಗಿಕೋಲರ್ಷಿಹೃತ್ಪದ್ಮಗೇಹೇ
ನಮಸ್ತೇ ಮಹಾಲಕ್ಷ್ಮಿ ! ಕೋಲಾಪುರೇಶಿ ! ॥೬೭॥

---

ನಿಜವಾಗಿಯೂ ಮೂಕಾಂಬಿಕೆಯೇ ಸರಿ. ಅಂದರೆ ಮೂಕರ ಇಷ್ಟಾರ್ಥಗಳನ್ನು ಸಲ್ಲಿಸಬಲ್ಲ ದೇವಿಯೇ ಹೌದು. ಇಂತಹ ಕೋಲಾಪುರವಾಸಿನಿಯಾದ ಮಹಾಲಕ್ಷ್ಮಿಗೆ ನಮ್ಮ ಭಕ್ತಿಪೂರ್ವಕವಾದ ನಮಸ್ಕಾರಗಳು. ॥೬೪॥

ಭೋ ದೇವಿ ! ಯಾವ ಕಾರಣದಿಂದ ಪರಬ್ರಹ್ಮಸ್ವರೂಪಿಣಿಯಾಗಿ ಅವತರಿಸಿ ಈ ವಿಶ್ವದ ಆಗುಹೋಗುಗಳಿಗೆ ಕಾರಣಳಾಗಿರುವೆಯೋ, ಆದ ರಿಂದಲೇ ಜ್ಞಾನಿಗಳು ನಿನ್ನನ್ನು ಗೌರೀ, ಕುಮಾರೀ ಎಂಬ ಅನ್ವರ್ಥನಾಮಗಳಿಂದ ಹೊಗಳಲ್ಪಡುತ್ತಿರುವೆಯೋ ಅಂತಹ ಕೋಲಾಪುರನಿವಾಸಿನಿಯಾದ ಮಹಾಲಕ್ಷ್ಮಿಗೆ ನಮ್ಮ ನಮಸ್ಕಾರಗಳು. ॥೬೫॥

ವಿಷ್ಣು, ಈಶ್ವರರೇ ಮೊದಲಾದ ದೇವಶ್ರೇಷ್ಠರ ದೇಹದಿಂದುದಿಸಿದ ತೇಜೋಮಯವಾದ ಚಕ್ರರಾಜಾಕಾರವನ್ನು ಧರಿಸಿ ಲಿಂಗರೂಪಿಣಿಯಾಗಿರುವ ದೇವಿ ! ಅಲ್ಲದೆ ಮಹಾಯೋಗಿಯಾದ ಕೋಲರ್ಷಿಯ ಹೃದಯದಲ್ಲಿ ಸದಾ ನೆಲಸಿರುವ ಮಹಾಲಕ್ಷ್ಮಿ ದೇವಿ ! ನಿನಗೆ ನಾವರ್ಪಿಸುವ ವಂದನೆಗಳು ಸಲ್ಲಲಿ. ॥೬೬॥

Sri Vidyabharathi Book Centre, Sringeri

CC-O. In Public Domain. Digitized by eGangotri

ನಮಃ ಶಂಖಚಕ್ರಾಭಯಾಭೀಷ್ಟಹಸ್ತೇ !
ನಮಸ್ತೇಂಬಿಕೇ ! ಗೌರಿ ! ಪದ್ಮಾಸನಸ್ಥೇ !
ನಮಃ ಸ್ವರ್ಣವರ್ಣೇ ! ಪ್ರಸನ್ನೇ ! ಶರಣ್ಯೇ !
ನಮಸ್ತೇ ಮಹಾಲಕ್ಷ್ಮಿ ! ಕೋಲಾಪುರೇಶಿ ॥೬೮॥

ಇದಂ ಸ್ತೋತ್ರರತ್ನಂ ಕೃತಂ ಸರ್ವದೇವೈಃ
ಹೃದಿ ತ್ವಾಂ ಸಮಾಧಾಯ ಲಕ್ಷ್ಮ್ಯಷ್ಟಕಂ ಯಃ ।
ಪಠೇತ್ ನಿತ್ಯಂ ಏಷಃ ವ್ರಜತ್ಯಾಶು ಲಕ್ಷ್ಮೀಂ
ಸವಿದ್ಯಾಂ ಚ ಸತ್ಯಂ ಭವತ್ಯಾಃ ಪ್ರಸಾದಾತ್ ॥೬೯॥

---

ದೇವಿ ! ಶಂಖ, ಚಕ್ರ. ಅಭಯ ಮತ್ತು ವರದ ಈ ಸೂಚಕಗಳನ್ನು ಕೈಯಲ್ಲಿ ಧರಿಸಿದವಳೆ ! ಲೋಕಮಾತೆಯೆನಿಸಿದ ಅಂಬಿಕೆಯೇ ! ಗೌರವರ್ಣದಿಂದ ಬೆಳಗುವ ಗೌರೀದೇವಿಯೇ ! ಪದ್ಮಾಸನವನ್ನು ಹಾಕಿಕೊಂಡು ಕುಳಿತಿರುವವಳೇ ! ನಿನಗೆ ಪುನಃಪುನಃ ನಮ್ಮ ವಂದನೆಗಳು. ಅಲ್ಲದೆ ಬಂಗಾರಬಣ್ಣದ ಶರೀರಕಾಂತಿಯುಳ್ಳವಳೂ, ಪ್ರಸನ್ನಾತ್ಮಳೂ. ಭಕ್ತರಿಗೆ ಆಶ್ರಯದಾತಳೂ ಆದ ಕೋಲಾಪುರನಿವಾಸಿನಿಯಾದ ಮಹಾಲಕ್ಷ್ಮಿ!ನಿನಗೆ ನಮ್ಮ ನಮಸ್ಕಾರ||೬೮||

ಹೇ ಸ್ಕಂದ ! ಸಮಸ್ತ ದೇವತೆಗಳೂ ದೇವಿಯನ್ನು ಕುರಿತು ಹೊಗಳುವ ಈ ಸ್ತುತಿರತ್ನವನ್ನು ಅಂದರೆ ಶ್ರೀ ಮಹಾಲಕ್ಷ್ಮಿಯ ಅಷ್ಟಕವನ್ನು ನಿನ್ನ ಹೃದಯದಲ್ಲಿ ಚೆನ್ನಾಗಿ ಮನಗಂಡು ಸಮಾಧಾನ ಹೊಂದು. ಯಾವನು ಈ ಸ್ತೋತ್ರರತ್ನವನ್ನು ನಿತ್ಯವೂ ಪಠಿಸುತ್ತಾನೆಯೋ ಅವನು ಶ್ರೀ ಮಹಾಲಕ್ಷ್ಮೀದೇವಿಯ ಅನುಗ್ರಹಕ್ಕೆ ಪಾತ್ರನಾಗಿ ಆ ದೇವಿಯನ್ನೇ ಪಡೆಯುವುದು ನಿಶ್ಚಯ. ಅಲ್ಲದೆ ಆ ಮಹಾಲಕ್ಷ್ಮಿಯ ನಿಶ್ಚಯ ಜ್ಞಾನವನ್ನೂ ಗಳಿಸುತ್ತಾನೆ ಎಂದು ಈಶ್ವರನು ಸ್ಕಂದನನ್ನುದ್ದೇಶಿಸಿ ಹೇಳಿದನು.

Sri Vidyabharathi Book Centre, Sringeri

CC-O. In Public Domain. Digitized by eGangotri



ಈಶ್ವರ ಉವಾಚ—

ಇತಿ ಸ್ತುತಮಹಾಲಕ್ಷ್ಮೀಃ ‡ ಶ್ರೀಮತ್ ಕೋಲಾಪುರೇಶ್ವರೀ ।
ಸ್ತೋತ್ರೇಣಾನೇನ ಸಂತುಷ್ಟಾ ‡ ಪ್ರತ್ಯಕ್ಷಂ ಪ್ರಾಹ ತಾನ್ ಸುರಾನ್ ॥೨೦॥

ಶ್ರೀದೇವೀ ಉವಾಚ—

ದೇವಾಃ ಕಿಮರ್ಥಮಾಗತ್ಯ ‡ ಸ್ತುವಂತೋಽತ್ರ ಭಯಾತುರಾಃ ।
ಯೂಯಂ ತದ್ವದತೇದಾನೀಂ ‡ ಕರಿಷ್ಯೇಯುಷ್ಮದೀ ಪ್ಸಿತಂ ॥೨೧॥

ದೇವಾ ಊಚುಃ —

ದೇವಿ ! ಕಂಹಾಸುರೋ ನಾಮ ‡ ಸರ್ವಪ್ರಾಣಿಭಯಂಕರಃ ।
ಸಃ ಕುರ್ವನ್ ಸುಪ್ರಸನ್ನಾ- ‡ ದೀಶಾತ್ ಲಬ್ಧವರೋ ಯದಿ ॥೨೨॥

ತದಾ ಸರ್ವೈಃ ಸೋಽವಧ್ಯಃ ಸ್ಯಾತ್ ‡ ಅತಸ್ತ್ವಂ ಅಧುನಾಂಬಿಕೇ ।
ಯದಾ ನ ವರಯೇತ್ ಇಷ್ಟಾನ್ ‡ ತಥೈವ ಕುರು ತಂ ದ್ರುತಂ ॥೨೩॥

---

ಈ ಬಗೆಯಾಗಿ ದೇವತೆಗಳಿಂದ ಸ್ತುತಿಸಲ್ಪಟ್ಟ ದೇವಿಯು ಸಂತುಷ್ಟಳಾಗಿ ದೇವತೆಗಳಿಗೆ ಪ್ರತ್ಯಕ್ಷಳಾಗಿ, ಅವರನ್ನು ಕುರಿತು ಈ ಮುಂದಿನಂತೆ ಹೇಳಿದಳು :-

"ಭೋ ದೇವತೆಗಳೇ ! ಏನು ಕಾರಣ ನೀವು ಭಯಗ್ರಸ್ತರಾಗಿ ನನ್ನನ್ನು ಸ್ತುತಿಸುತ್ತಿದ್ದೀರಿ ? ಅದನ್ನು ನನಗೆ ತಿಳಿಸಿರಿ. ನಿಮ್ಮ ಭೀಷ್ಟವನ್ನು ಈಗಲೇ ಸಲ್ಲಿಸುತ್ತೇನೆ", ಇದನ್ನು ಕೇಳಿ ದೇವತೆಗಳು ದೇವಿಯನ್ನು ಕುರಿತು ಈ ಮುಂದಿನಂತೆ ತಿಳಿಸಿದರು. "ಭೋ ದೇವಿ! ಕಂಹಾಸುರನೆಂಬುವನೊಬ್ಬನಿದ್ದಾನೆ ಅವನು ಸಮಸ್ತರಿಗೂ ಭಯವನ್ನುಂಟುಮಾಡುತ್ತಿದ್ದಾನೆ. ಅವನು ಈ ಸರ್ವಾಧೀಶನಾದ ಮಹಾದೇವನನ್ನು ಕುರಿತು ಘೋರವಾದ ತಪಸ್ಸನ್ನಾಚರಿಸಿ ಯಾರಿಂದಲೂ ಮರಣವಾಗದಿರಲೆಂಬ ವರವನ್ನು ಪಡೆದವನಾಗಿದ್ದಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri



ಈಶ್ವರ ಉವಾಚ—

ಇತಿಪ್ರಾರ್ಥಿತಾಸೌ ಸುರೌಘೈಃ ಅವೋಚತ್ ‡ ಚಕಾರ ಕ್ಷಣಾದೇವ
ಕಂಹಂ ಯತೋಽತಃ ।

ತದಾರಭ್ಯ ಲಕ್ಷ್ಮೀಸ್ತು ಮೂಕಾಂಬಿಕೇತಿ ‡ ಪ್ರಸಿಧ್ಯಾವಿಶೇಷಾತ್
ಸಮೂಕಾಸುರಶ್ಚ ॥೭೪॥

ಕದಾಚಿತ್ ಕ್ಷಿತಾ ಕ್ಷೀಯತೇ ದೇವತಾನಾಂ
ಪ್ರಭಾವಃ ಕದಾ ತ್ ವರ್ಧತೇ ಚ ।
ಅತಃ ಕಾಲವೈ ಚಿತ್ರ್ಯತೋಽಸ್ಮಿನ್ ಸ್ಥಲೇಽಪಿ
ಕ್ವಚಿತ್ ತತ್ ಚಿತ್ ಉಲ್ಲಾಸತೇ ವ್ಯಸ್ತಕಾಲೇ ॥೭೫॥

ಅಥಾಲಬ್ಧಕಾಮೋ ವೃಥಾಲಬ್ಧಿ ಖೇದೋ
ಯತೋಽನಲ್ಪ ಕ್ರೋಧೋಽತ್ರ ಮೂಕಾಸುರೋಽಸೌ ।
ಸಮಾಗತ್ಯ ಸರ್ವಂ ಜಗತ್ಪೀಡಯನ್ ಸನ್
ಚಚಾರಾಥ ದೇವೈಃ ಸ್ತುತಾ ಪಾರ್ವತೀ ಸಾ ॥೭೬॥

---

ಆ ಕಾರಣದಿಂದ ಅಂಬಿಕಾದೇವಿಯು ಅವನು ಯಾವ ವರವನ್ನೂ ಬೇಡದಿರುವಂತೆ ಅವನನ್ನು ಮೂಕನನ್ನಾಗಿ ತಕ್ಷಣವೆ ಮಾಡು" ಎಂದು ಕೇಳಿಕೊಂಡರು. ಈಶ್ವರನು ಸ್ಕಂದನನ್ನು ಕುರಿತು ಮುಂದುವರಿಸಿ ಈ ಬಗೆಯಾಗಿ ದೇವತೆಗಳಿಂದ ಪ್ರಾರ್ಥಿತಳಾದ ಮಹಾಲಕ್ಷ್ಮೀದೇವಿಯು ತಕ್ಷಣದಲ್ಲಿಯೇ ಆ ರಾಕ್ಷಸನಿಗೆ ಮಾತು ಬರದಂತೆ ಅವನನ್ನು ಮೂಕನನ್ನಾಗಿ ಮಾಡಿಬಿಟ್ಟಳು. ಈ ಕಾರಣದಿಂದ ಆ ರಾಕ್ಷಸನು ಮೂಕಾಸುರನೆನಿಸಿದನು. ಹೀಗೆ ಆ ದೇವಿಯು ಮೂಕಾಂಬಿಕಾ ಎಂಬ ಅನ್ವರ್ಥನಾಮವನ್ನು ಗಳಿಸಿದಳು. ಈ ಬಗೆಯಾಗಿ ದೇವತೆಗಳ ಪ್ರಭಾವವು ಕೆಲವು ಕಾಲ ಭೂಮಿಯಲ್ಲಿ ಕಳೆಗುಂದುತ್ತದೆ, ಮತ್ತೆ ಕೆಲವುಕಾಲ ವೃದ್ಧಿಯಾಗುತ್ತದೆ, ಈ ಕಾರಣಕ್ಕಾಗಿ ಈ ಸ್ಥಳದಲ್ಲಿಯೂ ಕಾಲವೈಚಿತ್ರ್ಯದಿಂದ ಅಂದರೆ ಆಯಾ ಕಾಲಕ್ಕೆ ತಕ್ಕಂತೆ ಆ ಚಿತ್‌ಶಕ್ತಿಯು ವೃದ್ಧಿಹೊಂದುತ್ತದೆ ಮತ್ತೆ ಕೆಲವುಕಾಲ ಅದು ಕಳೆಗುಂದುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri



ತತೋ ವೀರಭಕ್ತೇಭವಕ್ತ್ರಾದಿಯುಕ್ತಾ
ಸಮಂ ಸ್ವಪ್ರಿಯೇಣಾಪಿ ಕೋಲಾಪುರೇಽಸ್ಮಿನ್ ।
ನಿಯುಧ್ಯಾಽಮುನ್ಯಾನೇಕಥಾ ಜ್ಯೇಷ್ಠಮಾಸೇ
ವಳಕ್ಷೇ ಚ ಪಕ್ಷೇಽಷ್ಟಮೀ ಮಧ್ಯರಾತ್ರೇ ॥೭೭।

ಶಿರಃ ಖಂಡಯಿತ್ವಾಽರಿಣಾ ತಸ್ಯ ಮೂಕಾ
ಸುರಸ್ಯಾಥ ನಾಥೇನ ಸಾರ್ಧಂ ಭವಾನೀ ।
ಮುದಾಽಖಂಡಸತ್‌ಚಿತ್-ಬ್ರಹ್ಮಲಿಂಗಂ
ಮಹತ್ ಚಕ್ರ ಬಿಂದ್ವಾಷ್ಟಕಂ ತದ್ಯುಯೋಜ ॥೭೮॥

ಇತಿ ಸರ್ವಂ ಸಮಾಖ್ಯಾತಂ ‡ ಮೂಕಾಸುರವಧಾಶ್ರಿತಂ ।
ಮೂಕಾಂಬೇತಿ ನಾಮ್ನೋಽಪಿ ‡ ಕಾರಣಂ ಪುಣ್ಯಕಾರಣಂ ॥೭೯॥
ಯಾ ಹತ್ವಾ ಮಹಿಷಾಸುರಂ ಶಿವಕೃತ ‡ ಶ್ರೀಚಕ್ರಬಿಂದ್ವಾತ್ಮಕಂ
ಯದ್ವಾಹಾರಿವಥೋತ್ಸ್ನ ಕಾಮರಜತೇ ‡ ಜ್ಯೋತಿರ್ಲಿಂಗ
ಮೇತನ್ಮಯಾ ॥

---

ಈ ಮೂಕಾಸುರನು ಒಂದಾನೊಂದು ಕಾಲದಲ್ಲಿ ತಾನು ತಪಸ್ಸಿನ ಮೂಲಕ ಇಷ್ಟಾರ್ಥಗಳನ್ನು ಪಡೆದವನಾಗಿ ಆದರೂ ವ್ಯರ್ಥವಾದ ಖೇದವನ್ನು ಹೊಂದಿದವನಾಗಿ ಅಪರಿಮಿತ ಕ್ರೋಧವನ್ನು ತಳೆದು ಇಲ್ಲಿಗೆ ಬಂದು ಸಮಸ್ತ ಲೋಕಗಳನ್ನೂ ಪೀಡಿಸುತ್ತ ಈ ಕ್ಷೇತ್ರದಲ್ಲಿ ಸಂಚರಿಸತೊಡಗಿದನು. ಇದಕ್ಕಾಗಿ ದೇವತೆಗಳು ಇಲ್ಲಿ ವಾಸವನ್ನು ಪಡೆದ ಪಾರ್ವತೀದೇವಿಯನ್ನು ಸ್ತುತಿಸಲು ಆ ದೇವಿಯು ತನ್ನ ಮಕ್ಕಳಾದ ವೀರಭದ್ರ ಮತ್ತು ಗಣಪತಿ ಇವರಿಂದಲೂ ಅಲ್ಲದೆ ತನ್ನ ಪ್ರಿಯನಾದ ಮಹೇಶ್ವರನಿಂದಲೂ ಕೂಡಿಕೊಂಡು ಕೋಲಾಪುರ ಕ್ಷೇತ್ರದ ಸಮೀಪದಲ್ಲಿ ಆ ರಕ್ಕಸನೊಡನೆ ಘೋರಯುದ್ಧವನ್ನು ನಡೆಸಿ ಕಡೆಗೆ ಜ್ಯೇಷ್ಠ ಶುಕ್ಲ ಅಷ್ಟಮೀ ತಿಥಿಯ ಮಧ್ಯರಾತ್ರಿಯಲ್ಲಿ ಆ ಅಸುರನ ಶಿರಸ್ಸನ್ನು ಕತ್ತರಿಸಿದಳು. ಆ ಬಳಿಕ ಆ ಭವಾನೀದೇವಿಯು ಸಂತೋಷದಿಂದ ತೇಜೋಮಯವಾದ ಶ್ರೀ ಚಕ್ರ ಬಿಂಬರೂಪವಾದ ಅಖಂಡ ಸತ್‌ಚಿತ್ ಆನಂದವೆಂಬ ಪರಬ್ರಹ್ಮಸ್ವರೂಪವಾದ ಲಿಂಗವನ್ನು ಪ್ರವೇಶಿಸಿದಳು. ।೭೮॥

Sri Vidyabharathi Book Centre, Sringeri

CC-O. In Public Domain. Digitized by eGangotri



ಶ್ರೀ ಕೋಲಾಪುರ ಮಾಶ್ರಿತಾ ಖಲು ‡ ಮಹಾಲಕ್ಷ್ಮೀಃ
ಜಗದ್ಭೂತಯೇ
ಸಾ ದೇವೀ ತ್ರಿಗುಣಾಶ್ರಿತಾವನರತಾ ‡ ಮೂಕಾಂಬಿಕಾ ಪಾತು ನಃ ||

ಇತಿ ಶ್ರೀ ಕೋಲಾಪುರಕ್ಷೇತ್ರಮಾಹಾತ್ಮ್ಯೇ ದೇವೀನಿವಾಸ
ನಿರೂಪಣಂ ನಾಮಪ್ರಥಮೋಽಧ್ಯಾಯಃ ||

---

ಈ ಒಗೆಯಾಗಿ ಮೂಕಾಸುರವಧೆಯಲ್ಲಿ ಕೊನೆಗೊಂಡ ಮೂಕಾಂಬಿಕಾ ದೇವಿಯ ಕಥೆಯನ್ನು ಅಲ್ಲಿದೆ ಆ ದೇವಿಗೆ "ಮೂಕಾಂಬಿಕಾ" ಎಂಬ ಅನ್ವರ್ಥ ನಾಮದ ಗಳಿಕೆಯುಂಟಾದ ಬಗೆಯನ್ನು ಸಮಸ್ತವನ್ನು ತಿಳಿಸಿದುದಾಯಿತು. ಈ ಆಖ್ಯಾನವನ್ನು ಕೇಳುವವರಿಗೂ ಮತ್ತು ಹೇಳುವವರಿಗೂ ಪುಣ್ಯವನ್ನು ಗಳಿಸಿಕೊಡುವುದು ||೭೯||

ಯಾವ ಮಹಾದೇವಿಯು ಕ್ರೂರನಾದ ಮಹಿಷಾಸುರನನ್ನು ಸಂಹರಿಸಿ ಜಗತ್ತಿನ ಶ್ರೇಯೋಭಿವೃದ್ಧಿಗಾಗಿ ಸಾಕ್ಷಾತ್ ಶಿವನಿಂದಲೇ ನಿರ್ಮಿತವಾದ ಶ್ರೀಚಕ್ರಬಿಂದುಸ್ವರೂಪವೆನಿಸಿದ ಮತ್ತು ಆ ಅಸುರನಿಂದ ಪೀಡಿತವಾದ ವಿಷ್ಣುವೆ ಮೊದಲಾದ ದೇವತೆಗಳಿಂದ ಸ್ತುತಿಸಲ್ಪಟ್ಟು ಅವರ ಇಷ್ಟಾರ್ಥವನ್ನು ನೆರವೇರಿಸಲು ಪ್ರತ್ಯಕ್ಷಳಾಗಿ ಆ ಮಹಿಷಾಸುರನನ್ನು ವಧಿಸಿ ಬಳಿಕ ತೇಜೋಮಯವಾದ ಲಿಂಗಸ್ವರೂಪವನ್ನು ತಳೆದು, ಕೋಲಾಪುರ ಕ್ಷೇತ್ರವನ್ನು ತನ್ನ ನಿವಾಸಸ್ಥಾನವನ್ನಾಗಿ ಮಾಡಿಕೊಂಡು, ತನ್ನ ಭಕ್ತರನ್ನು ರಕ್ಷಿಸಲು ಉದ್ಯುಕ್ತಳಾಗಿ, ಸತ್ವರಜಸ್ತಮೋಗುಣಗಳಿಂದ ಕೂಡಿ ಅಂದರೆ ತ್ರಿಗುಣಾತ್ಮಿಕೆಯಾಗಿ ಆಶ್ರಿತ ರಕ್ಷಕಳಾಗಿ, ಮೂಕಾಂಬಿಕಾ ಎಂಬ ಪ್ರಸಿದ್ಧವಾದ ನಾಮವನ್ನು ಧರಿಸಿದ ಶ್ರೀಮಹಾಲಕ್ಷ್ಮೀಸ್ವರೂಪಿಣಿಯಾದ ಆ ದೇವಿಯು ನಮ್ಮೆಲ್ಲರನ್ನೂ ರಕ್ಷಿಸಲಿ,

ಇಲ್ಲಿಗೆ ಸ್ಕಾಂದಪುರಾಣದೊಳಗಿನ ಶ್ರೀ ಕೋಲಾಪುರಕ್ಷೇತ್ರಮಹಾತ್ಮ್ಯೆಯ ಪ್ರಕರಣದಲ್ಲಿ ಮೊದಲನೆಯ ಅಧ್ಯಾಯವು ಮುಗಿಯಿತು,

Sri Vidyabharathi Book Centre, Sringeri

CC-O. In Public Domain. Digitized by eGangotri


## ದ್ವಿತೀಯೋಽಧ್ಯಾಯಃ

ಸ್ಕಂದ ಉವಾಚ—

ದೇವೇಶ ! ಭಗವನ್ । ಅತ್ರ ‡ ಶ್ರೀದೇವ್ಯಾಃ ಅರ್ಚನಕ್ರಮಂ ।
ಕೈಃ ಕೈಃ ಪುರಾರ್ಚಿತಾ ಸೇಯಂ ‡ ಇತ್ಯೇತಚ್ಚ ವದಸ್ವ ಮೇ ॥೧॥

ಈಶ್ವರ ಉವಾಚ—

ಆಕರ್ಣಯ ಆಗ್ನಿ ಭೂಃ ಪೂರ್ವಂ ‡ ಭಗವಾನ್ ಕಮಲಾಪತಿಃ ।
ದೇವೇಂದ್ರಾಯ ಯದಾಹಾದ್ಯ ‡ ತದೇವ ಕಥಯಾಮ್ಯಹಂ ॥೨॥

ಕದಾಚಿತ್ ಅಮರಾವತ್ಯಾಂ ‡ ಮೋಹಿನೀ ರೂಪಭೃತ್ ಹರಿಃ ।
ಹತ್ವಾ ವ್ಯಾಳಾಸುರಂ ನಾಮ ‡ ಘೋರದೈತಂ ಸುರೈಃ ಸುತ್ತಃ ॥೩॥

---

## ಎರಡನೆಯ ಅಧ್ಯಾಯ

ಶ್ರೀ ಸ್ಕಂದದೇವನು ತಂದೆಯಾದ ಮಹೇಶ್ವರನನ್ನು ಕುರಿತು ಹೀಗೆ ಕೇಳಿಕೊಂಡನು :– 'ದೇವತೆಗಳಿಗೆಲ್ಲರಿಗೂ ಒಡೆಯನಾದ ಮತ್ತು ಮಹಾತ್ಮ್ಯಾದಿಷಡ್ಗುಣೈಶ್ವರ್ಯಸಂಪನ್ನ ! ಆ ದೇವಿಯನ್ನು ಅರ್ಚಿಸುವ ಬಗೆ ಹೇಗೆ ? ಈ ಹಿಂದೆ ಯಾರು ಯಾರಿಂದ ಆ ದೇವಿಯು ಅರ್ಚಿಸಲ್ಪಟ್ಟಳು ಎಂಬ ವಿಷಯವನ್ನು ದಯೆಯಿಟ್ಟು ವಿವರಿಸು, ಸ್ಕಂದನ ಈ ಮಾತನ್ನು ಕೇಳಿ ಮಹೇಶ್ವರನು ಈ ಮುಂದಿನಂತೆ ಉತ್ತರಿಸಿದನು. "ಅಗ್ನಿಯಲ್ಲಿ ಜನ್ಮವನ್ನು ತಳೆದ ಸ್ಕಂದ ! ಕೇಳು. ಈ ಹಿಂದೆ ಲಕ್ಷ್ಮೀಪತಿಯಾದ ವಿಷ್ಣುಭಗವಾನನು ದೇವೇಂದ್ರನನ್ನು ಕುರಿತು ಯಾವುದನ್ನು ವಿವರಿಸಿ ತಿಳಿಸಿದನೋ ಅದನ್ನೇ ನಿನಗೆ ತಿಳಿಸುತ್ತೇನೆ. ॥೨॥

Sri Vidyabharathi Book Centre, Sringeri

CC-O. In Public Domain. Digitized by eGangotri

ತದಾ ಶಕ್ರಃ ಸಹಸ್ರಾಕ್ಷಂ ‡ ದೃಷ್ಟ್ವಾ ಸ್ತ್ರೀರೂಪದಾರಿಣಂ ।
ವಿಷ್ಣುಂ ನತ್ವಾಥ ಪ್ರಪಚ್ಛ ‡ ವಿಸ್ಮಯೋಽತ್ಫುಲ್ಲಲೋಚನಃ ॥೪॥

ಇಂದ್ರ ಉವಾಚ—

ಹರೇ ! ತ್ವಂ ಅಪ್ರಮೇಯೋಽಸಿ ‡ ಮನೋ ವಾಚಾಂ ಅಗೋಚನ ।
ಸತ್ವಂ ಪುರುಷರೂಪೋಽಸಿ ‡ ಇತ್ಯಾಹುಃ ಲೋಕೇ ಮಹರ್ಷಯಃ ॥೫॥

ಇದಾನೀಂ ಅನ್ಯಥಾ ಭಾಸಿ ‡ ಸ ಕಥಂ ಪುರುಷೋತ್ತಮ !
ಸ್ತ್ರೀ ವಾ ತ್ವಂ ಪುರುಷೋ ವೇತಿ ‡ ತತ್ವಂ ಕಥಯ ಮೇ ಪ್ರಭೋ ! ॥೬॥

---

ಒಂದಾನೊಂದು ಕಾಲದಲ್ಲಿ ವಿಷ್ಣುವು ಅಮರಾವತಿಯಲ್ಲಿ ಮೋಹಿನೀ ರೂಪವನ್ನು ಗ್ರಹಿಸಿ ವ್ಯಾಳನೆಂಬ ಕ್ರೂರ ಅಸುರನನ್ನು ಕೊಂದುದಕ್ಕಾಗಿ ದೇವತೆಗಳು ಆ ದೇವನನ್ನು ಸ್ತುತಿಸಿದರು. ॥೩॥

ಆಗ ಸಹಸ್ರಾಕ್ಷನೆಂಬ ಅನ್ವರ್ಥನಾಮವನ್ನು ಗಳಿಸಿದ ಇಂದ್ರನು ಸ್ತ್ರೀ ರೂಪವನ್ನು ಧರಿಸಿದ್ದ ವಿಷ್ಣುದೇವನನ್ನು ನೋಡಿ, ಆ ದೇವನಿಗೆ ಸಾಷ್ಟಾಂಗ ಪ್ರಣಾಮವನ್ನು ಮಾಡಿ ಅಪರಿಮಿತವಾದ ಅಚ್ಚರಿಯನ್ನು ಕಣ್ಣುಗಳಿಂದ ಹೊರಚಲ್ಲುತ್ತ ಈ ಮುಂದಿನಂತೆ ಆ ದೇವನನ್ನು ಪ್ರಶ್ನಿಸಿದನು :—॥೪॥

"ಶ್ರೀಹರಿಯೇ ! ನೀನು ಅಳತೆಗೆ ಸಿಲುಕದವನು, ಅಲ್ಲದೆ ಮನಸ್ಸಿಗೂ ಮಾತಿಗೂ ಸಿಕ್ಕದವನು. ಅಂತಹ ನೀನು "ಪುರುಷರೂಪಿ' ಎಂದು ಈ ಲೋಕದಲ್ಲಿನ ಮಹರ್ಷಿಗಳೆಲ್ಲರೂ ಹೇಳಿರುವರು ॥೫॥. ಆದರೆ ಈಗ ಪುರುಷ ರೂಪವನ್ನು ಬಿಟ್ಟು ಬೇರೆ ರೂಪವನ್ನು ಧರಿಸಿದ್ದಿ, ಇದು ಹೇಗೆ ? ಎಂಬುದನ್ನು ಪುರುಷೋತ್ತಮನಾದ ನೀನೇ ತಿಳಿಸಬೇಕು. ಅಂದರೆ ನಿನ್ನ ಸ್ವರೂಪ ಪುರುಷನದೋ ಇಲ್ಲವೆ ಸ್ತ್ರೀಯದೋ ಎಂಬ ರಹಸ್ಯವನ್ನು ನನಗೆ ತಿಳಿಯಹೇಳು" ಎಂದು ಪ್ರಶ್ನಿಸಿದ್ದನ್ನು ಕೇಳಿ, ಶ್ರೀ ಭಗವಾನ್ ವಿಷ್ಣುದೇವನು ಹೀಗೆ ಉತ್ತರಿ

Sri Vidyabharathi Book Centre, Sringeri

CC-O. In Public Domain. Digitized by eGangotri



ಶ್ರೀ ಭಗವಾನ್ ಉವಾಚ—

ಪ್ರಕೃತಿಃ ಪುರುಷಶ್ಚೇತಿ ‡ ನಿತ್ಯೌ ತೌ ಯನ್ಮಯಂ ಜಗತ್ ।
ನ ಕದಾಚಿತ್ ವಿಯುಕ್ತೌ ದ್ವೌ ‡ ಸುವರ್ಣಾಭರಣೇ ಯಥಾ ॥೭॥
ತಥಾಪಿ ತತ್ ಜ್ಞಾ ಮಾಂ ತಂ ಹಿ ‡ ಶಕ್ತಿ ತಾದಾತ್ಮ್ಯಗಂ ವಿದುಃ ।
ಅತಃ ಶ್ರೀ ಪುರುಷತ್ವೇತಿ ‡ ದ್ವಿಧಾಸ್ಮಿ ಗುಣವಾನ್ ಅಹಂ ॥೮॥

ಇಂದ್ರ ಉವಾಚ—

ಭಗವನ್ ! ಸರ್ವದೇವೇಶ ! ‡ ಕ್ಷೇತ್ರಜ್ಞ ! ವಿಷಯಾತಿಗ ! ।
ಅನಯಾ ಯುವತಿವ್ಯಕ್ತ್ಯಾ ‡ ಸಂಸ್ಥಿತೋಽಪಿ ಕ್ವ ಮೇ ವದ ॥೯॥

ಶ್ರೀ ಭಗವಾನ್ ಉವಾಚ—

ಸರ್ವದೇವಾತ್ಮಿಕಾ ದೇವೀ ‡ ಯಾ ಶ್ರೀಃ ಕೋಲಾಪುರೇಶ್ವರೀ ।
ಸಾಕ್ಷಾತ್ ಪರಬ್ರಹ್ಮರೂಪಂ ‡ ವಿದ್ಧಿ ತಾಮೇವ ಮಾಂ ವೃಷನ್
॥೧೦॥

---

ಸಿದನು. 'ಇಂದ್ರದೇವ ! ಕೇಳು ಆದಿಯಲ್ಲಿ ಪ್ರಕೃತಿ ಮತ್ತು ಪುರುಷರೆಂಬ ಎರಡು ವ್ಯಕ್ತಿಗಳಾದರು. ಅವರು ನಿತ್ಯರು ಅಂದರೆ ನಾಶರಹಿತರು. ಅವರಿಬ್ಬರಿಂದಲೇ ಈ ಜಗತ್ ಹಾಸುಹೊಕ್ಕಾಗಿ ಆವರಿಸಲ್ಪಟ್ಟಿರುವುದು. ಬಂಗಾರ ಮತ್ತು ಅದರಿಂದಾದ ಆಭರಣ ಇವುಗಳನ್ನು ಬೇರ್ಪಡಿಸುವುದಕ್ಕೆ ಹೇಗೆ ಸಾಧ್ಯವಿಲ್ಲವೋ ಅದರಂತೆಯೇ ಪ್ರಕೃತಿಪುರುಷರನ್ನು ಬೇರ್ಪಡಿಸಲು ಸಾಧ್ಯವೇ ಇಲ್ಲ. ಹಾಗಿದ್ದರೂ ಆ ರಹಸ್ಯವನ್ನರಿತವರು ನನ್ನನ್ನು 'ಶಕ್ತಿತಾದಾತ್ಮ್ಯ' ಅಂದರೆ ಶಕ್ತಿಸ್ವರೂಪಿಯೇ ನಾನು ಎಂದು ಹೇಳುವರು ಈ ಕಾರಣದಿಂದ ಪ್ರಕೃತಿಯೆಂಬ ಸ್ತ್ರೀ, ಪುರುಷನೆಂಬ ಗಂಡು ಇವುಗಳಿಂದ ಕೂಡಿರುವವನಾಗಿರುತ್ತೇನೆ" ಎಂದನು. ಇದನ್ನು ಕೇಳಿ ಮತ್ತೆ ಇಂದ್ರನು, 'ಭಗವಂತ ! ಸಮಸ್ತದೇವತೆಗಳಿಗೆ ಒಡೆಯಾ ಕ್ಷೇತ್ರಜ್ಞಸ್ವರೂಪಿ, ವಿಷಯಗಳಿಗೆ ಸಿಕ್ಕದವ ಅಂದರೆ ಅತೀಂದ್ರಿಯ ವಸ್ತು. ಸ್ತ್ರೀರೂಪದಿಂದ ಎಲ್ಲಿ ನೆ ಸಿರುವೆಯೋ ಅದನ್ನು ಹೇಳು" ಎಂದು ಕೇಳಿದನು, ಅದಕ್ಕೆ ಉತ್ತರವಾಗಿ ಶ್ರೀಭಗವಂತನು ಹೀಗೆಂದು ಉತ್ತರಿಸಿದನು—

Sri Vidyabharathi Book Centre, Sringeri

CC-O. In Public Domain. Digitized by eGangotri



ಇಂದ್ರ ಉವಾಚ—

ದೇವದೇವ! ಮಹಾದೇವ್ಯಾಃ ‡ ತ್ವದ್ರೂಪಿಣ್ಯಾಃ ಪ್ರಪೂಜನಂ ।
ವಿಧಿನಾ ಕೇನ ಕೃತ್ವಾಽತ್ರ ‡ ಶ್ರೇಯಃ ಪರಂ ಅವಾಪ್ನುಯುಃ ॥೧೧॥

ಶ್ರೀ ಭಗವಾನ್ ಉವಾಚ—

ಇದಂ ಸಾರತರಂ ಜಿಷ್ಣೋ! ‡ ಸಮಾಹಿತಮನಾಃ ಶೃಣು ।
ವಕ್ಷ್ಯೇ ಹಿತಾಯ ಸರ್ವೇಷಾಂ ‡ ನರಾಣಾಂ ಚ ವಿಶೇಷತಃ ॥೧೨॥

ಅತ್ರಾವಿರ್ಭೂತಲಿಂಗಂ ತು ‡ ಸರ್ವತೇಜೋಮಯಂ ಯತಃ ।
ಗತಃ ತತ್ತ್ವಭೀಷ್ಟಾನು ‡ ರೂಪದೇವಾತ್ಮಕಂ ಸ್ಮೃತಂ ॥೧೩॥

ಪುನರಸ್ಮಿನ್ ಮಹಾಲಿಂಗೇ ‡ ದಕ್ಷಿಣಂ ಪುರುಷಾತ್ಮಕಂ ।
ವಾಮಂ ಶಕ್ತ್ಯಾತ್ಮಕಂ ಮಧ್ಯಂ ‡ ಪುಂ-ಪ್ರಕೃತ್ಯಾತ್ಮಿಕಾಂಬಿಕಾ ॥೧೪॥

---

"ಈ ಕೋಲಾಪುರ ಕ್ಷೇತ್ರದಲ್ಲಿ ಒಡತಿಯಾಗಿ ನೆಲೆಸಿರುವ ಯಾವ ಮಹಾಲಕ್ಷ್ಮೀ ಸ್ವರೂಪಿಣಿಯಾದ ದೇವಿಯನ್ನು ಸಾಕ್ಷಾತ್ ಪರಬ್ರಹ್ಮಸ್ವರೂಪಿಣಿಯೆಂದೇ ಭಾವಿಸು ಇಂದ್ರದೇವ! ಎಂದು ಹೇಳಿದ ಮಾತನ್ನು ಕೇಳಿ ಇಂದ್ರದೇವನು ಮತ್ತೆ ಹೀಗೆ ಹೇಳಿದನು. "ದೇವದೇವ ! ನಿನ್ನ ರೂಪವನ್ನೇ ತಳೆದ ಅಂದರೆ ಪುರುಷಸ್ವರೂಪಿಣಿಯೆನಿಸಿದ ಮಹಾದೇವಿಯನ್ನು ಯಾವ ವಿಧಿಯನ್ನನುಸರಿಸಿ ನಾವು ಇಲ್ಲಿ ಪೂಜೆ ಮಾಡಿದರೆ ಅತ್ಯಂತ ಶ್ರೇಯಸ್ಸನ್ನು ಪಡೆಯಬಹುದು ?" ಎಂದು ಕೇಳಿದನು. ಅದಕ್ಕೆ ಉತ್ತರವಾಗಿ ಶ್ರೀ ಭಗವಾನನು ಇಂದ್ರನನ್ನು ಕುರಿತು, "ಈ ನಿನ್ನ ಪ್ರಶ್ನೆಯು ಅತ್ಯಂತ ಮುಖ್ಯವಾದುದು. ಸಮಸ್ತರ ಹಿತವನ್ನೂ ಸಾಧಿಸಬಲ್ಲುದು ಅವರಲ್ಲಿಯೂ ಮಾನವರಿಗೆ ಇದು ಅತಿ ಮುಖ್ಯವಾದುದು.

ಅದನ್ನು ವಿವರಿಸುತ್ತೇನೆ. ನೀನು ಸಾವಧಾನ ಮನಸ್ಸಿನಿಂದ ಕಿವಿಗೊಟ್ಟು ಕೇಳು. ಇಲ್ಲಿ ನೆಲೆಸಿರುವ ಲಿಂಗವು ಅಪರಿಮಿತ ತೇಜಸ್ಸಿನಿಂದ ಕೂಡಿದುದು. ಏತಕ್ಕೆಂದರೆ ಅದನ್ನು ಭಕ್ತಿಯಿಂದರ್ಚಿಸುವವರ ಮನೋಭೀಷ್ಟವನ್ನು ಸಲ್ಲಿಸುವ ಶಕ್ತಿಯನ್ನುಳ್ಳದ್ದು ಎಂದು ಪ್ರಸಿದ್ಧಿಗೊಂಡಿದೆ ॥೧೩॥

Sri Vidyabharathi Book Centre, Sringeri

CC-O. In Public Domain. Digitized by eGangotri


ಯತ್ ವಾಮಾಂಶಾಧಿಕ ಮತ್ರ ‡ ಶಕ್ತೇಃ ಪ್ರಾಧಾನ್ಯ ಮೇವ ತತ್
ಪುಂ ದೇವತಾರ್ಚನೇ ಗ್ರಾಹ್ಯಾ ‡ ದಂಪತೀ ಏವ ತಾವತಃ ||೧೫||

ನವಶಕ್ತ್ಯಾಧಿಕಂ ಯತ್ ತತ್ ‡ ಸರ್ವ ಸಾಮಾನ್ಯ ಮುಚ್ಯತೇ |
ಧ್ಯಾನಮಾತ್ರಂ ಪೃಥಕ್ ಯುದ್ವಾ ‡ ಸರ್ವಂ ತತ್ತತ್ ಉದೀರಿತಂ ||೧೬||

ಕುತ್ರಚಿತ್ ವಕ್ಷ್ಯಮಾಣೇऽತ್ರ ‡ ಯುಕ್ತ್ಯಾ ಕುರ್ಯಾತ್ ಯಥೋಽಚಿತಂ |
ಧ್ಯಾನಾನಿ ಕಾನಿಚಿತ್ ವಕ್ಷ್ಯೇ ‡ ತದನ್ಯಥಾ ಗ್ರಾಹ್ಯ ಮನ್ಯತಃ ||೧೭||

---

ಈ ಲಿಂಗದಲ್ಲಿನ ಬಲಭಾಗವು ಪುರುಷಾತ್ಮಕವಾದುದು, ಎಡಭಾಗವು ಶಕ್ತ್ಯಾತ್ಮಕವಾದುದು. ಅಲ್ಲದೆ ಅದರ ಮಧ್ಯಭಾಗವು ಪುರುಷಸ್ತ್ರೀಸ್ವರೂಪಿಣಿಯೆನಿಸಿದ ಅಂಬಿಕಾಸ್ವರೂಪವೆಂದೇ ತಿಳಿ ||೧೪||.

ಇಲ್ಲಿ ಎಡಭಾಗವೇ ಅಂದರೆ ಇಲ್ಲಿ ಪ್ರತಿಷ್ಠಿತವಾಗಿರುವ ಲಿಂಗದಲ್ಲಿ ವಾಮಭಾಗವೆನಿಸಿದ ಶಕ್ತಿಸ್ವರೂಪಿಣಿಯಾದ ದೇವಿಗೇ ಪ್ರಾಶಸ್ತ್ಯ ಹೆಚ್ಚು. ಆದುದರಿಂದ ಇಲ್ಲಿನ ಲಿಂಗಾರ್ಚನೆಯಲ್ಲಿ ಸ್ತ್ರೀಪೂರ್ವಕವಾಗಿಯೇ ಪುಂಭಾಗವು ಪೂಜಿಸಲ್ಪಡುತ್ತದೆ. ಅಂದರೆ ದಂಪತಿಗಳ ಪೂಜೆಯು ಸ್ತ್ರೀಪೂರ್ವಕವಾಗಿಯೇ ನಡೆಯಬೇಕೆಂದು ಭಾವಿಸಬೇಕು ||೧೫||.

ನವಶಕ್ತಿಪೂಜೆ, ಆವರಣಪೂಜೆ, ಅಂಗಪೂಜೆ ಇವೇ ಮೊದಲಾದವುಗಳೆಲ್ಲವೂ ಸರ್ವದೇವತೆಗಳಿಗೂ ಸಾಮಾನ್ಯವಾಗಿರುವುದು. ಆದರೆ ಧ್ಯಾನಮಾತ್ರ ಆಯಾ ದೇವತೆಗಳನ್ನು ಕುರಿತು ಬೇರೆಬೇರೆಯಾಗಿರುತ್ತದೆ ||೧೬||

ಇಲ್ಲಿ ಕೆಲವೆಡೆಗಳಲ್ಲಿ ಮಾತ್ರ ಧ್ಯಾನ ಮಾಡುವ ಕ್ರಮವನ್ನು ತಿಳಿಸಲಾಗಿದೆ ಅದರಂತೆಯೇ ಯುಕ್ತಿಯಿಂದ ಉಳಿದ ದೇವತೆಗಳಲ್ಲಿಯೂ ಪರಿವರ್ತಿಸಿಕೊಳ್ಳಬೇಕಾಗಿದೆ. ಇದರಲ್ಲಿ ಕೆಲವು ಧ್ಯಾನಕ್ರಮಗಳನ್ನು ವಿವರಿಸಿದೆ. ಅದರಂತೆ ಉಳಿದೆಡೆಗಳಲ್ಲಿಯೂ ಊಹಿಸಿಕೊಳ್ಳಬಹುದು. ||೧೭||

Sri Vidyabharathi Book Centre, Sringeri

CC-O. In Public Domain. Digitized by eGangotri


ನಿತ್ಯೇ ಮೂಕಾಂಬಿಕೈವಾತ್ರ ‡ ಪೂಜ್ಯಾ ಸ್ವೇಷ್ಟೇವಾನ್ಯದೇವತಾಃ ।
ಕಾಮ್ಯೇ ನೈಮಿತ್ತಿಕೇ ವಾ ಸ್ಯುಃ ‡ ನಿತ್ಯೇಽನ್ಯಾಶ್ಚೇದನರ್ಥದಾಃ
॥೧೮॥

ಪ್ರಾತರುತ್ಥಾಯ ಶಿರಸಿ ‡ ಸಂಸ್ಮರೇತ್ ಪದ್ಮಮುಜ್ಜ್ವಲಂ ।
ಕರ್ಪೂರಾಭಂ ಸ್ಮರೇನ್ ತತ್ರ ‡ ಶ್ರೀ ಗುರುಂ ನಿಜರೂಪಿಣಂ ॥೧೯॥

ಸುಪ್ರಸನ್ನಂ ಲಸದ್ಭೂಷಾ ‡ ಭೂಷಿತಂ ಶಕ್ತಿಸಂಯುತಂ ।
ನಮಸ್ಕೃತ್ಯ ತತೋ ದೇವೀಂ ‡ ಕುಂಡಲೀಂ ಸಂಸ್ಮರೇತ್ ಬುಧಃ
॥೨೦॥

---

ಇಲ್ಲಿ ಮೂಕಾಂಬಿಕಾ ದೇವತೆಗೆ ನಿತ್ಯಪೂಜೆಯನ್ನು ಯಥಾಕ್ರಮದಲ್ಲಿ ಸೇವಿಸಬೇಕು. ಇತರ ದೇವತೆಗಳನ್ನು ಕಾಮ್ಯಕರ್ಮಗಳಲ್ಲಿ ಮತ್ತು ನೈಮಿತ್ತಿಕ ಕರ್ಮಗಳಲ್ಲಿ ಆಯಾಯ ರೀತಿಯಲ್ಲಿ ನಡೆದುಕೊಳ್ಳಬೇಕು. ಕಾಮ್ಯ ಮತ್ತು ನೈಮಿತ್ತಿಕ ಪೂಜೆಗಳಲ್ಲಿ ನಿತ್ಯಪೂಜಾ ವಿಧಿಯನ್ನನುಸರಿಸಿದರೆ ಅನರ್ಥ ವಾದೀತು. ॥೧೮॥

ಪ್ರಾತಃಕಾಲದಲ್ಲಿ ಹಾಸಿಗೆ ಬಿಟ್ಟೆದ್ದು. ಶಿರೋಭಾಗದಲ್ಲಿ ನೆಲೆಸಿರುವ ಸಹಸ್ರಾರ ಎಂಬ ಸಾವಿರ ದಳವುಳ್ಳ ಹೊಳೆಹೊಳೆವ ಕಾಂತಿಯಿಂದ ಕೂಡಿದ ಪದ್ಮಚಕ್ರವನ್ನು ಸ್ಮರಿಸಬೇಕು. ಬಳಿಕ ಅಲ್ಲಿ ನೆಲೆಸಿರುವ ಕರ್ಪೂರದಂತಿರುವ ಶುಭ್ರ ದೇಹವುಳ್ಳ ಜ್ಞಾನಮೂರ್ತಿಯಾದ ಗುರುದೇವನೆನಿಸಿದ ಬ್ರಹ್ಮವಸ್ತುವನ್ನು ಸ್ಮರಿಸಿ ಆ ದೇವನಿಗೆ ನಮಸ್ಕರಿಸಬೇಕು. ॥೧೯॥

ಈ ದೇವನು ಶಾಂತಮೂರ್ತಿ ಮತ್ತು ಹೊಳೆಹೊಳೆವ ಭೂಷಣಗಳಿಂದ ಅಲಂಕೃತನಾಗಿ ಶಕ್ತಿಸ್ವರೂಪಿಣಿಯಿಂದ ಕೂಡಿರುವಂಥವನು. ಆ ಬಳಿಕ ಕುಂಡಲಿನಿಯಲ್ಲಿರುವ ದೇವಿಯನ್ನು ನೆನೆಯಬೇಕು. ॥೨೦॥

ಆ ದೇವಿಯನ್ನು ಈ ಮುಂದಿನಂತೆ ಧ್ಯಾನಮಾಡಬೇಕು :-

"ಮೂಲಾಧಾರ ಚಕ್ರದಿಂದ ಬ್ರಹ್ಮರಂಧ್ರದ ಕಡೆಗೆ ಹೋಗುವಂದು ಚಿದ್ರೂಪದಿಂದ ಪ್ರಕಾಶಿಸುವವಳಾಗಿಯೂ ಅದರಂತೆಯೇ ಸಹಸ್ರಾರದಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಕಾಶಮಾನಾಂ ಪ್ರಥಮೇ ಪ್ರಯಾಣೇ ‡ ಪ್ರತಿಪ್ರಯಾಣೇ-
ಪ್ಯಮೃತಾಯಮಾನಾಂ ।
ಅಂತಃ ಪದವ್ಯಾಂ ಅನುಸಂಚರಂತೀಂ ‡ ಆನಂದರೂಪಾಂ
ಅಬಲಾಂ ಪ್ರಪದ್ಯೇ ॥೨೧॥

ಧ್ಯಾತ್ವೈವಂ ತತ್ ಶಿಖಾಮಧ್ಯೇ ‡ ಸಚ್ಚಿದಾನಂದರೂಪಿಣೀಂ ।
ಮಾಂ ಧ್ಯಾಯೇತ್ ಅಥ ಶೌಚಾದಿ- ‡ ಕ್ರಿಯಾಃ ಸರ್ವಾಃ
ಸಮಾಪಯೇತ್ ॥೨೨॥

ತತೋ ದೇವಾಲಯಂ ಗತ್ವಾ ‡ ಸಾಚಾರ್ಯೋ ಭಕ್ತಿಮಾನ್
ಪುಮಾನ್ ।
ಪ್ರಾರ್ಥನಾಪೂರ್ವಕಂ ದೇವ್ಯಾಃ ‡ ಪುರತಃ ಸ್ಥಾಪನೇ ಸ್ಥಿತಃ
॥೨೩॥

---

ಹೊರಟು ಹಿಂದಿರುಗಿ ಮೂಲಾಧಾರದ ಕಡೆಗೆ ಪಯಣಿಸುವ ಸಮಯದಲ್ಲಿ ಆನಂದಾಮೃತಪೂರಿತಳಾಗಿಯೂ, ಈ ಬಗೆಯಾಗಿ ಅಂತರ ಮಾರ್ಗದಲ್ಲಿ ಗಮನಾಗಮನಗಳನ್ನು ನಡೆಸುವವಳಾಗಿಯೂ ಮೆರೆಯುವ ಪರಾಶಕ್ತಿಯನ್ನು ನಾನು ಶರಣುಹೊಂದುವೆನು" ಎಂಬ ಭಾವದಿಂದ ನೆನೆಯಬೇಕು.

ಈ ಬಗೆಯಲ್ಲಿ ಕುಂಡಲಿನೀ ಶಕ್ತಿಯನ್ನು ಧ್ಯಾನಿಸಿ, ಮೂಲಾಧಾರದಲ್ಲಿ ಇರುವ ಚಿದಗ್ನಿಯ ಜ್ವಾಲೆಗಳ ಮಧ್ಯದಲ್ಲಿ ನೆಲೆಸಿರುವ ನನ್ನನ್ನು ಧ್ಯಾನಿಸಬೇಕು. ಆ ಬಳಿಕ ಶೌಚಾದಿನಿತ್ಯಕರ್ಮಗಳನ್ನು ನೆರವೇರಿಸಿಕೊಳ್ಳಬೇಕು. ಅನಂತರ ಆಚಾರ್ಯನನ್ನು ಮುಂದುಮಾಡಿಕೊಂಡು ಭಕ್ತಿಪುರಸ್ಸರವಾಗಿ ದೇವಾಲಯವನ್ನು ಹೊಕ್ಕು. ಪ್ರಾರ್ಥನಾಪೂರ್ವಕವಾಗಿ ದೇವಿಯ ವಿಗ್ರಹದ ಮುಂಭಾಗದಲ್ಲಿ ಬಂದು ಪೀಠದಲ್ಲಿ ಕುಳಿತು ಸಂಕಲ್ಪಿಸಿ. ಭೂತಶುದ್ಧಿಯನ್ನೂ ಮಾತೃಕಾನ್ಯಾಸ ಮತ್ತು ಹೃಲ್ಲೇಖಾ ಮಾತೃಕಾನ್ಯಾಸ ಇವುಗಳನ್ನೂ ಆಚರಿಸಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಕಲ್ಪ್ಯ ಭೂತಶುದ್ಧಿಂ ಚ ‡ ಮಾತೃಕಾ ನ್ಯಾಸಮೇವ ಚ ।
ಹೃಲ್ಲೇಖಾಮಾತೃಕಾ ನ್ಯಾಸಂ ‡ ನಿತ್ಯಮೇವ ಸದಾಽಚರೇತ್ ॥೨೪॥

ಮೂಲಾಧಾರೇ 'ಹ' ಕಾರಂ ಚ ‡ ಹೃದಯೇತು 'ರ' ಕಾರಕಂ ।
ಭ್ರೂಮಧ್ಯೇ ತದ್ವತ್ 'ಈ' ಕಾರಂ ‡ 'ಹ್ರೀಂ' ಕಾರಂ ಮಸ್ತಕೇ
ನ್ಯಸೇತ್ ॥೨೫॥

ಪ್ರಾಣಾನಾಯಮ್ಯ ವಿಧಿವತ್ ‡ ಮಂಡಲಾರ್ಚನ ಪೂರ್ವಕಂ ।
ಕಲಶಂ ಶಂಖ ಮಾತ್ಮಾನಂ ‡ ಚಾಭ್ಯರ್ಚ್ಯ ಸ್ವಾತ್ಮ ಭಾವತಃ
॥೨೬॥

ಸ್ವಾಗತೋಕ್ತವಿಧಾನೇನ ‡ ಕೃತ್ವಾ ಪೀಠಾರ್ಚನಂ ಪುನಃ ।
ನವಶಕ್ತೀಃ ಯಜೇತ್ ಏತಾಃ ‡ ಚಿನ್ಮಯೀರಾಶ್ಚ ಸನಾತನೀಃ ॥೨೭॥

ಇಚ್ಛಾ ಕ್ರಿಯಾ ತಥಾ ಜ್ಞಾನಂ ‡ ಪ್ರೀತಿಃ ತುಷ್ಟಿಃ ಜಯಾ ಪುನಃ ।
ಅನಂತಾ ಚೋನ್ಮನೀ ಚೈವ ‡ ಚಿತ್ಪ್ರಭೇತಿ ನವಕ್ರಮಾತ್ ॥೨೮॥

---

ಬಳಿಕ ಮೂಲಾಧಾರದಲ್ಲಿ 'ಹ' ಕಾರವನ್ನೂ, ಹೃದಯ ಭಾಗದಲ್ಲಿ 'ರ' ಕಾರವನ್ನೂ, ಹುಬ್ಬುಗಳ ಮಧ್ಯಭಾಗದಲ್ಲಿ 'ಈ' ಕಾರವನ್ನೂ, ಶಿರಸ್ಸಿನಲ್ಲಿ 'ಹ್ರೀಂ' ಕಾರವನ್ನೂ ನ್ಯಾಸಮಾಡಬೇಕು. ಅನಂತರ ವಿಧಿಪೂರ್ವಕವಾಗಿ ಪ್ರಾಣಾಯಾಮವನ್ನು ಮಾಡಿ ಆತ್ಮಭಾವನೆಯಿಂದ ಮಂಡಲಾರ್ಚನೆಯ ಪೂರ್ವಕವಾಗಿ ಕಲಶವನ್ನೂ ಶಂಖವನ್ನೂ ಅದರಂತೆಯೇ ಆತ್ಮನನ್ನೂ ಕ್ರಮವಾಗಿ ಪೂಜಿಸಿ, ಸುಪ್ರಸಿದ್ಧವಾದ ಆಗಮದಲ್ಲಿ ನಿರೂಪಿಸಿದಂತೆ ಪೀಠಪೂಜೆಯನ್ನು ಸಲ್ಲಿಸಿ ಮತ್ತೆ ಚಿದ್ರೂಪಿಣಿಯರಾದ ಮತ್ತು ಅನಾದಿಯಿಂದ ಪ್ರಸಿದ್ಧರಾಗಿಯೂ ಇರುವ ನವಶಕ್ತಿಗಳ ಪೂಜೆಯನ್ನು ಕ್ರಮವಾಗಿ ಮಾಡಬೇಕು.

ಆ ಶಕ್ತಿಗಳು ಕ್ರಮವಾಗಿ, ಇಚ್ಛಾಶಕ್ತಿ, ಕ್ರಿಯಾಶಕ್ತಿ, ಜ್ಞಾನಶಕ್ತಿ, ಪ್ರೀತಿಶಕ್ತಿ, ತುಷ್ಟಿಶಕ್ತಿ, ಜಯಶಕ್ತಿ, ಅನಂತಾಶಕ್ತಿ, ಉನ್ಮನೀಶಕ್ತಿ ಮತ್ತು ಚಿತ್ಪ್ರಭಾಶಕ್ತಿ ಈ ಬಗೆಯಾಗಿವೆ.

Sri Vidyabharathi Book Centre, Sringeri

CC-O. In Public Domain. Digitized by eGangotri



ವಕ್ಷ್ಯಮಾಣ ಪ್ರಕಾರೇಣ ‡ ಧ್ಯಾತ್ವಾ ದೇವೀಂ ಪರೇಶ್ವರೀಂ ।
ಆವಾಹಯೇತ್ ಪೀಠಮಧ್ಯೇ ‡ ಕರ್ಣಿಕಾಯಾಂ ಸುನಿಶ್ಚಲಾಂ ॥೨೯॥

ಅತ್ರ ತ್ವಾವಾಹನಂ ಯಸ್ಮಾತ್ ‡ ವಿಧಿಮಾತ್ರಂ ಪ್ರಚೋದಿತಂ ।
ಸದಾ ಸನ್ನಿಹಿತತ್ವಾತ್ ಹಿ ‡ ಸಾರ್ಥಕಂ ಕಥಿತಂ ಮಯಾ ॥೩೦॥

ಮೂಲವಿದ್ಯಾಂ ಇಮಾಂ ಮುಖ್ಯಾಂ ‡ ವಕ್ಷ್ಯೇ ಶ್ರೀಷೋಡಶಾಕ್ಷರೀಂ ।
ಸರ್ವಜ್ಞತ್ವಪ್ರದಾಂ ಕ್ಷಿಪ್ರಂ ‡ ದೇವ್ಯನುಗ್ರಹಕಾರಣಾಂ ॥೩೧॥

ಈಶ್ವರಸ್ತು ಋಷಿಃ ಪ್ರೋಕ್ತೋ ‡ ಗಾಯತ್ರೀ ಛಂದ ಈರಿತಂ ।
ಸಚ್ಚಿದಾನಂದರೂಪಾ ಹಿ ‡ ದೇವತಾ ಶ್ರೀ ಕುಮಾರಿಕಾ ॥೩೨॥

---

ಆ ಬಳಿಕ ಈ ಮುಂದೆ ವಿವರಿಸಿರುವಂತೆ ಪರಬ್ರಹ್ಮ ಸ್ವರೂಪಿಣಿಯಾದ ದೇವಿಯನ್ನು ಧ್ಯಾನಮಾಡಿ: ಸ್ಥಿರವಾದ ಪೀಠಮಧ್ಯದಲ್ಲಿರುವ ಕರ್ಣಿಕೆಯಲ್ಲಿ ಆವಾಹನೆ ಮಾಡಬೇಕು. ಇಲ್ಲಿ ದೇವಿಯು ಸದಾ ಇರುವುದರಿಂದ ಆವಾಹನ ವಿಧಿಯನ್ನು ಮಾತ್ರ ಸೂಚಿಸಿದ್ದೇನೇ ವಿನಾ ಪಾರಮಾರ್ಥಿಕವಾಗಿ ಅದನ್ನು ವಿವರಿಸಿಲ್ಲ.

ಇಲ್ಲಿ ಮುಖ್ಯವಾಗಿ ಕುಮಾರಿಕಾ ಷೋಡಶಾಕ್ಷರಗಳಿಂದ ಅಂದರೆ ಹದಿನಾರು ಅಕ್ಷರಗಳಿಂದೊಡಗೂಡಿದ ಈ ಮಂತ್ರವನ್ನು ವಿವರಿಸುತ್ತೇನೆ. ಇದು ತಕ್ಷಣವೇ ಸರ್ವಜ್ಞತ್ವವನ್ನು ನೀಡಬಲ್ಲುದು ಮಾತ್ರವಲ್ಲದೆ ಕ್ಷಿಪ್ರದಲ್ಲಿಯೇ ದೇವಿಯ ಅನುಗ್ರಹವನ್ನು ಗಳಿಸಬಲ್ಲುದಾಗಿದೆ.

ಈಶ್ವರನೇ ಋಷಿ, ಗಾಯತ್ರಿಯೇ ಛಂದಸ್ಸು, ಸಚ್ಚಿದಾನಂದ ಸ್ವರೂಪಿಣಿಯಾದ ದೇವಿಯೇ ಇದಕ್ಕೆ ದೇವತೆ.

Sri Vidyabharathi Book Centre, Sringeri

CC-O. In Public Domain. Digitized by eGangotri



ಏಕ ಷಟ್ ನವಭಿಃ ಬೀಜಂ ‡ ಶಕ್ತಿಃ ಕೀಲಕ ಮಕ್ಷರೈಃ ।
ನ್ಯಾ ಸಾಃ ಷಟ್ ಚಕ್ರಮೇಕತ್ರಿ ‡ ತ್ರಿಷಟ್ ತ್ರಿಸಮಗ್ರಕೈಃ ॥೩೩॥

ವ್ಯಾಹೃತ್ಯಾ ದಿಗ್ಬಂಧನಂ ಚ ‡ ಕೃತ್ವಾಥ ಧ್ಯಾನಮುತ್ತಮಂ ।
ಕಾರ್ಯಂ ಮಂತ್ರಜಪೋಽಪ್ಯತ್ರ ‡ ತತಃ ತೌ ದ್ವಾವಿಹ ಶೃಣು ॥೩೪॥

ಧ್ಯಾನಂ—

ಭಾಸ್ವತ್ ರತ್ನಾಭರಣ ವಸನಾಲಂಕೃತೇ
ಶಂಖಂ ಚಕ್ರಂ ವರದ ಮಭಯಂ ಸಂವಹನ್ತೀ ತ್ರಿನೇತ್ರೀ ।
ಹೇಮಪ್ರಖ್ಯೇಪ್ರಣತವರಸಂಧಾತ್ರಿ ಪದ್ಮಾಸನಸ್ಥೇ
ಕಾರುಣ್ಯಾಖ್ಯೇ ಭಗವತಿ ಮಹಾಲಕ್ಷ್ಮೀಃ ರಕ್ಷ ನಿತ್ಯಂ ॥೩೫॥

---

ಮೂಲ ಮಂತ್ರದಲ್ಲಿ ಒಂದು, ಆರು, ಒಂಭತ್ತು ಒಟ್ಟು ಹದಿನಾರು ಅಕ್ಷರಗಳಿಂದ ಶಕ್ತಿ ಮತ್ತು ಕೀಲಕಗಳು ಅಲ್ಲದೆ ಒಂದು, ಮೂರು, ಮೂರು ಆರು, ಮೂರು ಹೀಗೆಂಬ ಹದಿನಾರು ಅಕ್ಷರಗಳಿಂದ ಕರನ್ಯಾಸ ಮತ್ತು ಅಂಗ ನ್ಯಾಸಗಳನ್ನು ಆಚರಿಸತಕ್ಕದ್ದು. ಆನಂತರ ವ್ಯಾಹೃತಿಯಿಂದ ದಿಗ್ಬಂಧನ ಮಾಡಿ ಪ್ರಶಸ್ತವಾದ ಧ್ಯಾನಮಂತ್ರದಿಂದ ಜಪವನ್ನಾಚರಿಸಬೇಕು. ಈ ಎರಡರ ವಿಷಯವನ್ನು ವಿವರಿಸುತ್ತೇನೆ. ಅದನ್ನು ಗಮನಿಸಿ ಕೇಳು—

ಧ್ಯಾನ—

ಹೊಳೆಹೊಳೆವ ರತ್ನದ ಒಡವೆಗಳಿಂದಲೂ, ರಮ್ಯವಾದ ಪೀತಾಂಬರ ದಿಂದಲೂ ಅಲಂಕೃತಳಾದ, ತನ್ನ ನಾಲ್ಕು ಕೈಗಳಲ್ಲಿ ಕ್ರಮವಾಗಿ, ಶಂಖ, ಚಕ್ರ, ವರದ ಮತ್ತು ಅಭಯ ಈ ಮುದ್ರೆಗಳನ್ನು ಧರಿಸಿದವಳಾಗಿಯೂ, ಚಂದ್ರಸೂರ್ಯಾಗ್ನಿಗಳೆಂಬ ಮೂರು ತೇಜಸ್ಸ್ವರೂಪಿಗಳನ್ನು ತನ್ನ ನೇತ್ರ ಗಳನ್ನಾಗುಳ್ಳವಳಾಗಿಯೂ, ಪಾದಾಕ್ರಾಂತರಾದ ಭಕ್ತರ ಇಷ್ಟಾರ್ಥಗಳನ್ನು ನೆರವೇರಿಸುವ ಸಲುವಾಗಿ ಸುವರ್ಣಪೀಠದಲ್ಲಿ ಪದ್ಮಾಸನಾರೂಢಳಾಗಿ ನೆಲೆಸಿ ರುವ ಕರುಣಾಮೂರ್ತಿಯೆನಿಸಿದ, ಷಡೈಶ್ವರ್ಯ ಸಂಪನ್ನಳಾದ ಓ ಮಹಾಲಕ್ಷ್ಮಿ ದೇವಿಯೇ ನನ್ನನ್ನು ಸದಾ ರಕ್ಷಿಸು.

Sri Vidyabharathi Book Centre, Sringeri

CC-O. In Public Domain. Digitized by eGangotri



ಪ್ರಣವಃ ಪ್ರಥಮೋऽನ್ಯ ಮನೋ- ‡ ರಥವಾಗ್ಭವ ಗೌರೀಪದ
ಯುಗಳಂ ।
ಅಥ ವಾಕ್ ಪರಮೇಶ್ವರಿ ಪಾಸ್ವನಃ ‡ ವೈಶ್ವಾನರ ಪ್ರಿಯಯಾ ॥೩೭॥

ಅಯಂ ಕಲ್ಪದ್ರುಮಃ ಸಾಕ್ಷಾತ್ ‡ ಮಂತ್ರರಾಜೋ ಭವೇತ್ ಪುನಃ ।
ಲಕ್ಷ್ಮೀ ಮಯಾ ಕಾಮರಾಜ ‡ ಸಂಯುಕ್ತಶ್ಚೇತ್ ನಿಖಿಲಾತ್ಮಕಃ ॥೩೭॥

ಇಮಂ ಜಪ್ತ್ವಾಷ್ಟವಾರಂ ತತ್ ‡ ಲಿಂಗೇ ಪಂಚೋಪಚಾರಕೈಃ ।
ಸಂಪೂಜ್ಯಾಥೋ ಷೋಡಶೋಪ ‡ ಚಾರಾದ್ಯೈಸ್ತು ಪ್ರಪೂಜಯೇತ್ ॥೩೮॥

---

ಮಾರ್ಕಂಡೇಯೋಕ್ತಮೂಕಾಂಬಾ ‡ ನಾಮಸಾಹಸ್ರಕೇಣ ಚ ।
ಪೂಜಯೇತ್ ಅಥವಾ ತತ್ತತ್ ‡ ದೇವತೋದಿತ ನಾಮಭಿಃ ॥೩೯॥

---

ಜಪಮಂತ್ರ — ಈ ಷೋಡಶಾಕ್ಷರೀ ಮಂತ್ರಕ್ಕೆ ಮೊದಲನೆಯ ಅಕ್ಷರ 'ಓಂ' ಕಾರ ವಾಗ್ಭಿಸಹಿತವಾದ ಗೌರೀ ಎಂಬ ಪದಗಳೆರಡೂ, ವಾಕ್, ಬೀಜವೂ, ಪರಮೇಶ್ವರೀ ಎಂಬ ಪದವೂ ಮತ್ತು ಸ್ವಾಹಾ (ಅಗ್ನಿಯ ಹೆಂಡತಿ) ಇವುಗಳು ಸೇರಿರುವುವು. ಈ ಅತಿ ಶ್ರೇಷ್ಠವಾದ ಮಂತ್ರವು ಜಪಮಾಡುವವರ ಇಷ್ಟಾರ್ಥಗಳನ್ನು ಸಲ್ಲಿಸಬಲ್ಲ ಕಲ್ಪವೃಕ್ಷದಂತೆ. ಇದು ಲಕ್ಷ್ಮೀಬೀಜ, ಮಾಯಾಬೀಜ ಮತ್ತು ಕಾಮರಾಜಬೀಜ ಇವುಗಳೊಡನೆ ಕೂಡಿದ್ದರೆ ಆದರೆ ಸಕಲ ಯಂತ್ರ ಜಪ ಮಂತ್ರಗಳಿಗೆ ಸಮಾನವಾದುದು. ಈ ಮಂತ್ರರಾಜವನ್ನು ಲಿಂಗದ ಸಮೀಪದಲ್ಲಿ ಎಂಟು ಸಲ ಜಪಿಸಿ ಬಳಿಕ ಪಂಚೋಪಚಾರ ಪೂಜೆ ಮತ್ತು ಷೋಡಶೋಪಚಾರ ಪೂಜೆ ಇವುಗಳನ್ನು ಸಲ್ಲಿಸಬೇಕು. ಇದಾದ ಬಳಿಕ ಮಾರ್ಕಂಡಮುನಿಯಿಂದ ರಚಿಸಲ್ಪಟ್ಟ ಮೂಕಾಂಬಿಕಾ ಸಹಸ್ರನಾಮಗಳಿಂದಾಗಲಿ, ಇಲ್ಲವೆ ಆಯಾಯಾ ದೇವತೆಗಳಿಗೆ ಸಂಬಂಧಪಟ್ಟ ಸಹಸ್ರನಾಮಗಳಿಂದಲಾಗಲಿ ಆ ದೇವತೆಯನ್ನು ಪೂಜಿಸಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri


‘ಓಂ’ ಕಾರಮಂದಿರಾ ‡ ‘ಏಂ’ ಕಾರವೇದ್ಯಾ ಗೌರವದಾಯಿನೀ ।
ರಿರಿಂಸೈಕಾರಕಾರಿಣೀ ಗೌರೀ ‡ ರಿಕ್ತರೂಪಾ ‘ಐಂ’ ಪದಪ್ರಿಯಾ ॥೪೦॥
ಪದ್ಮಾಸನಾ ರಮಾಮೇರು ಸಂಸ್ಥಾ ‡ ಶ್ವಸನ ರೂಪಿಣೀ ।
ರಿಪುಹಂತ್ರೀ ‘ಐಂ’ ಕಾರಮೂರ್ತಿಃ ‡ ಸ್ವಾಮಿನೀ ಯಾಯಿನಾತ್ಮಿಕಾ ॥೪೧॥

ನಿತ್ಯೈಃ ಕುಮಾರಿಕಾ ವಿದ್ಯಾ ‡ ಮಂತ್ರ ಗರ್ಭಿತ ಸಾಮಭಿಃ ।
ಇಮಾನಿ ಶೋಡಶಾಂಗಾನಿ ‡ ಶ್ರೀದೇವ್ಯಾಃ ಕ್ರಮಶೋಽ
ರ್ಚಯೇತ್ ॥೪೨॥

ಪತ್‌ಜಂಘಾ ಜಾನು ಊರುಗುಹ್ಯ ‡ ಕಟೇರುದರವಕ್ಷಸೀ ।
ಸ್ತನೌ ಸ್ಕಂಧೌ ಕಂಠಮುಖ ‡ ನಾಸಾ ನೇತ್ರ ಲಲಾಟಿಕಾ ॥೪೩॥

---

ಓಂಕಾರಮಂದಿರಾಯೈ ನಮಃ ಪಾದೌ ಪೂಜಯಾಮಿ, ಏಂ ಕಾರ ವೇದ್ಯಾಯೈ ನಮಃ ಜಂಘೇ ಪೂಜಯಾಮಿ, ಗೌರವಾಯೈ ನಮಃ ಜಾನುನೀ ಪೂಜಯಾಮಿ, ರಿರಂಸಾಯೈ ನಮಃ ಊರೂ ಪೂಜಯಾಮಿ, ಐಂಕಾರಿಣ್ಯೈ ನಮಃ ಗುಹ್ಯಂ ಪೂಜಯಾಮಿ, ಗೌರ್ಯೈ ನಮಃ ಕಟಿಂ ಪೂಜಯಾಮಿ, ರಿಕ್ತ ರೂಪಾಯೈ ನಮಃ ಉದರಂ ಪೂಜಯಾಮಿ, ಐಂ ಪದ ಪ್ರಿಯಾಯೈ ನಮಃ ವಕ್ಷಃಸ್ಥಲಂ ಪೂಜಯಾಮಿ ಪದ್ಮಾಸನಾಯೈ ನಮಃ ಸ್ತನನೌ ಪೂಜಯಾಮಿ ರಮಾಯೈ ನಮಃ ಸ್ಕಂದೌ ಪೂಜಯಾಮಿ, ಮೇರುಸಂಸ್ಥಾಯೈ ನಮಃ ಕಂಠಂ ಪೂಜಯಾಮಿ, ಶ್ವಸನರೂಪಿಣ್ಯೈ ನಮಃ ಮುಖಂ ಪೂಜಯಾಮಿ, ರಿಪುಹಂತ್ರ್ಯೈ ನಮಃ ನಾಸಿಕಾಂ ಪೂಜಯಾಮಿ, ಐಂಕಾರಮೂರ್ತಯೇ ನಮಃ ನೇತ್ರಾಣಿ ಪೂಜಯಾಮಿ, ಸ್ವಾಮಿನ್ಯೈ ನಮಃ ಲಲಾಟಂ ಪೂಜ ಯಾಮಿ, ಹಾಯನಾತ್ಮಿಕಾಯೈ ನಮಃ ಶಿರಃ ಪೂಜಯಾಮಿ, ಹೀಗೆಂದು ಉಚ್ಚರಿಸುತ್ತಾ ಈ ಕುಮಾರಿಕಾ ವಿದ್ಯಾ ಮಂತ್ರಾತ್ಮಿಕಳಾದ ಮಹಾಲಕ್ಷ್ಮೀ ದೇವಿಯ ಷೋಡಶ (ಹದಿನಾರು) ಬಗೆಯ ನಾಮಗಳಿಂದ ಮಹಾದೇವಿಯ ಶರೀರದ ಹದಿನಾರು ಅಂಗಭಾಗಗಳನ್ನು ಪೂಜೆ ಮಾಡಬೇಕು. ಆ ಬಳಿಕ ಆವರಣಪೂಜೆಯನ್ನು [illegible] ಮಾಡಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri


ಅಥ ಮೂಲಾಂಗಮಂತ್ರೈಸ್ತು ‡ ಪ್ರಥಮಾವರಣಂ ಯಜೇತ್ ।
ದ್ವಿತೀಯಾವರಣೇ ಪೂಜ್ಯಾ ‡ ಅಣಿಮಾದ್ಯಷ್ಟಸಿದ್ಧಯಃ ।
॥೪೪॥

ಇಚ್ಛಾಕ್ರಿಯಾ ಚ ಜ್ಞಾನಂ ಚಿತ್ ‡ ಸಂವಿತ್ ಮಾಯಾವಿಲಾಸಿನೀ ।
ಸೂಕ್ಷ್ಮಾಮಹಾವ್ಯಾಪಿನೀತಿ ‡ ಶಕ್ತ್ಯಂತಾಃ ತಾಃ ದಶೋತ್ತರೇ
॥೪೫॥

ಚತುರ್ಥಾವರಣೇ ಶಂಖ ‡ ಚಕ್ರಾಭಯವರಾ ಯಜೇತ್ ।
ಪಂಚಮಾವರಣೇ ವಾಮಾ ‡ ಜ್ಯೇಷ್ಠಾದ್ಯಾ ನವ ಚಾರ್ಚಯೇತ್
॥೪೬॥

---

ಮೂಲಮಂತ್ರಭಾಗಗಳನ್ನುಚ್ಚರಿಸುತ್ತ ಹೃದಯಾದಿ ಅಂಗಗಳನ್ನು ಪೂಜಿಸಬೇಕು. ಅಂದರೆ ಒಂದೊಂದು ಮೂಲಮಂತ್ರಭಾಗವನ್ನು ಸೇರಿಸಿ ಹೃದಯಾಯ ನಮಃ, ಶಿರಸೇ ನಮಃ, ಶಿಖಾಯೈ ನಮಃ, ಕವಚಾಯ ನಮಃ ನೇತ್ರತ್ರಯಾಯ ನಮಃ ಮತ್ತು ಅಸ್ತ್ರಾಯ ನಮಃ ಎಂದು ಹೇಳಿ ಪ್ರಥಮಾವರಣ ಪೂಜೆಯನ್ನು ಸಲ್ಲಿಸಬೇಕು. ಅದರಂತೆಯೇ ಅಣಿಮಾಯೈ ನಮಃ, ಮಹಿಮಾಯೈ ನಮಃ, ಗರಿಮಾಯೈ ನಮಃ, ಲಘಿಮಾಯೈ ನಮಃ, ಪ್ರಾಪ್ತ್ಯೈ ನಮಃ, ಪ್ರಾಕಾಮ್ಯೈ ನಮಃ, ಈಶಿತ್ವಾಯೈ ನಮಃ, ವಶಿತ್ವಾಯೈ ನಮಃ, ಈ ಬಗೆಯ ಅಷ್ಟಸಿದ್ಧಿಗಳನ್ನು ಹೆಸರಿಸಿ ದ್ವಿತೀಯಾವರಣ ಪೂಜೆಯನ್ನು ಸಲ್ಲಿಸಬೇಕು.

ಅದರಂತೆಯೇ ಇಚ್ಛಾಶಕ್ತ್ಯೈ ನಮಃ ಕ್ರಿಯಾಶಕ್ತ್ಯೈ ನಮಃ, ಜ್ಞಾನಶಕ್ತ್ಯೈ ನಮಃ, ಚಿತ್‌ಶಕ್ತ್ಯೈ ನಮಃ ಸಂವಿತ್ ಶಕ್ತ್ಯೈ ನಮಃ, ಮಾಯಾಶಕ್ತ್ಯೈ ನಮಃ, ವಿಲಾಸಿನೀ ಶಕ್ತ್ಯೈ ನಮಃ, ಸೂಕ್ಷ್ಮಶಕ್ತ್ಯೈ ನಮಃ, ಮಹಾ ಶಕ್ತ್ಯೈ ನಮಃ. ಮತ್ತು ವ್ಯಾಪಿನೀಶಕ್ತ್ಯೈ ನಮಃ, ಎಂದು ಈ ವಿಧವಾದ ದಶವಿಧವಾದ ಶಕ್ತಿಗಳನ್ನು ಹೆಸರಿಸಿ ತೃತೀಯಾವರಣ ಪೂಜೆಯನ್ನು ಸಲ್ಲಿಸಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

ಜಾಗ್ರತಾ ತಾಪಿನೀ ವೇದ- ‡ ಗರ್ಭಾ ದಹನರೂಪಿಣೀ ।
ಸೇಂದು ಖಂಡಾ ಶುಂಭಹನ್ತ್ರೀ ‡ ವಾಗೀಶ್ವರೀ ಮುದಾವಹಾ ॥೪೭॥

ಮನೋಜವಾ ಸೋಮರೂಪಾ ‡ ಮರುದ್ವೇಗಾ ನಿಶಾಹ್ವಯಾ ।
ಯಶೋವತೀ ತೀವ್ರಕೋಪಾ ‡ ತೋಯರೂಪಾ ದಯಾವತೀ ॥೪೮॥

ತಿರಸ್ಕ್ರಿಯಾ ತಾಪಹಾರೀ ‡ ಪ್ರಾಜ್ಞಾಽಽರಾಧ್ಯಾಽಮರಪ್ರಿಯಾ ।
ನಂದಿನೀ ರಿಪುಮರ್ದಿನ್ಯೌ ‡ ತಿಗ್ಮಾ ದುರ್ಗಾ ಚ ದಂಡಿನೀ ॥೪೯॥

---

ಶಂಖಾಯ ನಮಃ, ಚಕ್ರಾಯ ನಮಃ ಅಭಯಾಯ ನಮಃ ಮತ್ತು ವರದಾಯ ನಮಃ ಎಂಬ ನಾಲ್ಕು ವಿಧ ಮುದ್ರಾಯುಧಗಳನ್ನು ಹೆಸರಿಸಿ ಚತುರ್ಥಾವರಣಪೂಜೆಯನ್ನು ದೇವಿಗೆ ಸಲ್ಲಿಸಬೇಕು.

---

ವಾಮಾಯೈ ನಮಃ ಜ್ಯೇಷ್ಠಾಯೈ ನಮಃ, ರೌದ್ರ್ಯೈ ನಮಃ, ಕಾಲ್ಯೈ ನಮಃ. ಕಲವಿಕರಿಣ್ಯೈ ನಮಃ, ಬಲವಿಕರಿಣ್ಯೈ ನಮಃ, ಬಲಪ್ರಮಥಿನ್ಯೈ ನಮಃ, ಸರ್ವಭೂತದಮನ್ಯೈ ನಮಃ, ಮನೋನ್ಮನ್ಯೈ ನಮಃ ಈ ವಿಧವಾದ ನವನಾಮಗಳನ್ನು ಹೆಸರಿಸಿ ಪಂಚಮಾವರಣಪೂಜೆಯನ್ನು ದೇವಿಗೆ ಸಲ್ಲಿಸಬೇಕು.

ಓಂ ಜಾಗ್ರತಾಯೈ ನಮಃ, ಓಂ ತಾಪಿನ್ಯೈ ನಮಃ, ಓಂ ವೇದಗರ್ಭಾಯೈ ನಮಃ, ಓಂ ದಹನರೂಪಿಣ್ಯೈ ನಮಃ, ಓಂ ಸೇಂದುಖಂಡಾಯೈ ನಮಃ, ಓಂ ಶುಂಭಹಂತ್ರ್ಯೈ ನಮಃ, ಓಂ ವಾಗೀಶ್ವರ್ಯೈ ನಮಃ, ಓಂ ಮುದಾವಹಾಯೈ ನಮಃ, ಓಂ ಮನೋಜವಾಯೈ ನಮಃ, ಓಂ ಸೋಮರೂಪಾಯೈ ನಮಃ, ಓಂ ಮರುದ್ವೇಗಾಯೈ ನಮಃ, ಓಂ ನಿಶಾಹ್ವಯಾಯೈ ನಮಃ. ಓಂ ಯಶೋವತ್ಯೈ ನಮಃ ಓಂ ತೀವ್ರಕೋಪಾಯೈ ನಮಃ, ಓಂ ತೋಯರೂಪಾಯೈ ನಮಃ, ಓಂ ದಯಾವತ್ಯೈ ನಮಃ, ಓಂ ತಿರಸ್ಕ್ರಿಯಾಯೈ ನಮಃ, ಓಂ ತಾಪಹಾರ್ಯೈ ನಮಃ, ಓಂ ಪ್ರಾಜ್ಞಾಯೈ ನಮಃ. ಓಂ ಆರಾಧ್ಯಾಯೈ ನಮಃ ಓಂ ಅಮರಪ್ರಿಯಾಯೈ ನಮಃ,

Sri Vidyabharathi Book Centre, Sringeri

CC-O. In Public Domain. Digitized by eGangotri

ಗಾಯಿತ್ರೀ ನಿರಪತ್ನಾ ಚ ‡ ವಿಶಾಲಾಕ್ಷೀ ಚ ನಾದಿನೀ ।
ವೇದನಾ ವಹ್ನಿಗರ್ಭಾ ಚ ‡ ಸೂರ್ಯಾಖ್ಯಾ ಸಿಹವಾಹಿನೀ ॥೫೦॥

ದುಃಸಹಾ ಚ ಶಿರಂಸ್ಥಾ ಚ ‡ ತಾಪಸಂಹಾರಿಣ್ಯನಾತುರಾ ।
ತ್ಯಕ್ತದೋಷಾ ನಿಃಸಪತ್ನಾ ‡ ಚೈತಾಃ ಷಷ್ಠಾವೃತಾ ಯಜೇತ್ ॥೫೧॥

ಸಪ್ತಮಾವರಣೇ ಪೂಜ್ಯಾಃ ‡ ಸಿಹ್ಮೋ ಭದ್ರೋ ಹಿಮಾಚಲಃ ।
ಮೇರುಃ ತ್ರಿಕೂಟಃ ಪಾರ್ಯಾತ್ರೋ ‡ ಗಂಧಮಾದನ ಏವ ಚ ॥೫೨॥

---

ಓಂ ನಂದಿನ್ಯೈ ನಮಃ, ಓಂ ರಿಪುಮರ್ದಿನ್ಯೈ ನಮಃ, ಓಂ ತಿಗ್ಮಾಯೈ ನಮಃ, ಓಂ ದುರ್ಗಾಯೈ ನಮಃ, ಓಂ ದಂಡಿನ್ಯೈ ನಮಃ, ಓಂ ಗಾಯತ್ರ್ಯೈ ನಮಃ, ಓಂ ನಿರಪತ್ಯಾಯೈ ನಮಃ, ಓಂ ವಿಶಾಲಾಕ್ಷ್ಯೈ ನಮಃ, ಓಂ ನಾದಿನ್ಯೈ ನಮಃ, ಓಂ ವೇದನಾಯೈ ನಮಃ, ಓಂ ವಹ್ನಿಗರ್ಭಾಯೈ ನಮಃ, ಓಂ ಸೂರ್ಯಾಖ್ಯಾಯೈ ನಮಃ, ಓಂ ಸಿಂಹವಾಹಿನ್ಯೈ ನಮಃ, ಓಂ ದುಃಸಹಾಯೈ ನಮಃ, ಓಂ ಶಿರಂಸ್ಥಾಯೈ ನಮಃ, ಓಂ ತಾಪಹಾರಿಣ್ಯೈ ನಮಃ, ಓಂ ಅನಾತುರಾಯೈ ನಮಃ, ಓಂ ತ್ಯಕ್ತದೋಷಾಯೈ ನಮಃ, ಓಂ ನಿಃಸಪತ್ನಾಯೈ ನಮಃ ಈ ನಾಮಗಳ ಉಚ್ಚಾರಣೆಯಿಂದ ಷಷ್ಠಾವರಣ ಪೂಜೆಯನ್ನು ದೇವಿಗೆ ಸಲ್ಲಿಸಬೇಕು.

ಓಂ ಸಿಹ್ಮಾಯೈ ನಮಃ, ಓಂ ಭದ್ರಾಯೈ ನಮಃ, ಓಂ ಹಿಮಾಚಲಾಯೈ ನಮಃ, ಓಂ ಮೇರವೇ ನಮಃ, ಓಂ ತ್ರಿಕೂಟಾಯೈ ನಮಃ, ಓಂ ಪಾರಿಯಾತ್ರಾಯೈ ನಮಃ, ಓಂ ಗಂಧಮಾಧನಾಯೈ ನಮಃ, ಓಂ ಮಲಯಾಯೈ ನಮಃ, ಓಂ ದರ್ದುರಾಯೈ ನಮಃ, ಓಂ ಸಂಜೀವಕಾಯೈ ನಮಃ, (ಇಷ್ಟನ್ನು ಹೇಳಿ ಮತ್ತೆ ಈ ಪರ್ವತಗಳ ನಡುಸ್ಥಾನದಲ್ಲಿ) ಓಂ ಬ್ರಾಹ್ಮ್ಯೈ ನಮಃ, ಓಂ ಮಾಹೇಶ್ವರ್ಯೈ ನಮಃ, ಓಂ ಕೌಮಾರ್ಯೈ ನಮಃ,

Sri Vidyabharathi Book Centre, Sringeri

CC-O. In Public Domain. Digitized by eGangotri



ಮಲಯೋ ದರ್ದುರಶ್ಚಾಪಿ ‡ ಸಂಜೀವಕ ಇವೋ ಪುನಃ ।
ಗಿರ್ಯಂತರಾಳೇ ಬ್ರಾಹ್ಮ್ಯಾದಿ ‡ ಮಾತರೋಽಷ್ಟೌ ಪ್ರಪೂಜಯೇತ್ ॥೫೩॥

ಗಿರಿಪರ್ವಸು ಚಾನ್ಯತ್ರ ‡ ಯಜೇತ್ ಅಷ್ಟೌ ಚ ಭೈರವಾನ್ ।
ಅಷ್ಟಮಾವರಣೇ ಪೂಜ್ಯಾ ‡ ಇಂದ್ರಾದ್ಯಾಃ ಲೋಕಪಾಲಕಾಃ ॥೫೪॥

ನವಮಾವರಣೇ ಚೈವ ‡ ವಜ್ರಾದೀನಿ ಪ್ರಪೂಜಯೇತ್ ।
ಏವಮಾವರಣಾನ್ಯತ್ರ ‡ ಪ್ರೋಕ್ತಾನಿ ನವ ವಾಸವ ॥೫೫॥

---

ಓಂ ವಾರಾಹ್ಯೈ ನಮಃ, ಓಂ ಇಂದ್ರಾಣ್ಯೈ ನಮಃ. ಓಂ ಚಾಮುಂಡಾಯೈ ನಮಃ. ಓಂ ಮಹಾಲಕ್ಷ್ಮ್ಯೈ ನಮಃ, (ಈ ವಿಧವಾದ ಅಷ್ಟ ಮಾತುರಗಳ ಹೆಸರಿನಿಂದ ಪೂಜಿಸಬೇಕು.) ಪರ್ವತಗಳ ಪಕ್ಕಗಳಲ್ಲಿ ಓಂ ಅಸಿತಾಂತ-ಭೈರವಾಯ ನಮಃ, ಓಂ ಕ್ರೂರಭೈರವಾಯ ನಮಃ, ಓಂ ಚಂಡ ಭೈರವಾಯ ನಮಃ, ಓಂ ಕ್ರೋಧಭೈರವಾಯ ನಮಃ, ಓಂ ಉನ್ಮತ್ತ ಭೈರವಾಯ ನಮಃ. ಓಂ ಕಪಿಲಭೈರವಾಯ ನಮಃ, ಓಂ ಭೀಷಣ ಭೈರವಾಯ ನಮಃ, ಓಂ ಸಂಹಾರಭೈರವಾಯ ನಮಃ ಎಂಬ ಅಷ್ಟಭೈರವಗಳನ್ನು ಹೆಸರಿಸಿ ಸಪ್ತಮಾವರಣಪೂಜೆಯನ್ನು ಅರ್ಪಿಸಬೇಕು.

ಓಂ ಇಂದ್ರಾಯ ನಮಃ, ಓಂ ಅಗ್ನಯೇ ನಮಃ, ಓಂ ಯಮಾಯ ನಮಃ, ಓಂ ನಿರರುತಯೇ ನಮಃ, ಓಂ ವರುಣಾಯ ನಮಃ, ಓಂ ವಾಯುವೇ ನಮಃ, ಓಂ ಕುಬೇರಾಯ ನಮಃ, ಓಂ ಈಶಾನಾಯ ನಮಃ ಈ ಬಗೆಯಾಗಿ ಅಷ್ಟದಿಕ್ಪಾಲಕರುಗಳ ಹೆಸರಿನಿಂದ ನಮಃ ಪೂರ್ವಕವಾಗಿ ಅಷ್ಟಮಾವರಣಪೂಜೆಯನ್ನು ಸಲ್ಲಿಸಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri



ಅಥ ತತ್ತತ್ ದೇವತಾನಾಂ ‡ ಧ್ಯಾನಾನ್ಯಪಿ ಚ ಕಾನಿಚೇತ್ ।
ಉಕ್ತ್ವಾತು ಶ್ರೀಮಹಾಲಕ್ಷ್ಮ್ಯಾಃ ‡ ಧ್ಯಾನಾದ್ಯಂ ಯದಿಹೋಚ್ಯತೇ ॥೫೬॥

ಶೇಷಪರ್ಯಂಕಶಯನಂ ‡ ಪೀತಕೌಶೇಯ ವಾಸಸಂ
ಶಂಖಚಕ್ರಗದಾಪದ್ಮ ಧಾರಿಣಂ ವನಮಾಲಿನಂ ॥೫೭॥

ಸ್ವತೇಜಸಾ ಪ್ರಜ್ವಲಂತಂ ‡ ಶಾಂತಂ ಸರ್ವೇಶ್ವರಂ ಹರಿಂ ।
ಶ್ಯಾಮಂ ಯೋಗಿಹೃದಾರಾಮಂ ‡ ವಂದೇ ಶ್ರೀ ಪುರುಷೋತ್ತಮಂ ॥೫೮॥

---

ಓಂ ಶಕ್ತಯೇ ನಮಃ, ಓಂ ದಂಡಾಯ ನಮಃ, ಓಂ ಖಡ್ಗಾಯ ನಮಃ, ಓಂ ಪಾಶಾಯ ನಮಃ, ಓಂ ಅಂಕುಶಾಯ ನಮಃ, ಓಂ ಗದಾಯ ನಮಃ, ಓಂ ತ್ರಿಶೂಲಾಯ ನಮಃ, ಓಂ ಚಕ್ರಾಯ ನಮಃ, ಓಂ ಪದ್ಮಾಯ ನಮಃ, ಇತಿ ನವಮಾವರಣ ದೇವತಾಭ್ಯೋ ನಮಃ, ನವಮಾವರಣ ಪೂಜಾಂ ಸಮರ್ಪಯಾಮಿ.

ಇಂದ್ರ ! ಕೇಳು, ಈ ಮೇಲಿನ ನವಾವರಣ ಪೂಜಾಕ್ರಮವನ್ನು ನಿನಗೆ ತಿಳಿಸಿದ್ದಾಯಿತು. ಆ ಬಳಿಕ ಆಯಾ ದೇವತೆಗಳ ಧ್ಯಾನಕ್ರಮಗಳನ್ನು ತಿಳಿಸಿ ಅನಂತರ ಶ್ರೀ ಮಹಾಲಕ್ಷ್ಮೀ ದೇವಿಯ ಧ್ಯಾನಕ್ರಮವನ್ನು ತಿಳಿಸುವೆನು ಕೇಳು.

ಆದಿಶೇಷನನ್ನೇ ಮಂಚವನ್ನಾಗಿ ಮಾಡಿಕೊಂಡು ಅವರಲ್ಲಿ ಪವಡಿಸಿರುವ ಹಳದಿ ರೇಷ್ಮೆಯ ಉಡಿಗೆಯನ್ನುಟ್ಟಿರುವ, ತನ್ನ ಕೈಗಳಲ್ಲಿ ಶಂಖ, ಚಕ್ರ, ಗದಾ, ಪದ್ಮ ಇವುಗಳನ್ನು ಧರಿಸಿರುವ, ಕೊರಳಲ್ಲಿ ತುಳಸೀ ದಂಡೆಯಿಂದ ಅಲಂಕೃತನಾಗಿರುವ, ಆತ್ಮಜ್ಯೋತಿಯಿಂದ ಬೆಳಗುತ್ತಿರುವ, ಪ್ರಶಾಂತನೂ ಸಮಸ್ತರಿಗೂ ಒಡೆಯನೂ ಆಗಿರುವ, ಭಕ್ತರ ಎಡರುಗಳನ್ನು ಪರಿಹರಿಸಿ, ಅವರಿಗೆ ಸುಖಸಂತೋಷಗಳನ್ನು ನೀಡುತ್ತಿರುವ, ನೀಲವರ್ಣದ ಮೈಬಣ್ಣ ವನ್ನುಳ್ಳ ಅಲ್ಲದೆ ಯೋಗಿಗಳ ಹೃದಯದಲ್ಲಿ ಆನಂದದಿಂದ ಸದಾ ನೆಲೆಸಿರುವ,

Sri Vidyabharathi Book Centre, Sringeri

CC-O. In Public Domain. Digitized by eGangotri



ಪದ್ಮಾಸನಸ್ಥಿತಾಂ ದೇವೀಂ ‡ ಪದ್ಮಮಿತ್ರಾಯುತಪ್ರಭಾಂ
ಪದ್ಮಜಾದಿಸ್ತುತಾಂ ಶಾಂತಾಂ ‡ ಪದ್ಮಪತ್ರಾಯಿತೇಕ್ಷಣಾಂ ॥೫೯॥

ಧೃತಪಾಶಾಂಕುಶಾಭೀತಿ ‡ ವರದಾಂ ಭೂತಿದಾಯಿನೀಂ ।
ಸತ್ಪೀತಾಂಬರಲಸತ್ಭೂಷಾ ‡ ಲಂಕೃತಾಂ ವಿಶ್ವಮೋಹಿನೀಂ ॥೬೦॥

ಸುವರ್ಣವರ್ಣಾಂ ಸೌಂದರ್ಯ ‡ ಜಿತ ಕೋಟಿ ರತಿಂ ಸತೀಂ ।
ಶ್ರೀಪದ್ಮನಾಭ ದಯಿತಾಂ ‡ ಮಹಾಲಕ್ಷ್ಮೀಂ ವಿಭಾವಯೇ ॥೬೧॥

---

ಪುರುಷೋತ್ತಮನಾದ ಶ್ರೀಹರಿಯನ್ನು ಧ್ಯಾನಿಸುತ್ತೇನೆ ಎಂದು ವಿಷ್ಣುದೇವನ ಧ್ಯಾನವನ್ನು ಮಾಡಿದ ಬಳಿಕ ಪದ್ಮಾಸನದಲ್ಲಿ ಕುಳಿತಿರುವ, ಹತ್ತು ಸಾವಿರ ಸೂರ್ಯರಂತೆ ಆತ್ಮಪ್ರಕಾಶದಿಂದ ಬೆಳಗುತ್ತಿರುವ, ಬ್ರಹ್ಮನೇ ಮೊದಲಾದವರಿಂದ ಹೊಗಳಲ್ಪಡುತ್ತಿರುವ, ಶಾಂತಸ್ವರೂಪಿಣಿಯೆನಿಸಿರುವ, ಕಮಲದಂತೆ ವಿಶಾಲವಾದ ಕಣ್ಣುಗಳಿಂದ ಶೋಭಿತಳಾದ, ಕೈಗಳಲ್ಲಿ ಪಾಶ, ಅಂಕುಶ, ವರದ ಮತ್ತು ಅಭಯ ಮುದ್ರೆಗಳನ್ನು ಧರಿಸಿರುವ, ಭಕ್ತರಿಗೆ ಅಪರಿಮಿತ ಐಶ್ವರ್ಯವನ್ನು ಕೊಡುವವಳಾದ, ಹೊಳೆಹೊಳೆಯುವ ಪೀತಾಂಬರವನ್ನು ಧರಿಸಿರುವ, ಮತ್ತು ನವರತ್ನ ದಿವ್ಯಾಭರಣಗಳಿಂದಲಂಕೃತಳಾದ ಜಗತ್ತನ್ನೇ ತನ್ನ ಸೌಂದರ್ಯದಿಂದ ಮರುಳುಮಾಡುತ್ತಿರುವ, ಚಿನ್ನದಂತೆ ಹೊಂಬಣ್ಣದಿಂದ ಬೆಳಗುತ್ತಿರುವ, ಅಲ್ಲದೆ ತನ್ನ ಸೌಂದರ್ಯದಿಂದ ಹತ್ತು ಕೋಟಿ ರತಿಯರ ಸೌಂದರ್ಯವನ್ನು ಜಯಿಸಿರುವ ಮಹಾ ಪತಿವ್ರತಾ ಶಿರೋಮಣಿಯೆನಿಸಿದ ಶ್ರೀ ಪದ್ಮನಾಭನೆನಿಸಿದ ಶ್ರೀಮನ್ನಾರಾಯಣನ ಪ್ರೇಯಸಿಯೆನಿಸಿದ ಶ್ರೀ ಮಹಾಲಕ್ಷ್ಮಿಯನ್ನು ಮನಸ್ಸಿನಲ್ಲಿ ಸ್ಮರಿಸುವೆನು.

Sri Vidyabharathi Book Centre, Sringeri

CC-O. In Public Domain. Digitized by eGangotri


ಸರಸ್ವತೀಂ ಶುಕ್ಲವರ್ಣಾಂ ‡ ಸಂಸ್ಥಿತಾಂ ಸುಮನೋಹರಾಂ ।
ಕೋಟಿ ಚಂದ್ರಪ್ರಭಾಮುಷ್ಟ ‡ ಪುಷ್ಟಶ್ರೀಯುಕ್ತವಿಗ್ರಹಾಂ ॥೬೨॥
ವಹ್ನಿಶುದ್ಧಾಂಶುಕಾಧಾನಾಂ ‡ ವೀಣಾಪುಸ್ತಕಧಾರಿಣೀಂ ।
ರತ್ನಸಾರೇಂದ್ರನಿರ್ಮಾಣ- ‡ ನವಭೂಷಣ ಭೂಷಿತಾಂ ॥೬೩॥
ಸಂಪೂಜಿತಾಂ ಸುರಗಣೈಃ ‡ ಬ್ರಹ್ಮವಿಷ್ಣುಶಿವಾದಿಭಿಃ ।
ವಂದೇ ಭಕ್ತ್ಯಾ ವಂದಿತಾಂ ಚ ‡ ಮುನೀಂದ್ರಮನುಮಾನವೈಃ
॥೬೪॥

ಸದಾ ರಕ್ಷತು ನೋ ದೇವೀ ‡ ಸರ್ವಲೋಕವಿಮೋಹಿನೀ ! ।
ಖಡ್ಗ-ಪಾತ್ರ-ಶಿರಃ-ಖೇಟೈಃ ‡ ಅಲಂಕೃತ ಚತುರ್ಭುಜಾ ॥೬೫॥

---

ವಾಕ್ಕಿಗೆ ಅಧಿದೇವತೆಯೆನಿಸಿದ, ಶುಭ್ರಶರೀರವುಳ್ಳ, ಮನೋಹರವಾದ ರೂಪವನ್ನೂ ಧರಿಸಿರುವ ಅಲ್ಲದೆ, ಕೋಟಿಚಂದ್ರಕಾಂತಿಯನ್ನು ಮೀರಿದ ದೇಹಕಾಂತಿಯುಳ್ಳ, ಅಗ್ನಿಯಲ್ಲಿ ಪರಿಶುದ್ಧವಾದ ಚಿನ್ನದ ಬಣ್ಣವುಳ್ಳ ಪೀತಾಂಬರವನ್ನು ಧರಿಸಿರುವ, ಒಂದು ಕೈಯಲ್ಲಿ ಪುಸ್ತಕ, ಮತ್ತೊಂದರಲ್ಲಿ ವೀಣೆ ಇವುಗಳನ್ನು ಧರಿಸಿರುವ, ಅನರ್ಘ್ಯರತ್ನಗಳಿಂದ ಖಚಿತವಾದ ಆಭರಣಗಳಿಂದ ಅಲಂಕೃತಳಾದ, ಬ್ರಹ್ಮ ವಿಷ್ಣು ಮಹೇಶ್ವರರೆಂಬ ತ್ರಿಮೂರ್ತಿಗಳೇ ಮೊದಲಾದ ದೇವತಾಶ್ರೇಷ್ಠರಿಂದ ಪೂಜಿಸಲ್ಪಡುತ್ತಿರುವ, ಅಲ್ಲದೆ ಮುನೀಂದ್ರರೂ, ಮಾನವಶ್ರೇಷ್ಠರೂ ಇವರುಗಳಿಂದ ವಂದಿತಳಾದ, ತನ್ನ ಸೌಂದರ್ಯದಿಂದ ಸಮಸ್ತಲೋಕಗಳನ್ನೂ ಮೋಹಗೊಳಿಸುತ್ತಿರುವ ದೇವಿಯು ಸದಾ ನಮ್ಮನ್ನು ರಕ್ಷಿಸಲಿ.

ಅಲ್ಲದೆ ಖಡ್ಗ, ಪಾನಪಾತ್ರೆ, ಶಿರಸ್ಸು ಮತ್ತು ಖೇಟ ಇವುಗಳಿಂದ ಅಲಂಕೃತವಾದ ಕೈಗಳುಳ್ಳ, ಸಣ್ಣನಡು, ವಿಸ್ತಾರವಾದ ಮೂರುಕಣ್ಣುಗಳು, ಮುಂಡಗಳ ಹಾರ, ರುಂಡಮಾಲೆ ಇವುಗಳನ್ನು ಧರಿಸಿರುವ, ಅಲ್ಲದೆ ಅಂಜನಾಪರ್ವತದಂತೆ, ನೀಲವರ್ಣದ ಶರೀರವುಳ್ಳ, ಕೋರೆದಾಡೆಗಳಿಂದ ಕೂಡಿದ ಭಯಂಕರವಾದ ಬಾಯುಳ್ಳ, ಸಮಸ್ತ ದೇವತೆಗಳಿಂದ ಭಕ್ತಿಯಿಂದ ಪೂಜಿತಳಾದ ಮಹಾಕಾಳಿಯು ನಮ್ಮೆಲ್ಲರನ್ನೂ ರಕ್ಷಿಸಲಿ.

Sri Vidyabharathi Book Centre, Sringeri

CC-O. In Public Domain. Digitized by eGangotri



ತನುಮಧ್ಯಾ ಸುವಿಸ್ತಾರ- ‡ ನಯನತ್ರಿತಯಾನ್ವಿತಾ ।
ಕಬಂಧಹಾರಂ ಶಿರಸಾ ‡ ಬಿಭ್ರಾಣಾಹಿ ಶಿರಸ್ರಜಂ ॥೬೬॥

ಅಂಜನಾದ್ರಿ ಸಮಾನಾಭಾ ‡ ದಂಷ್ಟ್ರಾಂಚಿತ ವದಾನನಾ !
ಸರ್ವದೇವಾರ್ಚಿತಾ ನಿತ್ಯಂ ‡ ಮಹಾಕಾಲೀ ವರಪ್ರದಾ ॥೬೭॥

ಪಂಚವಕ್ತ್ರಂ ತ್ರಿನೇತ್ರಂ ಚ ‡ ಶುದ್ಧಸ್ಫಟಿಕಸನ್ನಿಭಂ !
ವರಾಭಯಪರಶ್ವೇಣ- ‡ ಪಾಣಿಂ ಕೋಟಿರವಿಪ್ರಭಂ ॥೬೮॥

ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ ಮತ್ತು ಈಶಾನ ಎಂಬ ಹೆಸರುಳ್ಳ ಐದು ಮುಖಗಳನ್ನುಳ್ಳ, ಸೂರ್ಯ, ಚಂದ್ರ ಮತ್ತು ಅಗ್ನಿ ಎಂಬ ಈ ಮೂರು ತೇಜಸ್ಸ್ವರೂಪಗಳನ್ನೇ ಕಣ್ಣುಗಳನ್ನಾಗಿ ಉಳ್ಳ, ನಿರ್ಮಲವಾದ ಸ್ಫಟಿಕದಂತೆ ಶುಭ್ರದೇಹವನ್ನು ಧರಿಸಿರುವ, ವರ, ಅಭಯ ಕೊಡಲಿ ಮತ್ತು ಜಿಂಕೆ ಇವುಗಳನ್ನು ಕೈಗಳಲ್ಲಿ ಧರಿಸಿರುವ ಕೋಟಿ ಸೂರ್ಯರಂತೆ ಬೆಳಗುವ, ಸರ್ವಾಂಗಸುಂದರನಾದ ಹಾದ, ಹದಿನಾರು ವರ್ಷದ ಯುವಕನಂತಿರುವವನಾದರೂ ಜಗದ್ಗುರುವೆನಿಸಿದ, ಭಕ್ತರ ಇಷ್ಟಾರ್ಥವನ್ನು ಸಲ್ಲಿಸುವ ಕಲ್ಪವೃಕ್ಷದಂತಿರುವ, ಮತ್ತು ಶಾಂತಸ್ವರೂಪಿಯಾದ ಪರಮೇಶ್ವರನನ್ನು ನಮಸ್ಕರಿಸುತ್ತೇನೆ.

ಅಲ್ಲದೆ ಪತಿಸಮೇತಳಾಗಿಯೂ, ಸಹಸ್ರದಳದ ಪದ್ಮಚಕ್ರದಲ್ಲಿ ಸದಾ ವಿಹರಿಸುತ್ತಿರುವವಳೂ, ನಾಲ್ಕು ಕೈಗಳೂ, ಮತ್ತು ಮೂರು ಕಣ್ಣುಗಳುಳ್ಳವಳಾಗಿ ಕೋಟಿಮಿಂಚುಗಳ ಕಾಂತಿಯಿಂದ ಬೆಳಗುವವಳೂ, ಶಂಖ ಚಕ್ರ ವರದ ಮತ್ತು ಅಭಯಮುದ್ರೆಗಳನ್ನು ಕೈಗಳಲ್ಲಿ ದರಿಸಿದವಳೂ, ಅತ್ಯಂತ ರಮಣೀಯವಾದ ಸೌಂದರ್ಯಶಾಲಿನಿಯೂ, ಹೊಳೆಹೊಳೆಯುವ ಕಿರೀಟ ಕಿವಿಯ ಓಲೆಗಳು, ವಡ್ಯಾಣ, ಮುಕ್ತಾಹಾರ ಇವುಗಳಿಂದ ಅಲಂಕೃತಳೂ, ಪೀತಾಂಬರಧಾರಣೆಯೂ, ಲೋಕಮಾತೆಯಂತಿರುವವಳೂ, ಸ್ವರ್ಣದಂತೆ ಮೈಬಣ್ಣವುಳ್ಳವಳೂ, ಭಕ್ತರ ಇಷ್ಟಾರ್ಥವನ್ನು ಸಲ್ಲಿಸುವವಳೂ, ಲೋಕಮಂಗಳಕ್ಕೆ ಕಾರಣಭೂತಳೂ, ಮಹೇಶ್ವರನ ಧರ್ಮಪತ್ನಿಯೂ ಆದ ಮಹಾಲಕ್ಷ್ಮೀದೇವಿಯನ್ನು ನಾನು ಮನಸಾರ ಭಜಿಸುತ್ತೇನೆ.

Sri-Vidyabharathi Book Centre, Sringeri

CC-O. In Public Domain. Digitized by eGangotri


ಸರ್ವಾಂಗಸುಂದರಂ ನಿತ್ಯಂ ‡ ಷೋಡಶಾಬ್ದಂ ಜಗದ್ಗುರುಂ
ಭಕ್ತ ಕಲ್ಪದ್ರುಮಂ ಶಾಂತಂ ‡ ವಂದೇ ಶ್ರೀಪರಮೇಶ್ವರಂ ॥೧೯॥

ಸಹಪತ್ನ್ಯಾ ಸಹಸ್ರಾರ- ‡ ಮಹಾಪದ್ಮ ವಿಹಾರಿಣೀಂ ।
ಚತುರ್ಭುಜಾಂ ತ್ರಿನಯನಾಂ ‡ ವಿದ್ಯುತ್ಕೋಟಿ ಸಮಪ್ರಭಾಂ
॥೨೦॥

ಶಂಖಚಕ್ರವರಾಭೀತೀಃ ‡ ಬಿಭ್ರತೀಂ ಅತಿಸುಂದರೀಂ ।
ಜ್ವಲನ್ಮಕುಟತಾಟಂಕ- ‡ ಕಾಂಚೀಹಾರಾದಿ ರಂಜಿತಾಂ ॥೨೧॥

ಪೀತಾಂಬರಧರಾಂ ಅಂಬಾಂ ‡ ಹೇಮಬಾಂ ಕಾಮಭಾಂ ಶಿವಾಂ ।
ಶ್ರೀಮನ್ಮಹೇಶಮಹಿಷೀಂ ‡ ಮಹಾಲಕ್ಷ್ಮೀಂ ಅಹಂ ಭಜೇ ॥೨೨॥

ಆಗಚ್ಛ ಸಚ್ಚಿದಾನಂದ- ‡ ಮೂರ್ತೇ ! ಶ್ರೀಪರಮೇಶ್ವರಿಂ ! ।
ಗೃಹಾಣಸಹಪತ್ನ್ಯಾ ತ್ವಂ ‡ ಇಮಾಂ ಪೂಜಾಂ ಸಭಕ್ತಿಕಾಂ ॥೨೩॥

---

ಭೋ ಸಚ್ಚಿದಾನಂದ ಮೂರ್ತಿಯೆನಿಸಿದ, ಪರಮೇಶ್ವರಿಯೆಂಬ ನಾಮವನ್ನು ತಳೆದು ಲೋಕಜನನಿ! ದಯವಿಟ್ಟು ನಿನ್ನ ಪತಿಯಿಂದೊಡಗೂಡಿ ಬಾ. ಇದೇ ನಾನು ಭಕ್ತಿಯಿಂದ ಸಮರ್ಪಿಸುತ್ತಿರುವ ಪೂಜೆಯನ್ನು ಸ್ವೀಕರಿಸು, ಅಲ್ಲದೆ ವಜ್ರ ಮಾಣಿಕ್ಯ, ಇವುಗಳಿಂದ ಖಚಿತವಾದ ಆಭರಣಗಳನ್ನು ನಿನ್ನ ಪ್ರೀತಿಗಾಗಿ ನಾನು ಅರ್ಪಿಸುತ್ತಿದ್ದೇನೆ, ದಯವಿಟ್ಟು ಅವನ್ನು ಸ್ವೀಕರಿಸವವಳಾಗು.

ಭೋ ದೇವಿ ! ನೀನು ಅಜ್ಞಾನವೆಂಬ ಕಗ್ಗತ್ತಲೆಯನ್ನು ಹೋಗಲಾಡಿಸಿ, ಸುಜ್ಞಾನವನ್ನು ಮೂಡಿಸಬಲ್ಲವಳೇ ಕಾರುಣ್ಯಮೂರ್ತಿ !, ಅಂಜಲಿಬದ್ಧನಾಗಿ ನಮ್ರತೆಯಿಂದ ನಿನಗೆ ಸ್ವಾಗತವನ್ನು ಬಯಸುತ್ತೇನೆ. ಸುವರ್ಣಪಾತ್ರೆಯಲ್ಲಿರುವ, ದಿವ್ಯವಾದ ಸುಗಂಧದ್ರವ್ಯಗಳಿಂದ ಘಮಘಮಿಸುವ, ಶುದ್ಧೋದಕವನ್ನು ನಿನಗೆ ಪಾದಕ್ಷಾಲನೆಗಾಗಿ ಅರ್ಪಿಸುತ್ತಿದ್ದೇನೆ. ದಯವಿಟ್ಟು ಅದನ್ನು ಸ್ವೀಕರಿಸು.

Sri Vidyabharathi Book Centre, Sringeri

CC-O. In Public Domain. Digitized by eGangotri



ವಿಚಿತ್ರಂ ವಜ್ರಮಾಣಿಕ್ಯ- ‡ ಮುಕ್ತಾರತ್ನಾದಿರಂಜಿತಾಂ ।
ಹೇಮಸಿಹ್ಮಾಸನಂ ಚಾರು ‡ ಪ್ರೀತ್ಯರ್ಥಂ ಪ್ರತಿಗೃಹ್ಯತಾಂ ॥೭೪॥
ಅಜ್ಞಾನಧ್ವಾಂತವಿಧ್ವಂಸ- ‡ ತರಣೇ ಕರುಣಾನಿಧೇ ! ।
ಕೃತಾಂಜಲಿಪುಟಃ ತುಭ್ಯಂ ‡ ಸ್ವಾಗತೋಕ್ತಿಂ ನಿವೇದಯೇ ॥೭೫॥
ಸ್ವರ್ಣಪಾತ್ರಸ್ಥಿತಂ ತೋಯಂ ‡ ದಿವ್ಯಸೌರಭ್ಯಸಂಯುತಂ ।
ಸಮರ್ಪಯಾಮ್ಯಹಂ ಪಾದ್ಯಂ ‡ ಸಮ್ಯಕ್ ಸ್ವೀಕ್ರಿಯತಾಂ
ತ್ವಯಾ ॥೭೬॥

ಶುದ್ಧಗಂಧಾಕ್ಷತಫಲ- ‡ ಕುಶಾಗ್ರಕುಸುಮಾನ್ವಿತಂ ।
ಅರ್ಘ್ಯಂ ಸಮರ್ಪಿತಂ ಪ್ರೀತ್ಯಾ ‡ ಪ್ರತಿಗೃಹೀಷ್ವ ಸಾಂಪ್ರತಂ ॥೭೭॥
ಸುಸಂಸ್ಕೃತಂ ದಧಿಕ್ಷೀರ ‡ ಮಧ್ವಾಜ್ಯಸಲಿಲಾತ್ಮಕಂ ।
ಮಧುಪರ್ಕಂ ಇಮಂ ಸಮ್ಯಕ್ ‡ ಸ್ವೀಕರುಷ್ವ ಮಯಾರ್ಪಿತಂ
॥೭೮॥

---

ಆ ಬಳಿಕ ಶುಭ್ರವಾದ ಗಂಧ. ಅಕ್ಷತೆ, ಫಲ ಮತ್ತು ದರ್ಭೆಯ ಕುಡಿ ಮತ್ತು ಸುವಾಸನೆಯಿಂದ ಕೂಡಿದ ಹೂಗಳು. ಇವುಗಳಿಂದೊಡಗೂಡಿದ ದಿವ್ಯಜಲವನ್ನು ನಿನಗೆ ಅರ್ಘ್ಯ ರೂಪದಲ್ಲಿ ನಿವೇದಿಸುತ್ತಿದ್ದೇನೆ. ಕರುಣೆಯಿಂದ ಅದನ್ನು ಸ್ವೀಕರಿಸು.

ಆ ಬಳಿಕ ಅತ್ಯಂತಪರಿಶುದ್ಧವಾದ ಹಾಲು, ಮೊಸರು, ಜೇನುತುಪ್ಪ, ಮತ್ತು ಶುದ್ಧೋದಕ ಇವುಗಳಿಂದ ಕೂಡಿದುದನ್ನು ಮಧುಪರ್ಕವಾಗಿ ಸಮರ್ಪಿಸುತ್ತಿದ್ದೇನೆ. ಕೃಪೆಮಾಡಿ ಅದನ್ನು ಪರಿಗ್ರಹಿಸು.

ಅನಂತರ ಏಲಕ್ಕಿ. ಲವಂಗ. ಪಚ್ಚಕರ್ಪೂರ, ದಿವ್ಯ ಚಂದನ ಇವುಗಳಿಂದ ಸುವಾಸಿತವಾದ ಶುದ್ಧೋದಕವನ್ನು ನಿನ್ನ ಆಚಮನೀಯವನ್ನಾಗಿ ಮಾಡಿಕೊಳ್ಳಲು ಸಮರ್ಪಿಸುತ್ತಿದ್ದೇನೆ, ಕೃಪೆಮಾಡಿ ಅದನ್ನು ಪರಿಗ್ರಹಿಸು.

ಇದಾದ ಬಳಿಕ ಹಸುವಿನ ಹಾಲು, ಮೊಸರು, ತುಪ್ಪ, ಜೇನು, ಸಕ್ಕರೆ, ಫಲೋದಕ ಇವುಗಳನ್ನೂ ಮತ್ತು ಶುದ್ಧೋದಕವನ್ನು ನಿನಗೆ ಸ್ನಾನಾರ್ಥವಾಗಿ ಅರ್ಪಿಸುತ್ತಿದ್ದೇನೆ. ಕರುಣೆಯಿಂದ ಅದನ್ನು ಪರಿಗ್ರಹಿಸುವಂಥವಳಾಗು.

Sri Vidyabharathi Book Centre, Sringeri

CC-O. In Public Domain. Digitized by eGangotri



ಏಲಾಲವಂಗ ಕರ್ಪೂರ- ‡ ಚಂದನಾದ್ಯೈಃ ಸುವಾಸಿತಂ ।
ಪಾನೀಯಂ ನಿರ್ಮಲಂ ಚೈತತ್ ‡ ಗೃಹಾಣಾಚಮನೀಯಕಂ
॥೭೯॥

ಗೋಕ್ಷೀರಮುಖ್ಯಾಜ್ಯ ಮಧು- ‡ ಶರ್ಕರಾಂಗಂ ಸಮಂತ್ರಕಂ ।
ಪಂಚಾಮೃತಂ ಮಯಾ ದತ್ತಂ ‡ ಸ್ನಾನಾರ್ಥಂ ಪ್ರತಿಗೃಹ್ಯತಾಂ
॥೮೦।

ಗಂಗಾ ಸೌಪರ್ಣಿಕಾ-ತುಂಗಾ-‡ ವರದಾದಿನದೀಭವೈಃ ।
ಶುದ್ಧೋದಕೈಃ ವೇದಸೂಕ್ತ-‡ ಯುಕ್ತೈಃ ತ್ವಾಂ ಸ್ನಾಪ-
ಯಾಮ್ಯಹಂ ॥೮೧॥

ಬಹುಮೂಲ್ಯಂ ಚ ಕೌಶೇಯಂ ‡ ದುಕೂಲಂ ಸೋತ್ತರೀಯಕಂ ॥
ಸಮರ್ಪಿತಂ ಇದಂ ವಸ್ತ್ರಂ ‡ ಗೃಹಾಣ ಭುವನಾರಣೀ ! ॥೮೨॥
ತಪ್ತಕಾರ್ತಸ್ವರಕೃತಂ ‡ ಯಜ್ಞಸೂತ್ರಮನುತ್ತಮಂ ।
ಪ್ರಯಚ್ಛಾಮ್ಯಹ ಮೇಕೇನ ‡ ದೇಹಿ ಮೇ ಜ್ಞಾನ ಮುತ್ತಮಂ
॥೮೩॥

---

ಆ ಬಳಿಕ, ಭೋ ಮಹಾದೇವಿ ! ಗಂಗಾ, ಸೌಪರ್ಣಿಕಾ, ತುಂಗಾ, ವರದಾ ಇವೇ ಮೊದಲಾದ ಪವಿತ್ರನದಿಗಳಿಂದ ಸಂಗ್ರಹಿಸಿದ ಶುದ್ಧೋದಕಗಳಿಂದ ವೇದಮಂತ್ರಗಳನ್ನು ಪಠಿಸುತ್ತಾ ನಿನಗೆ ಸ್ನಾನಮಾಡಿಸುತ್ತೆನೆ. ಆ ಬಳಿಕ ಅನರ್ಘ್ಯವಾದ. ರೇಶ್ಮೆಯಿಂದ ನಿರ್ಮಿತವಾದ ಉಡುವ ಮತ್ತು ತೊಡುವ ವಸ್ತ್ರಗಳನ್ನು ನಿನಗೆ ಅರ್ಪಿಸುತ್ತೇನೆ. ಅವನ್ನು ಕೃಪೆಮಾಡಿ ಸ್ವೀಕರಿಸುವವಳಾಗು.

ನೀನು ಜಗತ್ ಸೃಷ್ಟಿ ಸ್ಥಿತಿಗಳಿಗೆ ಕಾರಣವಲ್ಲವೆ ? ಅನಂತರ ಅಪರಂಜಿಯಿಂದ ನಿರ್ಮಿತವಾದ ಯಜ್ಞೋಪವೀತವನ್ನು ನಿನಗೆ ಭಕ್ತಿಯಿಂದ ಸಮರ್ಪಿಸುತ್ತೇನೆ. ಅದನ್ನು ಸ್ವೀಕರಿಸಿ ನನಗೆ ಉತ್ತಮಜ್ಞಾನವನ್ನು ಅನುಗ್ರಹಿಸು ದೇವಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ರತ್ನಕುಂಡಲ- ಕೇಯೂರ-‡ ಕಿರೀಟಪದಕಾನ್ವಿತಂ ।
ಗೃಹ್ಣೀಶ್ವಾಭರಣಂ ರಮ್ಯಂ ‡ ಊರ್ಮಿಕಾದಿಯುತಂ ಪುನಃ
॥೮೪॥

ಮಲಯಾದ್ರಿ ಸಮುದ್ಭೂತಂ ‡ ಕಾಲಾಗುರು ಮಿಶ್ರಿತಂ ।
ಗಂಧಂ ದದಾಮಿ ಲೇಪಾರ್ಥಂ ‡ ಕಸ್ತೂರೀಕುಂಕುಮಾನ್ವಿತಂ
॥೮೫॥

ಮುಕ್ತಾಫಲಪ್ರತೀಕಾಶೈಃ ‡ ಹರಿದ್ರಾಚೂರ್ಣಮಿಶ್ರಿತೈಃ ।
ಶಾಲೀಯೈ ರಮಣೀಯೈಃ ತ್ವಾಂ ‡ ಅಕ್ಷತೈಃ ಅರ್ಚಯಾಮ್ಯಹಂ
॥೮೬॥

ಚಂಪಕಾಶೋಕ ಮಂದಾರ- ‡ ಮಲ್ಲಿಕಾದ್ರೋಣಸಂಯುತೈಃ
ಪುಷ್ಪೈಃ ಸಂಪೂಜಯಾಮಿ ತ್ವಾಂ ‡ ಬಿಲ್ವಪತ್ರೈಶ್ಚ ಕೋಮಲೈಃ
॥೮೭

---

ಬಳಿಕ ನವರತ್ನಖಚಿತವಾದ ಭುಜಕೀರ್ತಿ, ಕರ್ಣತಾಟಂಕ, ಕಿರೀಟ, ಪದಕ ಈ ವಿಧವಾದ ಆಭರಣಗಳನ್ನು ಅರ್ಪಿಸುವೆನು ಅದನ್ನು ಪ್ರತಿಗ್ರಹಿಸು.

ಇದಾದ ಮೇಲೆ ಮಲಯಪರ್ವತದಲ್ಲಿ ಬೆಳೆದ ಕಲಾಗುರು ಮತ್ತು ಚಂದನ ಇವುಗಳ ಗಂಧವನ್ನು ಸಮರ್ಪಣೆ ಮಾಡುವವನಾಗಿದ್ದೇನೆ. ಅದನ್ನು ದಯವಿಟ್ಟು ಸ್ವೀಕರಿಸು. ಇದು ಕಸ್ತೂರೀ ಕುಂಕುಮಕೇಸರಿ, ಇವುಗಳನ್ನೊಳಗೊಂಡಿದೆ. ಆದುದರಿಂದ ನಿನ್ನ ಮೈಗೆ ಲೇಪನಕ್ಕಾಗಿ ಇದನ್ನು ಅರ್ಪಿಸುತ್ತಿದ್ದೇನೆ.

ಇದಾದ ಮೇಲೆ ಮುತ್ತಿನಂತೆ ಹೊಳೆಹೊಳೆವ, ಅರಿಶಿನ ಕುಂಕುಮ ಮಿಶ್ರಿತವಾದ ಅಕ್ಷತೆಗಳನ್ನು ನಿನಗೆ ಅರ್ಪಿಸುವೆನು. ಅದು ನಿನ್ನಲಂಕಾರಕ್ಕಾಗಿಯೇ ಹೌದು. ಇವು ಅಕ್ಕಿಯಕಾಳುಗಳಿಂದ ನಿರ್ಮಿತವಾದ ಅಕ್ಷತೆಗಳು' ಅವುಗಳಿಂದ ನಿನ್ನ ಪೂಜೆಯನ್ನು ನೆರವೇರಿಸುತ್ತೇನೆ. ಆ ಬಳಿಕ ಸಂಪಿಗೆ, ಅಶೋಕ, ಮಂದಾರ, ಮಲ್ಲಿಗೆ, ತುಂಬೆ, ಇವೇ ಮೊದಲಾದ ಹೂವುಗಳನ್ನೂ ಬಿಲ್ವಪತ್ರಾದಿಗಳನ್ನೂ ನಿನ್ನ ಪೂಜೆಗಾಗಿ ಭಕ್ತಿಯಿಂದ ಸಮರ್ಪಿಸುತ್ತಿದ್ದೇನೆ.

Sri Vidyabharathi Book Centre, Sringeri

CC-O. In Public Domain. Digitized by eGangotri



ವನಸ್ಪತಿ ರಸೋತ್ಪನ್ನೋ ‡ ಗಂಧಾಢ್ಯೋ ಧೂಪ ಉತ್ತಮಃ ।
ಆಘ್ರೇಯಃ ಸರ್ವದೇವಾನಾಂ ‡ ಧೂಪೋಽಯಂ ಪ್ರತಿಗೃಹ್ಯತಾಂ ॥೮೮॥

ಸಾಜ್ಯಂ ತ್ರಿವರ್ತಿಸಂಯುಕ್ತಂ ‡ ವಹ್ನಿನಾ ಯೋಜಿತಂ ಮಯಾ !
ಗೃಹಾಣ ಮಂಗಳಂ ದೀಪಂ ‡ ತ್ರೈಲೋಕ್ಯಂತಮಿರಾಪಹಂ
ಭಕ್ತ್ಯಾ ದೀಪಂ ಪ್ರಯಚ್ಛಾಮಿ ‡ ಗೃಹಾಣ ಪರಮೇಶ್ವರಿ ! ॥೮೯॥
ಶಾಲ್ಯೋದನ-ಘೃತಾಪೂಪ ‡ ಪಾಯಸಾದಿಸಮನ್ವಿತಂ ।
ಮಧ್ಯೇ ಪಾನೀಯ ಸಮಾಯುಕ್ತಂ ‡ ನೈವೇದ್ಯಂ ಪ್ರತಿಗೃಹ್ಯತಾಂ ॥೯೦॥

ಪೂಗೀಫಲಸಮಾಯುಕ್ತಂ ‡ ನಾಗವಲ್ಲೀದಳೈರ್ಯುತಂ ।
ಚೂರ್ಣಕರ್ಪೂರಸಂಯುಕ್ತಂ ‡ ತಾಂಬೂಲಂ ಪ್ರತಿಗೃಹ್ಯತಾಂ ॥೯೧॥

---

ಅನಂತರ ವನಸ್ಪತಿಗಳ ರಸದಿಂದುದಿಸಿದ, ಸುವಾಸನೆಯಿಂದ ಕೂಡಿದ. ಉತ್ತಮವಾದ ದೂಪವು ಮತ್ತು ಸಮಸ್ತದೇವತೆಗಳಿಗೂ ತೃಪ್ತಿಯನ್ನು ಉಂಟು ಮಾಡುವಂಥ ಧೂಪವನ್ನು ನಿನಗೆ ಸಮರ್ಪಿಸುತ್ತೇನೆ. ದಯವಿಟ್ಟು ಅದನ್ನು ಸ್ವೀಕರಿಸು.

ಬಳಿಕ ತುಪ್ಪದಲ್ಲಿ ನೆನಸಿದ ಮೂರುಬತ್ತಿಗಳಿಗೆ ದೀಪವನ್ನು ಹೊತ್ತಿಸಿ, ಅಂತಹ ಮಂಗಳದೀಪವನ್ನು ನಿನಗೆ ಬೆಳಗುತ್ತೇನೆ. ಅದು ಮೂರು ಲೋಕದ ಅಜ್ಞಾನವೆಂಬ ಕತ್ತಲೆಯನ್ನು ಕಳೆಯುವಂತಾಗಲಿ,

ಇದಾದ ಮೇಲೆ ಶಾಲ್ಯೋದನ, ತುಪ್ಪದಲ್ಲಿ ಕರಿದ ಅಪೂಪ (ಕಜ್ಜಾಯ), ಪಂಚಭಕ್ಷ್ಯ ಪರಮಾನ್ನಾದಿಗಳನ್ನು ನಿನಗೆ ಸಮರ್ಪಿಸುತ್ತೇನೆ. ಅಲ್ಲದೆ ಮಧ್ಯೆ ಮಧ್ಯೆ ಪಾನೀಯಗಳನ್ನು ಅರ್ಪಿಸುತ್ತೇನೆ. ಇವೆಲ್ಲವನ್ನೂ ದಯವಿಟ್ಟು ಸ್ವೀಕರಿಸು.

ಅನಂತರ ಅಡಿಕೆ, ವಿಳ್ಳೆದೆಲೆ, ಮುತ್ತಿನಿಂದಾದ ಸುಣ್ಣ. ಇವು ಗಳಿಂದೊಡಗೂಡಿದ ತಾಂಬೂಲವನ್ನು ಅರ್ಪಿಸುತ್ತೇನೆ. ಕೃಪೆಮಾಡಿ ಅದನ್ನು ಸ್ವೀಕರಿಸು.

Sri Vidyabharathi Book Centre, Sringeri

CC-O. In Public Domain. Digitized by eGangotri



ನಾನಾವಿಧೈಃ ಆರತಿಕ್ಯೈಃ ‡ ಪುರಂಧ್ರೀಭಿಃ ವಿನಿರ್ಮಿತೈಃ ।
ನೀರಾಜಯಾಮಿ ತ್ವಾಮದ್ಯ ‡ ವಿಚಿತ್ರೈಃ ಮಂಗಳಾತ್ಮಿಕೈಃ ॥೯೨॥

ಮಲ್ಲಿಕಾ ತುಳಸೀ- ಬಿಲ್ವ- ‡ ಕಮಲೈಃ ಉಪಕಲ್ಪಿತಂ ।
ಮಂತ್ರಪುಷ್ಪಂ ಪ್ರಯಚ್ಛಾಮಿ ‡ ತವ ಪ್ರೀತಿ ವಿವೃದ್ಧಯೇ ॥೯೩॥

ಯತ್ಪ್ರದಕ್ಷಿಣತೋಽಶೇಷ- ‡ ಭೂಪ್ರದಕ್ಷಿಣಜಂ ಫಲಂ ।
ಕುರ್ವೇ ತದ್ದೇವತಾಯಾಸ್ತೇ ‡ ಪ್ರದಕ್ಷಿಣ ಮನನ್ಯಧೀಃ ॥೯೪॥

ನಮಸ್ತೇಽನಂತರುಚಯೇ ‡ ನಮಸ್ತೇಽನಂತಶಕ್ತಯೇ ।
ಅಶೇಷಭುವನಾಧಾರ- ‡ ಮೂರ್ತಯೇ ಮೂರ್ತಯೇ ನಮಃ
॥೯೫॥

ಆಯುಃ ಲಕ್ಷ್ಮೀಂ ಸುಖಂ ವಿದ್ಯಾಂ ‡ ಸರ್ವತ್ರ ವಿಜಯಂ ಪುನಃ ।
ತ್ವತ್ಪಾದ ಕಮಲೇಽತ್ಯಂತಾಂ ‡ ಭಕ್ತಿಂ ಮೇ ದೇಹಿ ಸಂತತಂ ॥೯೬॥

---

ಇವೆಲ್ಲವನ್ನೂ ಅರ್ಪಿಸಿದ ಬಳಿಕ ಮುತ್ತೈದೆಯರಿಂದ ಬೆಳಗಲ್ಪಟ್ಟ ವಿವಿಧವಾದ ಮತ್ತು ಮಂಗಳಾತ್ಮಕವಾದ ಆರತಿಗಳನ್ನು ಸ್ವೀಕರಿಸಿ ಲೋಕ ಮಂಗಳವನ್ನು ಅನುಗ್ರಹಿಸು.

ತದನಂತರ ಮಂತ್ರಪೂರ್ವಕವಾದ ಪುಷ್ಪ, ತುಲಸೀ ಅಕ್ಷತೆಗಳಿಂದ ದೇವಿಯನ್ನು ತೃಪ್ತಿಗೊಳಿಸಲು ಅರ್ಪಿಸಿ, ಅವುಗಳನ್ನು ಸ್ವೀಕರಿಸಬೇಕೆಂದು ಪ್ರಾರ್ಥಿಸಬೇಕು.

ಕೊನೆಯಲ್ಲಿ ಪ್ರದಕ್ಷಿಣೆ ನಮಸ್ಕಾರಗಳನ್ನು ದೇವಿಗೆ ಸಲ್ಲಿಸಬೇಕು. ಈ ಪ್ರದಕ್ಷಿಣೆಯಿಂದ ಸಲ್ಲಿಸಿದ ನಮಸ್ಕಾರವು ಭೂಪ್ರದಕ್ಷಿಣೆಯ ಫಲವನ್ನು ನೀಡುವಂಥದು. ಆದ್ದರಿಂದ ದೇವಿ! ನನ್ನ ಈ ಭಕ್ತಿಪೂರ್ವಕವಾದ ಪ್ರದಕ್ಷಿಣೆ ನಮಸ್ಕಾರಗಳನ್ನು ಕೃಪೆಮಾಡಿ ಸ್ವೀಕರಿಸು'.

Sri Vidyabharathi Book Centre, Sringeri

CC-O. In Public Domain. Digitized by eGangotri


ಪೂಜಾ ಸಂಪೂರ್ಣಫಲದಂ ‡ ಯಶೋವೃದ್ಧಿಕರಂ ಪರಂ ।
ಸುವರ್ಣಪುಷ್ಪ ಮೇತತ್ತೇ ‡ ಸಮರ್ಪಿತ ಮನಿಂದಿತಂ ॥೯೭॥
ದೇವಿ ! ಸರ್ವಜಗನ್ಮಾತಃ ! ‡ ಮಮ ಹೃತ್ಕಮಲೇಽಮಲೇ ।
ನಿವಸ ತ್ವಂ ಸದಾ ಪತ್ಯಾ ‡ ಸರ್ವೈಃ ಆವರಣೈರಪಿ ॥೯೮॥
ಗುಹ್ಯಾತಿಗುಹ್ಯ ಗೋಪ್ತ್ರೀ ! ತ್ವಂ ‡ ಗೃಹಾಣಾಸ್ಮತ್ಕೃತಾರ್ಚನಂ ।
ಸಿದ್ಧಿಃ ಭವತು ಮೇ ದೇವಿ ! ‡ ತ್ವತ್ಪ್ರಸಾದಾತ್ ಮಹೇಶ್ವರೀ ॥೯೯॥
ಇತ್ಥಂ ಪ್ರಪೂಜ್ಯ ಪುರುಷಃ ಪರದೇವತಾಂ ತಾಂ
ದತ್ವಾ ಬಲಿಂ ಚ ಪರಿವಾರಕದೇವತಾಭ್ಯಃ
ಸಂಪ್ರೀಣಯೇದಪಿ ನುತಿಭಿಃ ದ್ವಿಜಭೋಜನಾದ್ಯೈಃ
ಗೋಭೂಷಣಾರ್ಪಣಯುಜಾ ಗುರುಪೂಜನೇನ ॥೧೦೦॥

---

ಅಪರಿಮಿತವಾದ ಕಾಂತಿಯುಕ್ತಳಾದ ದೇವಿಯೇ ! ನಿನಗೆ ನಮಸ್ಕಾರ. ಎಣೆಯಿಲ್ಲದ ಶಕ್ತಿಯುತಳೇ ! ಇದೋ ನಿನಗೆ ನಮಸ್ಕಾರ, ನಿಶ್ಶೇಷವಾದ ಭೂಭಾಗಕ್ಕೆ ಆಧಾರಳೇ ! ಮೂರ್ತಿರಹಿತಳೇ ! ನಿನಗೆ ಮತ್ತೆ ಮತ್ತೆ ನಮಸ್ಕಾರ.

ಭೋ ದೇವಿ ! ದೀರ್ಘಾಯುಸ್ಸನ್ನೂ, ಐಶ್ವರ್ಯರನ್ನೂ, ಸುಖವನ್ನೂ ಸಮಸ್ತ ವಿದ್ಯೆಗಳನ್ನೂ, ಹಿಡಿದ ಕಾರ್ಯಗಳೆಲ್ಲ ಜಯವನ್ನೂ, ಎಲ್ಲಕ್ಕಿಂತಲೂ ನಿನ್ನ ಪಾದಕಮಲಗಳಲ್ಲಿ ನಿರಂತರ ಭಕ್ತಿಯನ್ನೂ ದಯಪಾಲಿಸು.

ನಾನು ನಿನಗಾಗಿ ಅರ್ಪಿಸಿದ ಷೋಡಶೋಪಚಾರದ ಪೂಜೆಯು ಸಂಪೂರ್ಣ ಫಲವನ್ನೂ, ಅಲ್ಲದೆ ಕೀರ್ತಿಯ ಹೆಚ್ಚಳವನ್ನೂ, ನನಗೆ ಅನುಗ್ರಹಿಸು. ಇದಕ್ಕಾಗಿ ಪೂಜಾ ಸಾದ್ಗುಣ್ಯವನ್ನು ಗಳಿಸಲು ಸುವರ್ಣ ಪುಷ್ಪ ದಕ್ಷಿಣೆಯನ್ನು ಅರ್ಪಿಸುತ್ತಿದ್ದೇನೆ. ಭೋ ದೇವಿ ! ನೀನು ಜಗನ್ಮಾತೆ ಯಾದುದರಿಂದ ನೀನು ನಿನ್ನ ಪತಿಯೊಡಗೂಡಿ, ಅಲ್ಲದೆ ನಿನ್ನ ಆವರಣಗಳಲ್ಲಿನ ಸಿಬ್ಬಂದಿಗಳೊಡನೆ ನಿರ್ಮಲವಾದ ನನ್ನ ಹೃತ್ಕಮಲದಲ್ಲಿ ಸದಾ ನೆಲೆಸುವಂತೆ ಅನುಗ್ರಹಿಸು.

Sri Vidyabharathi Book Centre, Sringeri

CC-O. In Public Domain. Digitized by eGangotri



ಏವಂ ಪುರಾ ಹಿ ಕೋಲರ್ಷಿಃ ‡ ಕಾಶ್ಯಪೋ ಬ್ರಹ್ಮವಿತ್ತಮಃ ।
ಸುರಥೋ ನಾಮ ಭೂಪಾಲಃ ‡ ಸಮಾಧಿಃ ನಾಮ ವೈಶ್ಯರಾಟ್
॥೧೦೧॥

ತಥಾ ಭೃಗುಸುತೋ ರಾಮಃ ‡ ಶುಕ್ರಾಚಾರ್ಯಶ್ಚ ಗೀಷ್ಪತಿಃ ।
ಪ್ರದ್ಯುಮ್ನೋ ನಾಮ ರಾಜರ್ಷಿಃ ‡ ಲೋಕಾದಿತ್ಯೋ
ದ್ವಿಜೋತ್ತಮಃ ॥೧೦೨॥

ವೈವಸ್ವತಾದ್ಯಯಶ್ಚಾನ್ಯೇ ‡ ಬಹವೋಽಪಿ ಮಹರ್ಷಯಃ ।
ಸಮಾರಾಧ್ಯಾತ್ರ ದೇವೇಶೀಂ ‡ ಸಾಕ್ಷಾತ್ ಬ್ರಹ್ಮಸ್ವರೂಪಿಣೀಂ
॥೧೦೩॥

---

ರಹಸ್ಯಗಳಲ್ಲಿ ಅತಿ ರಹಸ್ಯವೆನಿಸಿದುದು ನಿನ್ನ ತತ್ತ್ವವುಳ್ಳವಳೆ ! ಇಂತಹ ರಹಸ್ಯವನ್ನು ರಕ್ಷಿಸಿಕೊಂಡಿರುವ ದೇವಿ ! ನಾನು ನಿನಗೆ ಅರ್ಪಿಸಿದ ಈ ಅರ್ಚನೆಯನ್ನು ಸ್ವೀಕರಿಸು.

ಭೋ ಮಹೇಶ್ವರಿ ! ನಿನ್ನನುಗ್ರಹದಿಂದ ನನ್ನ ಭಕ್ತಿಪೂರ್ವಕವಾದ ಅರ್ಚನೆಯು ಸಿದ್ಧಿಸಲಿ. ಈ ಬಗೆಯಾಗಿ ಭಕ್ತನಾದವನು ಪರದೇವತೆಯನ್ನು ಅರ್ಚಿಸಿ, ಆ ದೇವತೆಯ ಪರಿವಾರ ದೇವತೆಗಳಿಗೆ ಯೋಗ್ಯವಾದ ಬಲಿಯನ್ನು ಅರ್ಪಿಸಿ, ಸ್ತೋತ್ರಗಳಿಂದಲೂ, ಬ್ರಾಹ್ಮಣರಿಗೆ ಭೋಜನಾದಿಗಳನ್ನು ಅರ್ಪಿಸುವುದರಿಂದಲೂ, ಭೂಷಣಾದಿಗಳನ್ನು ದಾನಮಾಡುವುದರಿಂದಲೂ ಮತ್ತು ಗುರುಪೂಜೆಯಿಂದಲೂ ದೇವಿಯನ್ನು ತೃಪ್ತಿಗೊಳಿಸಬೇಕು.

ಈ ಬಗೆಯಲ್ಲಿ ಕೋಲರ್ಷಿಯೂ, ಬ್ರಹ್ಮಜ್ಞಾನಿಗಳಲ್ಲಿ ಅತಿ ಶ್ರೇಷ್ಠನಾದ ಕಶ್ಯಪನೂ, ಸುರಥನೆಂಬ ರಾಜಶ್ರೇಷ್ಠನೂ, ಸಮಾಧಿಯೆಂಬ ವೈಶ್ಯಶ್ರೇಷ್ಠನೂ, ಅದರಂತೆಯೇ ಭೃಗುವಂಶದ ಪರಶುರಾಮನೂ, ದೈತ್ಯಗುರುವಾದ ಶುಕ್ರಾಚಾರ್ಯನೂ, ಗೀಷ್ಪತಿಯೆನಿಸಿದ ಬೃಹಸ್ಪತಿಯೂ, ಪ್ರದ್ಯುಮ್ನನೆಂಬ ರಾಜರ್ಷಿಯೂ, ಲೋಕಾದಿತ್ಯನೆಂಬ ಬ್ರಾಹ್ಮಣಶ್ರೇಷ್ಠನೂ, ವಿವಸ್ವಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಾಪುಃ ನಿಜನಿಜಾಭೀಷ್ಟಾರ್ಥ ‡ ಇತರಾಂ ಖಲು ದೇವರಾಟ್ ।
ಅತಃ ತಾಂ ಶ್ರೀಮಹಾಲಕ್ಷ್ಮೀಂ ! ‡ ಕೋಲಾಪುರನಿವಾಸಿನೀಂ ॥೧೦೪॥

ಸಮಾರಾಧಯ ಯತ್ನೇನ ‡ ವತ್ಸ ! ತ್ವಂ ಮತ್ಸ್ವರೂಪಿಣೀಂ ।
ಯತಃ ಶ್ರೇಯಃ ಪರಂ ಪ್ರಾಪ್ತಃ ‡ ಸರ್ವತ್ರ ವಿಜಯೀ ಭವೇಃ ॥೧೦೫॥

ಸಕೃದಪಿ ವಿಧಿವದ್ಯಃ ಪೂಜಯೇತ್ ಅತ್ರ ದೇವೀಂ
ಭವತಿ ವಿಗತ ಪಾಪಃ ಸರ್ವಭೋಗಾನ್ವಿತಶ್ಚ ।
ಕಿಮುತ ಸತತ ಮೇನಂ ಪೂಜಕಶ್ಚೇತ್ ನಿರೀಹಃ
ಸ ಹೃದಿ ಭಜತಿ ಸತ್ಯಂ ಸಚ್ಚಿದಾನಂದತತ್ವಂ ॥೧೦೬॥

---

ಅಂದರೆ ಸೂರ್ಯವಂಶೋತ್ಪನ್ನರಾದ ಅನೇಕ ಮಹರ್ಷಿಗಳೂ ಕೂಡ ಇಲ್ಲಿ ಸಾಕ್ಷಾತ್ ಬ್ರಹ್ಮಸ್ವರೂಪಿಣಿಯಾಗಿ ನೆಲೆಸಿರುವ ದೇವತೆಯೆನಿಸಿದ ಶ್ರೀ ಮಹಾಲಕ್ಷ್ಮಿಯನ್ನು ಭಕ್ತಿಯಿಂದ ಸೇವಿಸಿ ತಮ್ಮ ತಮ್ಮ ಇಷ್ಟಾರ್ಥಗಳನ್ನು ಪಡೆದರು.

ಅದರಂತೆಯೇ ದೇವರಾಜನಾದ ಇಂದ್ರನೂ ಕೂಡ ತನ್ನ ಅಭೀಷ್ಟವನ್ನು ಗಳಿಸಿದನು. ಈ ಕಾರಣದಿಂದ ವತ್ಸ ! ನೀನೂ ಕೂಡ ನನ್ನ ಸ್ವರೂಪವನ್ನೇ ಧರಿಸಿರುವ, ಕೋಲಾಪುರದಲ್ಲಿ ನೆಲೆಸಿರುವದೇವಿಯನ್ನು ಪ್ರಯತ್ನಪೂರ್ವಕವಾಗಿ ಆರಾಧಿಸು, ಇದರಿಂದ ನಿನಗೆ ಶ್ರೇಯಸ್ಸುಂಟಾಗುವುದು ಮಾತ್ರವಲ್ಲದೆ, ಎಲ್ಲೆಡೆಯಲ್ಲಿಯೂ ನೀನು ಕಾರ್ಯಸಿದ್ಧಿಯನ್ನು ಪಡೆಯಬಹುದು.

ಮತ್ತೂ ಕೇಳು, ಯಾವನಾದರೊಬ್ಬನು ಒಂದು ಸಲ ವಿಧಿಪೂರ್ವಕವಾಗಿ ದೇವಿಯನ್ನು ಭಕ್ತಿಪೂರ್ವಕವಾಗಿ ಆರಾಧಿಸಿದ್ದೇ ಆದರೆ ಅವನು ಸಮಸ್ತ ಪಾಪಗಳಿಂದಲೂ ಮುಕ್ತನಾಗಿ ಪರಿಶುದ್ಧನಾಗುವನು. ಹೀಗಿರುವಲ್ಲಿ ಯಾವುದನ್ನೂ ಬಯಸದೆ ಅಂದರೆ ನಿಷ್ಕಾಮತೆಯಿಂದ ಸತತವಾಗಿ ಈ ದೇವಿಯನ್ನು ಸೇವೆಮಾಡುವವನಿಗೆ ದೊರಕುವ ಫಲವೇನೆಂದು ತಿಳಿಸಲಿ, ಅವನು ನಿತ್ಯಾನಂದ ಪದವಿಯನ್ನು ಪಡೆದೇ ಪಡೆಯುತ್ತಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri


ಈಶ್ವರ ಉವಾಚ—

ಇತಿ ಪೂರ್ವಂ ಮಹೇಂದ್ರಾಯ ‡ ಯೋಷಿತ್ ರೂಪಧರೋ ಹರಿಃ ।
ಉತ್ಸವಾದಿಕ್ರಮಂ ಚೋಕ್ತ್ವಾ ‡ ತತ್ರೈವಾಂತರ್ದಧೇ ಪುನಃ ॥೧೦೭॥

ಸೋಽಪಿ ಶಕ್ರಃ ಸಮಾಕರ್ಣ್ಯ ‡ ಹರೇರ್ವಾಕ್ಯಂ ಮಹಾಮನಾಃ ।
ಮಹಿಶೀಂ ತಾಂ ಸಮಾರಾಧ್ಯ ‡ ಕೃತಕೃತ್ಯೋ ಬಭೂವ ಹ ॥೧೦೮॥

ಏಹಂ ವಿಜ್ಞಾಯ ಲೋಕೇಽಸ್ಮಿನ್ ‡ ಸರ್ವೈಃ ಶ್ರೇಯೋಽರ್ಥಿಭಿಃ ಜನೈಃ ।
ಸೈಷಾ ಹಿ ಕಾಮಧುಕ್ ದೇವೀ ‡ ಸರ್ವಥಾ ಸಮುಪಾಸ್ಯತಾಂ ॥೧೦೯॥

---

ಈಶ್ವರನು ಈ ಮುಂದಿನಂತೆ ತಿಳಿಸಿದನು—

ಈ ಬಗೆಯಲ್ಲಿ ಹಿಂದೆ ಮೋಹಿನೀವೇಷದಾರಿಯಾದ ವಿಷ್ಣುದೇವನು ಮಹೇಂದ್ರನನ್ನು ಕುರಿತು ಉತ್ಸವಾದಿಕ್ರಮಗಳನ್ನು ತಿಳಿಯಪಡಿಸಿ ತಕ್ಷಣವೇ ಕಣ್ಮರೆಯಾದನು. ಆ ಇಂದ್ರನಾದರೋ ವಿಷ್ಣುದೇವನು ವಿವರಿಸಿದುದನ್ನು ಗಮನವಿಟ್ಟು ಕೇಳಿ ಮಹೇಶಿಯೆನಿಸಿದ ಕೋಲಾಪುರದ ಶ್ರೀ ಮಹಾ ಲಕ್ಷ್ಮಿಯನ್ನು ಭಕ್ತಿಯಿಂದಾರಾಧಿಸಿ ತಾನೂ ಧನ್ಯನಾದನು.

ಈ ರಹಸ್ಯವನ್ನರಿತು ಶ್ರೇಯಃಕಾಂಕ್ಷಿಗಳೆಲ್ಲರೂ ಇಷ್ಟಾರ್ಥಗಳನ್ನು ದಯಪಾಲಿಸುವ ಕಾಮಧೇನುವಿನಂತಿರುವ ದೇವಿಯೇ ಹೌದು ಎಂದು ಎಲ್ಲರೂ ಸೇವಿಸುತ್ತಾರಾಗಿ ಶ್ರೇಯಸ್ಸನ್ನು ಬಯಸುವವರು ದೇವಿಯನ್ನು ಭಕ್ತಿಯಿಂದ ಸೇವಿಸಲಿ.

Sri Vidyabharathi Book Centre, Sringeri

CC-O. In Public Domain. Digitized by eGangotri


ಜ್ಯೋತಿರ್ಲಿಂಗಾರ್ಚನವಿದಂ ಏಕಂ ‡ ಸಾಕ್ಷಾತ್ ವಿಷ್ಣುದಿತ-
ವನಿಶಂ ಯಃ ।
ಭಕ್ತ್ಯಾ ಯುಕ್ತಃ ಪಠತಿ ಹಿ ಮರ್ತ್ಯಃ ‡ ಸರ್ವಾಮರ್ತ್ಯಾರ್ಚನ
ಫಲಭಾಕ್ ಸಃ ೧೧೦॥

ಇತಿ ಸ್ಕಾಂದೇ ಶ್ರೀ ಕೋಲಾಚಲಮಾಹಾತ್ಮ್ಯೇ
ಜ್ಯೋತಿರ್ಲಿಂಗಾರ್ಚನೋ ನಾಮ ದ್ವಿತೀಯೋಽಧ್ಯಾಯಃ

---

ಸಾಕ್ಷಾತ್ ವಿಷ್ಣು ದೇವನಿಂದಲೇ ನಿರೂಪಿಸಲ್ಪಟ್ಟ ಈ ಜ್ಯೋತಿರ್ಲಿಂಗಾರ್ಚನೆಯ ವಿಧಿಯನ್ನು ಯಾವನು ಭಕ್ತಿಯಿಂದ ಪಠಿಸುತ್ತಾನೆಯೋ ಅಂತಹ ಮಾನವನು ಸಮಸ್ತ ದೇವತೆಗಳಿಗೂ ಮಾಡುವ ಅರ್ಚನೆಯ ಫಲಕ್ಕೆ ಭಾಗಿಯಾಗುವನು.

ಇದು ಸ್ಕಾಂದ ಪುರಾಣದಲ್ಲಿನ ಕೋಲಾಚಲ ಮಹಾತ್ಮೆಯಲ್ಲಿನ "ಜ್ಯೋತಿರ್ಲಿಂಗಾರ್ಚನ ಕ್ರಮ" ಎಂಬ ಎರಡನೆಯ ಅಧ್ಯಾಯವು ಮುಗಿದುದು.

---

Sri Vidyabharathi Book Centre, Sringeri

CC-O. In Public Domain. Digitized by eGangotri

## ತೃತೀಯೋಧ್ಯಾಯಃ

ಈಶ್ವರ ಉವಾಚ—
ಇತ್ಯೇತತ್ ಅಧುನಾ ಪ್ರೋಕ್ತಂ ‡ ತ್ವಯಾಪೃಷ್ಟಂ ಹಿ ಪುತ್ರಕ! ।
ಶ್ರೀಮತ್ ಮೂಕಾಂಬಿಕಾಕ್ಷೇತ್ರ ‡ ಮಹಾತ್ಮ್ಯಂ ಅತಿಪಾವನಂ ॥೧॥

ಅನೇನ ಸದೃಶಂ ಕ್ಷೇತಂ ‡ ಸರ್ವದೇವಾಶ್ರಯಂ ಪರಂ ।
ಭುಕ್ತಿ ಮುಕ್ತಿಪ್ರದಂ ಭೂಮೌ ‡ ನಾಸ್ತಿ ನಾಸ್ತಿ ನ ಸಂಶಯಃ ॥೨॥
ತೇಜೋಲಿಂಗಃ ಯತೋ ಜ್ಯೋತಿ ‡ ಶ್ಚಕ್ರಪೀಠಂ ಇದಂ ಸ್ಮೃತಂ ।
ಅವಿಮುಕ್ತಂ ಇತಿ ಪ್ರಾಹುಃ ‡ ಸದಾಶಿವನಿವಾಸತಃ ॥೩॥
ಕುಲಪೀಠಮಿತಿ ಸ್ಕಂದ ! ಶಾಕ್ತ್ಯೈಃ ‡ ಕೈಶ್ಚಿತ್ ಇಹೋಚ್ಯತೇ ।
ಕಾಶ್ಯಾ ರಾಮೇಶ್ವರ ಕ್ಷೇತ್ರಾತ್ ‡ ಗೋಕರ್ಣಕ್ಷೇತ್ರ ತೋಽಪದ್ಯಃ ।

---

ಸ್ಕಂದದೇವನನ್ನು ಕುರಿತು ಈಶ್ವರನು ಈ ಮುಂದಿನಂತೆ ಹೇಳುತ್ತಾನೆ—

ಪ್ರಿಯಕಂದ ! ನೀನು ತಿಳಿಯಬೇಕೆಂಬ ಉದ್ದೇಶದಿಂದ ಕೇಳಿದ ಶ್ರೇಷ್ಠತಮನಾದ ಮೂಕಾಂಬಿಕಾಕ್ಷೇತ್ರದ ಮಹಾತ್ಮ್ಯೆಯನ್ನು ಈ ಬಗೆಯಿಂದ ತಿಳಿಸಿದ್ದಾಯಿತು. ಸಮಸ್ತ ದೇವತೆಗಳಿಗೂ ಕೂಡ ಆಶ್ರಯವನ್ನು ದೊರಕಿಸಬಲ್ಲ ಈ ಕ್ಷೇತ್ರಕ್ಕೆ ಸಮಾನವಾದ ಭಕ್ತಿ ಮತ್ತು ಮುಕ್ತಿಗಳನ್ನು ಸಾಧಿಸಿಕೊಡಬಲ್ಲ ಮತ್ತೊಂದು ಕ್ಷೇತ್ರವು ಈ ಭೂಲೋಕದಲ್ಲಿಯೇ ಇಲ್ಲ, ಈ ಮಾತಿನಲ್ಲಿ ಸಂಶಯವೇ ಇರದು.

ಇಲ್ಲಿರುವುದು ತೇಜೋಮಯಲಿಂಗವಾಗಿರುವುದರಿಂದ ಜ್ಯೋತಿಶ್ಚಕ್ರಪೀಠವೆಂದೂ, ಸದಾಶಿವನ ಸಾನಿಧ್ಯವು ಸದಾ ಇಲ್ಲಿರುವುದರಿಂದ ಅವಿಮುಕ್ತಪೀಠವೆಂದೂ ಇದೊಂದು ಕುಲಪೀಠವೆಂದೂ ಕೆಲವರು ಶಕ್ತ್ಯುಪಾಸಕರು ಇದನ್ನು ಹೆಸರಿಸಿರುತ್ತಾರೆ.

ಕಾಶೀ ಕ್ಷೇತ್ರಕ್ಕಿಂತಲೂ, ರಾಮೇಶ್ವರ ಕ್ಷೇತ್ರಕ್ಕಿಂತಲೂ ಮತ್ತು ಗೋಕರ್ಣಕ್ಷೇತ್ರಕ್ಕಿಂತಲೂ ಹೆಚ್ಚು ಸಿದ್ಧಿಯನ್ನು ಈ ಕ್ಷೇತ್ರದಲ್ಲಿ ಪಡೆಯಬಹುದೆಂದು ಕ್ಷೇತ್ರ ರಹಸ್ಯವನ್ನು ಅರಿತವರು ತಿಳಿಸುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri



ಅತೀವ ಸಿದ್ಧಿದಂ ಲೋಕೇ ‡ ಮನ್ಯತೇ ತತ್ವವಿತ್‌ಜನಾಃ ।
ಮಮ ವಿಷ್ಣೋಃ ತಥಾಽನ್ಯಾಸಾಂ ‡ ಶಕ್ತೀನಾಂ ಚಾತ್ರ ಸಂಸ್ಥಿತಿಃ ॥೫॥

ವರ್ತತೇಽ ಶೇಷತೋ ನಿತ್ಯಂ ‡ ಮೂಲಶಕ್ತ್ಯಾಶ್ರಯಂ ಯತಃ ।
ಅತಃ ತ್ವಯಾಪಿ ಹೇ ವತ್ಸ ! ‡ ಸುಖೇನ ಸ್ಥೀಯತಾಂ ಇಹ ॥೬॥

ಸೂತ ಉವಾಚ—

ಇತೀ ಶಂಭೋಃ ವಚಃ ಶ್ರುತ್ವಾ ‡ ಸಂಜಾತ ಪ್ರತ್ಯಯಃ ತದಾ ।
ಉವಾಸಾಸ್ಮಿನ್ ಮಹಾಕ್ಷೇತ್ರೇ ‡ ಪರಮಾನಂದಭಾಕ್ ಗುಹಃ ॥೭॥

ಏವ ಮುಕ್ತ ಮಿದಂ ಶಂಭು ‡ ಗುಹಸಂವಾದ ರೂಪಿ ಯತ್ ।
ಮಾಹಾತ್ಮ್ಯಂ ಕಾಮದಂ ವಿಪ್ರಾಃ ‡ ಕಿಮನ್ಯತ್ ಕಥಯಾಮಿ ವಃ ॥೮

---

ಇದು ನನ್ನ, ವಿಷ್ಣುದೇವನ ಮತ್ತು ಇತರ ದೇವತೆಗಳ ಪಿತೃಸ್ಥಾನವೆನಿಸಿರುವುದರಿಂದ, ಇಲ್ಲಿ ಮೂಲಶಕ್ತಿಗಳಿಗೆ ಸದಾ ಆಶ್ರಯವನ್ನು ಕೊಟ್ಟಿರುವುದರಿಂದ ಇದರ ಮಹಿಮೆ ಅಪಾರ. ಈ ಕಾರಣದಿಂದ ಸ್ಕಂದ, ನೀನೂ ಕೂಡಾ ಇಲ್ಲಿಯೇ ವಾಸವಾಗಿರು," ಹೀಗೆಂದು ಸೂತನು ಋಷಿಗಳನ್ನು ಕುರಿತು ಕಥೆಯನ್ನು ಮುಂದುವರಿಸಿದನು.

ತಂದೆಯಾದ ಶಂಭುದೇವನ ಈ ಮಾತನ್ನು ಕೇಳಿ ಗುಹನು ಅತ್ಯಂತವಾಗಿ ಈ ಮಾತಿನಲ್ಲಿ ನಂಬಿಕೆ ಇಟ್ಟು ಮಹದಾನಂದದಿಂದ ಈ ಮಹಾಕ್ಷೇತ್ರದಲ್ಲಿ ನೆಲಸಿದಂಥವನಾದನು.

"ಎಲೈ ಬ್ರಾಹ್ಮಣೋತ್ತಮರೇ, ಈ ಬಗೆಯಾದ ಶಂಭು-ಗುಹ ಸಂವಾದ ರೂಪವಾಗಿರುವ ಈ ಕ್ಷೇತ್ರಮಹತ್ತನ್ನು ವಿವರಿಸಿದೆನು. ಇದು ಇಷ್ಟಾರ್ಥವನ್ನು ಸಲ್ಲಿಸುವಂತಹದು. ಇನ್ನು ಮುಂದೆ ಇನ್ನೇನು ತಿಳಿಸಲಿ ?" ಎಂಬ ಸೂತ ಪುರಾಣಿಕನ ಮಾತನ್ನು ಕೇಳಿ ಋಷಿಗಳು ಮತ್ತೆ ಹೀಗೆ ನುಡಿದರು—

Sri Vidyabharathi Book Centre, Sringeri

CC-O. In Public Domain. Digitized by eGangotri



ಋಷಯಃ ಊಚುಃ—

ಸೂತ ! ಸರ್ವಪುರಾಣಜ್ಞ ! ‡ ಪೀತ್ವಾ ತ್ವದ್ವಚನಾಮೃತಂ ।
ತೃಪ್ತಿಂ ನೈವಾಧಿಗಚ್ಛಾಮೋ ‡ ಯೋಗಮಾಯಾವಿಲಾಸಿ ಯತ್
॥೯॥

ಅಸ್ಮಿನ್ ಕ್ಷೇತ್ರೇ ಪ್ರಸನ್ನಾ ಸ್ಯಾತ್ ‡ ಕೈಃ ಕೈಃ ಕರ್ಮಭಿಃ
ಅಂಬಿಕಾ ।
ಇತೀದಂ ವದ ತೀರ್ಥಾದಿ- ‡ ವಿಶೇಷಂ ಚ ಕೃಪಾನ್ವಿತಃ ॥೧೦॥

ಸೂತ ಉವಾಚ—

ಶೃಣ್ವಂತು ಸರ್ವೇ ಮುನಯೋ ಮಹಾಂತಃ
ಸಾಂಬವ್ರತಂ ಸರ್ವಫಲಪ್ರದಂ ಯತ್ ।
ತದತ್ರ ಮುಖ್ಯಂ ಕಥಿತಂ ಶಿವೇನ
ಕೃಷ್ಣಾದಿಭಿಃ ಆಚರಿತಂ ಹಿ ಪೂರ್ವಂ ॥೧೧॥

---

"ಸೂತಪುರಾಣಿಕ ! ನೀನು ಸಮಸ್ತ ಪುರಾಣಗಳನ್ನೂ ಬಲ್ಲವ. ಯೋಗ ಮಾಯಾವಿಲಾಸ ರೂಪವಾದ ನಿನ್ನ ಬಾಯಿಂದ ಹೊರಟ ವಚನಾಮೃತವನ್ನು ನಾವು ಎಷ್ಟು ಪಾನಮಾಡಿದರೂ ನಮಗೆ ತೃಪ್ತಿ ದೊರಕದು. ಯಾವಯಾವ ಕರ್ಮವನ್ನು ಅನುಷ್ಠಿಸುವುದರಿಂದ ಈ ಕ್ಷೇತ್ರದಲ್ಲಿ ಶಕ್ತಿಸ್ವರೂಪಿಣಿಯಾದ ದೇವಿಯು ಪ್ರಸನ್ನಳಾಗುತ್ತಾಳೆ? ಎಂಬ ವಿಷಯವನ್ನೂ, ತೀರ್ಥಾದಿಗಳ ವೈಶಿಷ್ಟ್ಯವನ್ನೂ ದಯವಿಟ್ಟು ನಮಗೆ ವಿವರಿಸಿ ಹೇಳು" ಎಂದು ಬೇಡಿಕೊಂಡರು.

ಇದನ್ನು ಕೇಳಿ ಸೂತ ಪುರಾಣಿಕನು ಈ ಮುಂದಿನಂತೆ ಹೇಳಿದನು :—

"ಮಹಾಮುನಿಗಳೇ ! ಕೇಳಿರಿ, ಮೊದಲು ಸಮಸ್ತ ಫಲವನ್ನೂ ಅನುಗ್ರಹಿಸಬಲ್ಲ ಸಾಂಬವ್ರತವನ್ನು ನಿಮಗೆ ತಿಳಿಸುತ್ತೇನೆ. ಇದು ಶಿವ ನಿಂದ ಮೊದಲು ವಿವರಿಸಲ್ಪಟ್ಟಿತು. ಆ ವ್ರತವನ್ನು ಶ್ರೀಕೃಷ್ಣನೇ ಮೊದಲಾದ

Sri Vidyabharathi Book Centre, Sringeri

CC-O. In Public Domain. Digitized by eGangotri



ಶಾಕ್ತಂ ಚ ಶೈವಂ ಖಲು ವೈಷ್ಣವಂ ವಾ
ಯಚ್ಚಾನ್ಯದಸ್ತಿ ವ್ರತವರ್ಯಮುಕ್ತಂ ।
ಮರ್ತ್ಯೈಃ ಕೃತಂ ಚೇತ್ ಅಖಿಲಾತ್ಮಿಕಾಽಸೌ
ಫಲಂ ತತಃ ಕೋಟಿಗುಣಂ ದದಾತಿ ॥೧೨॥

ಪಾರಾಯಣಂ ಚಾತ್ರ ಹಿ ಸಪ್ತಶತ್ಯಾ
ಸದ್ಬೋಧನಾದ್ಯೈಃ ಸಹ ವೇದ ಪಾಠಃ ।
ಅನ್ಯೋಽಪಿ ಭಕ್ತ್ಯಾ ಮನುಜೈಃ ಕೃತಶ್ಚೇತ್
ಫಲಂ ತತಃ ಕೋಟಿಗುಣಂ ದದಾತಿ ॥೧೩॥

ನವಾರ್ಣಮುಖ್ಯಾಃ ಅಪಿ ಮಂತ್ರ ರಾಜಾಃ
ಶಾಕ್ತಾಃ ಪರೇ ವಿಷ್ಣುಪರಾಶ್ಚ ಶೈವಾಃ ।
ಸುಸಾಧಕೈಃ ತೈಃ ಉಪಚಾಪಿತಾಶ್ಚೇತ್
ಫಲಂ ತತಃ ಕೋಟಿಗುಣಂ ದದಾತಿ ॥೧೪॥

---

ವರು ಈ ಹಿಂದೆ ಆಚರಿಸಿದರೆ. ಶಕ್ತಿ ಪರಗಳಾಗಿಯೂ, ವಿಷ್ಣುಪರಗಳಾಗಿಯೂ, ಇಲ್ಲವೆ ಇತರ ದೇವತೆಗಳ ಪರವಾಗಿಯೂ ನಿಯಮಿತವಾದ ವ್ರತಗಳನ್ನು ಮಾನವರು ಈ ಕ್ಷೇತ್ರದಲ್ಲಾಚರಿಸಿದರೆ ಅಖಿಲಾತ್ಮಕೆಯೆನಿಸಿದ ದೇವಿಯು ಅದಕ್ಕೆ ನಿರ್ದಿಷ್ಟವಾದ ಫಲಗಳ ಕೋಟಿಯಷ್ಟು ಸಲ್ಲಿಸುತ್ತಾಳೆ.

ಈ ಕ್ಷೇತ್ರದಲ್ಲಿ ಸಪ್ತಶತೀ ಸ್ತೋತ್ರವನ್ನು ಪಾರಾಯಣ ಮಾಡಿದರಾಗಲಿ. ಸದ್ಗುರುಗಳಿಂದ ಭೋಧಿತವಾದ ಪಾಠವನ್ನು ಇಲ್ಲಿ ಪಠಿಸುವುದಾಗಲಿ, ಇಲ್ಲವೆ ಇತರ ಒಳ್ಳೆಯ ಯಾವುದಾದರೂ ಕೃತಿಯನ್ನು ಇಲ್ಲಿ ನೆರವೇರಿಸುವುದಾಗಲಿ ಮಾಡಿದ್ದರಿಂದ ಅಂತಹ ಮಾನವನಿಗೆ ಒಂದು ಕೋಟಿಯಷ್ಟು ಫಲವು ದೊರಕುವುದು.

ನವಾರ್ಣ ಮುಖ್ಯವಾದ ಮನ್ತ್ರರಾಜಗಳನ್ನು ಶಾಕ್ತರೂ, ವಿಷ್ಣು ಪರರಾದವರು ವೈಷ್ಣವೀ ಮಂತ್ರಗಳನ್ನೂ, ಶೈವರು ಶಿವಪರಗಳಾದ ಮಂತ್ರ ಗಳನ್ನೂ ಇಲ್ಲಿ ಜಪಿಸುದುದೇ ಆದರೆ ಅದರ ಫಲದ ಕೋಟಿಯಷ್ಟನ್ನೂ ಪಡೆಯಬಹುದು.

Sri Vidyabharathi Book Centre, Sringeri

CC-O. In Public Domain. Digitized by eGangotri


ಕುಮಾರಿಕಾಣಾಂ ಚ ಸುವಾಸಿನೀನಾಂ
ದ್ವಿಜೋತ್ತಮಾನಾಂ ಚ ತಥೇಪರೇಷಾಂ ।
ಸಂತರ್ಪಣಂ ಚಾನ್ನ ವಿಭೂಷಣಾದ್ಯೈಃ
ಫಲಂ ತತಃ ಕೋಟಿಗುಣಂ ದದಾತಿ ॥೧೫॥

ಗೋ-ಭೂಮಿ-ಹೇಮಾಂಶುಕ ಮುಖ್ಯದಾನಾ-
ನ್ಯುಕ್ತಾನಿ ವೈ ಪುಣ್ಯಕರಾಣಿ ಯಾನಿ ।
ಕರ್ಮಾಣಿ ಯದ್ಯಾಚರಿತಾನಿ ತಾನಿ
ಫಲಂ ತತಃ ಕೋಟಿಗುಣಂ ದದಾತಿ ॥೧೬॥

ದದಾತಿ ಪಿಂಡಂ ಸ್ವಪಿತೃಭ್ಯ ವಿಷಃ
ತಿಲೋಕದಂ ಮುಂಡನಕರ್ಮ ವರ್ಜ್ಯಂ
ಸೌಪರ್ಣಿಕಾಯಾಂ ಯದಿ ಶುಕ್ಲತೀರ್ಥೇ
ಯದ್ವಾಥ್ಯತೇ ಸ್ವಾಃ ಪಿತರೋ ಹಿ ಯಾನ್ತಿ ॥೧೭॥

---

ಅಲ್ಲದೆ ಕನ್ಯೆಯರನ್ನೂ. ಸುವಾಸಿನಿಯರು ಅಂದರೆ ಮುತ್ತೈದೆಯರನ್ನೂ, ಬ್ರಾಹ್ಮಣಶ್ರೇಷ್ಠರನ್ನೂ ಹಾಗೂ ಇತರರನ್ನೂ ದಿವ್ಯಭೋಜನ ಮತ್ತು ಶ್ರೇಷ್ಠವಾದ ಆಭರಣದಾನ ಇವುಗಳಿಂದ ತೃಪ್ತಿಪಡಿಸಿದರೆ ಯಾವ ಫಲವುಂಟೋ, ಅವೆಲ್ಲವನ್ನೂ ಇಲ್ಲಿ ನಡೆಸಿದಲ್ಲಿ ಅದರ ಕೋಟಿಯಷ್ಟು ಫಲವನ್ನು ಪಡೆಯಬಹುದು.

ಗೋದಾನ. ಭೂದಾನ, ವಸ್ತ್ರದಾನ ಸುವರ್ಣದಾನ ಇವೇ ಮೊದಲಾದ ಪುಣ್ಯಕರವಾದ ದಾನಕರ್ಮಗಳನ್ನು ಯಾವನು ಇಲ್ಲಿ ಆಚರಿಸುತ್ತಾನೆಯೋ ಅವನಿಗೆ ಇತರ ಸ್ಥಳಗಳಲ್ಲಿ ಇವುಗಳನ್ನಾಚರಿಸಿದ್ದರಿಂದುಂಟಾಗುವ ಫಲದ ಕೋಟಿಯಷ್ಟು ಪಡೆಯುತ್ತಾನೆ.

ಈ ದೇವಿಯು ದಿವ್ಯ ದರ್ಶನಾರ್ಥವಾಗಿ ಬಂದವನು ಇಲ್ಲಿರುವ ಸೌಪರ್ಣಿಕಾನದಿಯಲ್ಲಿ ಇಲ್ಲವೆ ಶುಕ್ಲತೀರ್ಥದಲ್ಲಿ ಮುಂಡನಕರ್ಮವನ್ನು ಬಿಟ್ಟು ತನ್ನ ಪಿತೃಗಳಿಗೆ ಪಿಂಡಪ್ರದಾನ ಇಲ್ಲವೆ ತಿಲೋದಕತರ್ಪಣವನ್ನು ಸಲ್ಲಿಸುದುವೇ ಆದರೆ ಅಂತಹ ಪಿತೃಗಳು ಈ ದೇವಿಯ ಅನುಗ್ರಹದಿಂದ ಸ್ವರ್ಗವನ್ನು ಸೇರು

Sri Vidyabharathi Book Centre, Sringeri

CC-O. In Public Domain. Digitized by eGangotri


ಕ್ಷೇತ್ರೇಽತ್ರ ಸಂಸ್ಥಾಃ ಸಕಲಾ ಹಿ ಸಾಕ್ಷಾತ್
ದೇವೀಸ್ವರೂಪಾ ಇತಿ ಭಾವನೀಯಾ ।
ಅತೋಽನ್ನ ಮುಖ್ಯೈಃ ಪರಿತೋಷಯೇತ್ ತಾನ್
ಪ್ರತಿಗ್ರಹಂ ನೋ ದ್ವಯ ಮತ್ರ ಕುರ್ಯಾತ್ ॥೧೮॥
ರಥೋತ್ಸವಂ ಜಾಗರಣೋತ್ಸವಂ ವಾ ।
ಡೋಲೋತ್ಸವಂ ವಾ ಶಯನೋತ್ಸವಂ ವಾ ।
ಯಃ ಕಾರಯೇತ್ ಸೋಽತ್ರ ಹಿ ಭಾಗ್ಯವಾನ್ ಸನ್
ಪ್ರಾಪ್ನೋತಿ ಸಾಯುಜ್ಯಂ ಅಥಾಖಿಲೇಶ್ಯಾಃ ॥೧೯॥
ಯೇನೇಹ ಲಿಂಗೇ ಮಧುಸೂದನೋಽರ್ಚಿತೋ
ವೈಕುಂಠಲೋಕಂ ಶಶಿಶೇಖರೋಽರ್ಚಿತಃ ।
ಕೈಲಾಸಲೋಕಂ ನಿಖಿಲಾತ್ಮಿಕಾರ್ಚಿತಾ
ಪರಂ ಮಣಿದ್ವೀಪ ಮುಪೈತ್ಯಯಂ ನರಃ ॥೨೦॥

---

ತ್ತಾರೆ. ಈ ಕ್ಷೇತ್ರದಲ್ಲಿ ನೆಲೆಸಿರುವ ಇತರೆ ದೇವತೆಗಳೂ ಸಾಕ್ಷಾತ್ ದೇವೀಸ್ವರೂಪಿಗಳೇ ಎಂದು ಭಾವಿಸಬೇಕು. ಈ ಕಾರಣದಿಂದ ಆ ದೇವತೆಗಳೆಲ್ಲರನ್ನೂ ಅನ್ನಾದಿಗಳಿಂದ ತೃಪ್ತಿಪಡಿಸಬೇಕಾದರೆ ತಾನು ಮಾತ್ರ ಪ್ರತಿಗ್ರಹವನ್ನು ಮಾಡಬಾರದು. ಅಂದರೆ ತಾನೂ ಯಾವದಾನಕ್ಕೂ ಕೈ ಹಿಡಿಯಬಾರದು.

ಈ ಕ್ಷೇತ್ರದಲ್ಲಿ ರಥೋತ್ಸವವನ್ನಾಗಲೀ, ಜಾಗರಣೋತ್ಸವವನ್ನಾಗಲಿ, ಡೋಲೋತ್ಸವವನ್ನಾಗಲೀ, ಇಲ್ಲವೆ ಶಯನೋತ್ಸವವನ್ನಾಗಲಿ ಯಾವನು ಆಗಮಾಡಿಸುವನೋ ಅವನು ಇಲ್ಲಿ ಜೀವಿತನಾಗಿರುವಾಗ ಮಹಾಭಾಗ್ಯವಂತನಾಗಿ, ದೇಹವನ್ನು ತ್ಯಜಿಸಿದ ಮೇಲೆ ಸಾಯುಜ್ಯವನ್ನು ಅಂದರೆ ಮುಕ್ತಿಪದವಿಯನ್ನು ಶ್ರೀದೇವಿಯ ಅನುಗ್ರಹದಿಂದ ಪಡೆಯುತ್ತಾನೆ.

ಯಾವ ಭಕ್ತನು ಇಲ್ಲಿ ಸ್ಥಾಪಿತವಾಗಿರುವ ಲಿಂಗದಲ್ಲಿ ವಿಷ್ಣುದೇವನನ್ನು ಆರಾಧಿಸಿ ಪೂಜಿಸುವನೋ ಅವನು ವೈಕುಂಠವನ್ನೂ, ಇಲ್ಲವೆ ಚಂದ್ರಶೇಖರನಾದ ಶಿವನನ್ನು ಆರಾಧಿಸಿ ಪೂಜಿಸುವನೋ ಅವನು ಕೈಲಾಸವನ್ನೂ ಅಥವಾ, ಅಖಿಲಾತ್ಮಕಳಾದ ಮಹಾಲಕ್ಷ್ಮೀ ದೇವಿಯನ್ನು ಆರಾಧಿಸಿ ಪೂಜಿಸುವನು ಶ್ರೇಷ್ಠವಾದ ದೇವಿ[illegible]ದ್ವೀಪವನ್ನು ಪಡೆಯುವನು.

Sri Vidyabharathi Book Centre, Sringeri

CC-O. In Public Domain. Digitized by eGangotri


ತಥಾತ್ರ ಕಾಲೀ ಪರಿಪೂಜಿತಾ ಜಯಂ
ಲಕ್ಷ್ಮೀಶ್ಚ ಲಕ್ಷ್ಮೀಃ ಪರಿಪೂಜಿತಾ ಯದಿ ।
ವಿದ್ಯಾಃ ಸರಸ್ವತ್ಯಪಿ ಪೂಜಿತಾ ಪುನಃ
ದದಾತಿ ಸರ್ವಾಂಶ್ಚ ಪರಾಂಬಿಕಾರ್ಚಿತಾ ॥೨೧॥
ಕಾಲೋಽಖಿಲೋಽಪ್ಯತ್ರ ಮತಃ ಪ್ರಶಸ್ತ
ತತ್ರಾಪಿ ಮುಖ್ಯಂ ನವರಾತ್ರಯುಗ್ಮಂ ।
ಚತುರ್ದಶೀ–ಪಂಚದಶೀ–ನವಮ್ಯಃ
ತಥಾಷ್ಟಮೀ ಮಂಗಳ ಶುಕ್ರವಾರೌ ॥೨೨॥
ಯೇ ಸ್ತನಿ ಲೋಕೇ ಗಜವಾಹನಾಶ್ಚ
ಯೇ ಶಕ್ತಿಮಂತೋ ಹಯವಾಹನಾ ಯೇ ।
ಯೇ ಭೋಗವಂತೋ ನರವಾಹನಾ ಯೇ
ದೇವ್ಯರ್ಚನಂ ತೈಃ ಕೃತಮೇವ ಪೂರ್ವಂ ॥೨೩॥

---

ಇಲ್ಲಿ ಮಹಾಕಾಳಿದೇವಿಯನ್ನು ಆರಾಧಿಸಿ ಆ ದೇವಿಯನ್ನು ಪೂಜಿಸಿದಲ್ಲಿ ಸಮಸ್ತ ಜಯವನ್ನೂ, ಲಕ್ಷ್ಮಿದೇವಿಯನ್ನು ಆರಾಧಿಸಿ ಪೂಜಿಸಿದುದೇ ಆದರೆ ಸಕಲೈಶ್ವರ್ಯಗಳನ್ನೂ, ಸರಸ್ವತೀದೇವಿಯನ್ನು ಆರಾಧಿಸಿ ಪೂಜಿಸಿದುದೇ ಆದರೇ ಸಮಸ್ತ ವಿದ್ಯೆಗಳನ್ನೂ ಅಲ್ಲದೆ ಪರಾಂಬಿಕೆಯನ್ನು ಆರಾಧಿಸಿ ಪೂಜೆಮಾಡಿದರೆ ಸಲಕವಾದ ಇಷ್ಟಸಿದ್ಧಿಗಳನ್ನೂ ಪಡೆಯಬಹುದು.

ಇಲ್ಲಿ ಮೂಕಾಂಬಿಕೆಯನ್ನೂ ಅರ್ಚಿಸುವುದಕ್ಕೆ ಸಮಸ್ತಕಾಲವೂ ಸುಭವೇ ಆಗಿದ್ದರೂ, ವಸಂತ ನವರಾತ್ರಿ ಮತ್ತು ಶರನ್ನವರಾತ್ರಿ ಈ ಕಾಲಗಳಲ್ಲಿಯೂ, ಚತುರ್ದಶೀ, ಪೂರ್ಣಿಮಾ ವಾರಗಳಲ್ಲಿ ದೇವಿಯನ್ನು ಅರ್ಚಿಸುವುದು ಅಪರಿಮಿತವಾದ ಫಲಪ್ರದಗಳು.

ಯಾರು ಯಾರು ಈ ಜನ್ಮದಲ್ಲಿ ಗಜವಾಹನರಾಗಿಯೂ, ಅಶ್ವವಾಹನರಾಗಿಯೂ, ಶಕ್ತಿವಂತರಾಗಿಯೂ, ನರವಾಹನರಾಗಿಯೂ, ಭೋಗಭಾಗ್ಯಗಳನ್ನು ಅನುಭವಿಸುವಂತರಾಗಿಯೂ ಮೆರೆಯುತ್ತಿರುವರೋ ಅವರೆಲ್ಲರೂ ? ಂದಿನ ಜನ್ಮದಲ್ಲಿ ಈ ದೇವಿಯನ್ನು ಭಕ್ತಿಯಿಂದ ಆರಾಧಿಸಿದವರೇ ಆಗಿರುತ್ತಾರೆ ಇವರಲ್ಲಿ ಸಂಶಯವಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri



ಯೇ ಶಕ್ತಿಹೀನಾಃ ಧನವರ್ಜಿತಾಃ ಯೇ
ಯೇ ರೋಗಿಣಃ ಪುತ್ರವಿವರ್ಜಿತಾಃ ಯೇ ।
ಸತೀವಿಹೀನಾ ಅಪಿ ದುಃಖಭಾಜೋ
ದೇವ್ಯರ್ಚನಂ ತೈಃ ನ ಕೃತಂ ಹಿ ಪೂರ್ವಂ ॥೨೪॥

ಅತಃ ಪ್ರಯತ್ನೇನ ಚ ಬುದ್ಧಿಮಾನ್ ಯಃ
ಸ ಮಾನವಃ ತದ್ಗತಮಾನಸಃ ಸನ್ ।
ಪ್ರಪೂಜಯೇತ್ ಅತ್ರ ಹಿ ವಿತ್ತಶಾಠ್ಯ-
ವಿವರ್ಜಿತಃ ಕಾಮದುಘಾಂ ಮಹೇಶೀಂ ॥೨೫॥

ಬ್ರಹ್ಮಾ ಹರಿಃ ಶಂಭುಃ ಅಮೀ ತ್ರಯೋಽಪಿ
ಧ್ಯಾಯನ್ತಿ ನಿತ್ಯಂ ಸ್ವವಿಭೂತಿವೃದ್ಧ್ಯೈ ।
ಯಾಂ ಸರ್ವಶಕ್ತಿಂ ನ ಚ ಪೂಜಯೇತ್ ತಾಂ
ಯತ್ ತಸ್ಯ ಜನ್ಮೇಹ ನಿರರ್ಥಕಂ ಹಿ ॥೨೬॥

---

ಯಾರು ಯಾರು ಬಲಹೀನರಾಗಿರುವರೋ, ಬಡತನದಲ್ಲಿ ನರಳುತ್ತಿರುವವರೋ, ಯಾರು ರೋಗಿಗಳೋ, ಯಾರು ಮಕ್ಕಳಿಲ್ಲದ ದುಃಖದಿಂದ ನರಳುತ್ತಿರುವರೋ, ಯಾರು ಹೆಂಡತಿಯನ್ನು ಕಳೆದುಕೊಂಡ ದುಃಖದಿಂದ ಕೂಡಿರುವರೋ ಅವರೆಲ್ಲರೂ ತಮ್ಮ ಹಿಂದಿನ ಜನ್ಮದಲ್ಲಿ ಮೂಕಾಂಬಿಕಾ ದೇವಿಯನ್ನು ಅರ್ಚಿಸದಿರುವವರೇ ಹೌದು.

ಈ ಕಾರಣದಿಂದ ಬುದ್ಧಿಯಿಂದ ಕೂಡಿದ ಮಾನವನು ಆ ದೇವಿಯಲ್ಲಿ ನೆಟ್ಟ ಮನಸ್ಸುಳ್ಳವನಾಗಿ, ಧನವನ್ನು ಉದಾರತೆಯಿಂದ ವೆಚ್ಚಮಾಡುತ್ತ, ಭಕ್ತರ ಇಷ್ಟಾರ್ಥವನ್ನು ನೆರವೇರಿಸಲುಳ್ಳ ಇಲ್ಲಿರುವ ಮೂಕಾಂಬಿಕಾದೇವಿಯನ್ನು ಭಕ್ತಿಯಿಂದ ಪೂಜಿಸಬೇಕು.

ತಮ್ಮ ಶ್ರೇಯಸ್ಸನ್ನು ಅಭಿವೃದ್ಧಿಪಡಿಸಿಕೊಳ್ಳಲು, ಸೃಷ್ಟಿಸ್ಥಿತಿಲಯಗಳಿಗೆ ಕಾರಣಭೂತರಾದ ಬ್ರಹ್ಮ ವಿಷ್ಣು ಮಹೇಶ್ವರರು ಯಾವ ಮಹಾದೇವಿಯನ್ನು ಸದಾ ಧ್ಯಾನಮಾಡುತ್ತಿರುವರೋ, ಅಂತಹ ಸರ್ವಶಕ್ತಿಯುತಳಾದ ದೇವಿಯನ್ನು ಪೂಜೆ ಮಾಡದಿದ್ದಲ್ಲಿ ಅಂತಹವರ ಜನ್ಮವೇ ವ್ಯರ್ಥ.

Sri Vidyabharathi Book Centre, Sringeri

CC-O. In Public Domain. Digitized by eGangotri


ಯೋ ದೇವದೇವ್ಯೈ ತದುಪಾಸಕಾಯ ವಾ ।
ದದಾತಿ ಭೂಮಿಂ ಕನಕಾದಿಕಂ ಚ ವಾ ।
ಸ ಯಾತಿ ಲೋಕಂ ಪ್ರಕೃತೇಃ ಸಮಂ ಫಲಂ
ದೇವಾಯ ವಿಪ್ರಾಯ ಚ ದಾನತಃ ಸ್ಮೃತಂ ॥೨೭॥
ಯೋಽಸೌ ಮಹಾಪಾಪಿಸಹಸ್ರಕಂ ಕ್ಷಣಾತ್
ಪುನಾತಿ ಗಂಗಾ ಮಹತೀ ಕಲೌ ಕಿಲ ।
ಸಾಽಪಿ ಪ್ರಕೃತ್ಯಾಃ ಸದುಪಾಸಕಾಪ್ಲವಂ
ಕಾಂಕ್ಷತ್ಯಜಸ್ರಂ ಧೃತಪಾಪನಾಶತಃ ॥೨೮॥
ತಸ್ಮಾತ್ ಹಿ ತ್ರಿಜಗತಿ ಶಕ್ತಿಭಕ್ತಿತುಲ್ಯಃ
ಸಂಶುದ್ಧಃ ಪ್ರಭವತಿ ಕಶ್ಚನಾಪಿ ನಾನ್ಯ
ತದ್ದತ್ತಂ ಬಹು ಮನುತೇಽಪಿ ಸಾ ಸ್ವದತ್ತಾ
ತುಷ್ಟೇಽಸ್ಮಿ ಭವತಿ ಪರಾಂಬಿಕಾಽತಿ ತುಷ್ಟಾ ॥೨೯॥

---

ದೇವತೆಗಳಿಗೂ ದೇವಿಯೆನಿಸಿದ ಮೂಕಾಂಬಿಕೆಗಾಗಿಯೂ, ದೇವಿಯ ಉಪಾಸನೆ ಮಾಡುವವನಿಗೆ ಭೂಮಿಯನ್ನಾಗಲಿ ಹಿರಣ್ಯಾದಿಗಳನ್ನಾಗಲಿ ಯಾವನು ಅರ್ಪಿಸುತ್ತಾನೆಯೋ ಅವನು ದೇವಿಗೆ ವಾಸಸ್ಥಾನವೆನಿಸಿದ ಮಣಿದ್ವೀಪವನ್ನು ಪ್ರವೇಶಿಸಲು ತಕ್ಕವನಾಗಿರುತ್ತಾನೆ. ಅಲ್ಲದೆ ಅವನು ದೇವತೆಗಳಿಗೆ ಮತ್ತು ಯೋಗ್ಯರಾದ ಬ್ರಾಹ್ಮಣರಿಗೆ ದಾನಾದಿಗಳನ್ನು ಮಾಡಿದ ಫಲಕ್ಕೆ ಸಮನಾದ ಫಲವನ್ನು ಪಡೆಯುತ್ತಾನೆ.

ಈ ಕಲಿಯುಗದಲ್ಲಿ ದೇವಗಂಗಾನದಿಯು ತನ್ನಲ್ಲಿ ಮುಳುಗಿದ ಸಾವಿರಾರು ಪಾಪಿಗಳನ್ನು ಶುದ್ಧಿಪಡಿಸುವಂಥವಳಾಗಿರುತ್ತಾಳೆ. ಅಂತಹ ಗಂಗಾಮಾತೆಯು ಪಾಪಿಗಳಿಂದ ತಾನು ಪಡೆದ ಪಾಪಸಮೂಹವನ್ನು ತೊಲಗಿಸಿಕೊಳ್ಳುವುದಕ್ಕಾಗಿ ನಿರಂತರವೂ ದೇವಿಯ ಉಪಾಸನೆಯೆಂಬ ಸ್ನಾನವನ್ನು ಮಾಡಿ ತಾನು ಪರಿಶುದ್ಧಳಾಗಲು ಇಚ್ಛಿಸುತ್ತಾಳೆ.

ಈ ಕಾರಣದಿಂದ ದೇವಿಯ ಭಕ್ತನಿಗೆ ಸಮಾನವಾದ ಪರಿಶುದ್ಧಾತ್ಮನು ಲೋಕದಲ್ಲಿ ಮತ್ತೊಬ್ಬನಿರನು. ಶಕ್ತಿಸ್ವರೂಪಿಣಿಯಾದ ದೇವಿಯು ಆರಾಧಕನಿಗೆ ಅರ್ಪಿಸುವುದರಿಂದ ತನಗೇ ಅರ್ಪಿಸಿದಂತೆ ಭಾವಿಸುವಳು. ಅಂದರೆ ಉಪಾಸಕನನ್ನು ತುಷ್ಟಿಪಡಿಸಿದರೆ ತನ್ನನ್ನೇ ತುಷ್ಟಿಪಡಿಸಿದಂತೆ ಮನ್ನಾಣುವಳು.

Sri Vidyabharathi Book Centre, Sringeri

CC-O. In Public Domain. Digitized by eGangotri



ಶ್ರೀಪರ್ಣೀ ಕ್ಷ್ಮಾಭೃತ್ವರೇಣ್ಯಃ ‡ ಕುಟಜಗಿರಿಷು ‡ ಖ್ಯಾತ
ಸಂಜೀವಕಾದ್ಯಃ ।
ಪೂರ್ವಂ ಯುದ್ಧೇತು ಸೀತಾ- ‡ ಪತಿದಶಮುಖಯೋಃ
ರಂಜನಾಯಾಃ ಸುತೇನ ॥
ಪ್ರಕ್ಷಿಪ್ತಃ ಶ್ರೀಮಹೇಶ್ಯಾಃ ‡ ಪುರತ ಇಹ ಚತುಃ- ‡
ಷಷ್ಠಿತೀರ್ಥೌಷಧಾಢ್ಯಃ ॥
ಸಾಕ್ಷಾದೀಶಸ್ವರೂಪೀ ‡ ಜಯತಿ ಹಿ ನಿತರಾಂ ‡ ಪ್ರಾಣಿನಾಂ
ಹಂತ ಭಾಗ್ಯಂ ॥೩೦॥
ಇಹ ಪ್ರಾದುರ್ಭೂತಾ ‡ ಕುಟಜಗಿರಿವರ್ಯಾತ್ ವರನದೀ
ತದುದ್ಯತ್ ತೀರ್ಥಾಢ್ಯಾಃ ‡ ಕಲಿಕಲುಷನಾಶೈಕಚತುರಾ ।
ಅಸೌ ಸೌಪರ್ಣೀ ಸ್ಯಾತ್ ‡ ನಿಖಿಲಫಲಸಿದ್ಧ್ಯೈ ತನುಭೃತಾಂ
ಸುಪರ್ಣೋ ಯತ್ರಾಪ ‡ ಸ್ವಪರಮಮರೇಶ್ಯಾ ಹಿ ತಪಸಾ ॥೩೧॥

---

ಈ ಮಹಾಕ್ಷೇತ್ರದಲ್ಲಿ ಗಿರಿಮಲ್ಲಿಕೆಗಳಿಂದ ನಿಬಿಡವಾಗಿ ಕುಟಜಗಿರಿಯೆಂಬ ಅನ್ವರ್ಥನಾಮವನ್ನು ಹೊಂದಿದ ಪರ್ವತಶ್ರೇಷ್ಠವಾದ ಅಂಜನಾದ್ರಿಯೊಂದು ಉಂಟು. ಇದು ಈ ಹಿಂದೆ ತ್ರೇತಾಯುಗದಲ್ಲಿ ನಡೆದ ರಾಮಾಯಣದ ಯುದ್ಧಕಾಲದಲ್ಲಿ ಮೂರ್ಛೆಗೊಂಡ ಲಕ್ಷ್ಮಣನ ಪ್ರಾಣವನ್ನು ಉಳಿಸಲು ಹನುಮಂತನಿಂದ ತರಲ್ಪಟ್ಟು. ತನ್ನ ಕಾರ್ಯಮುಗಿದ ಮೇಲೆ ಅದನ್ನು ಈ ಮಹಾದೇವಿಯು ನೆಲೆಸಿರುವ ಸ್ಥಳದಲ್ಲಿ ಇರಿಸಿದಂಥದು. ಇದು ಅರವತ್ತುನಾಲ್ಕು ದಿವ್ಯ ತೀರ್ಥಗಳಿಂದಲೂ, ದಿವ್ಯೌಷಧಗಳಿಂದಲೂ ಕೂಡಿರುವಂಥದು. ಅಲ್ಲದೆ ಇದು ಸಾಕ್ಷಾತ್ ಶಿವನ ನೆಲೆಯಾಗಿಯೂ ಆ ಸದಾಶಿವನ ಸ್ವರೂಪವಾಗಿಯೂ ಬೆಳಗುತ್ತಿದೆ, ಇದು ಪ್ರಾಣಿಗಳ ಅಂದರೆ ಜೀವಿಗಳ ಮಹಾಭಾಗ್ಯವಾಗಿ ಪರಿಣಮಿಸಿದೆ.

ಈ ಸ್ಥಳದಲ್ಲಿರುವ ಕುಟಜಗಿರಿಶ್ರೇಷ್ಠದಲ್ಲಿ ಹುಟ್ಟಿ ಅರವತ್ತನಾಲ್ಕು ಇತರ ತೀರ್ಥಗಳಿಂದ ಕೂಡಿ, ಕಲಿಯ ಪಾಪಗಳೆಲ್ಲವನ್ನೂ ನಾಶಮಾಡಿ ಶುದ್ಧಿಗೊಳಿಸಬಲ್ಲ ಸೌಪರ್ಣಿಕಾ ನದಿಯು ಹರಿಯುತ್ತದೆ. ಇದು ಸಮಸ್ತ ಜನರಿಗೆ ಇಷ್ಟಾರ್ಥಗಳನ್ನು [illegible] ಗರುಡ ದೇವನು

Sri Vidyabharathi Book Centre, Sringeri

CC-O. In Public Domain. Digitized by eGangotri

ಪಾನಾಧಿಕ್ಯಾತ್ ‡ ಮಹಿಷಸಮರೇ ‡ ಪ್ರಚ್ಯುತಂ ಶುಕ್ಲಮುರ್ವ್ಯಾಂ
ದೇವೇಶ್ಯಾಯತ್ ‡ ಬಲಿಗೃಹಮಗಾತ್ ‡ ತೇನ ಪಾತಾಲ ಗಂಗಾ ।
ಉದ್ಭೂತಾ ತತ್ ‡ ಕಲಿತಬಿಲತಃ ‡ ಶುಕ್ಲತೀರ್ಥಂ ತದಾಹುಃ
ಶುಕ್ರಸ್ಯಸ್ತೋ ‡ ನಿಖಿಲವರದೋ ‡ ಯತ್ರ ಸಿದ್ಧೇಶ್ವರೋಽಸ್ತಿ ॥

ದೇವ್ಯಾಃಪುರಸ್ತಾತ್ ಖಲು ವಹ್ನಿತೀರ್ಥಂ
ಆಸ್ತೇ ವಸಿಷ್ಠಾದಿ-ಮುನೀಂದ್ರಜುಷ್ಟಂ ।
ಈಶಾಂಶಂ ಭಾರ್ಗವತೀರ್ಥಮುಕ್ತಂ
ಸುಪಾವನಂ ಭಾರ್ಗವರಾಮಕ್ಲೃಪ್ತಂ ೩೩ ।

ಈಶಾದಿಕೋಣೇಷು ಚತುರ್ಷುಸಂಸ್ಥಾಃ
ಶ್ರೀವೀರಭದ್ರಶ್ಚ ಷಡಾನನಶ್ಚ ।
ಲಂಬೋದರೋ ಮಾರುತಿ ರಿತ್ಯಥಾನ್ಯೈಃ
ದೇವಾಃ ಕಿಲಾಸ್ಮಿ ಬಹವಃ ಸಮಂತಾತ್ ॥೩೪॥

---

ಇದರ ತೀರದಲ್ಲಿ ತಪಸ್ಸನ್ನಾಚರಿಸಿ, ಈ ದೇವಿಯ ದೆಸೆಯಿಂದ ತನ್ನ ಸಕಲಾಭೀಷ್ಟಗಳನ್ನು ಪಡೆದನಾದುದರಿಂದ ಇದಕ್ಕೆ ಸೌಪರ್ಣಿಕಾ ಎಂಬುದು ಅನ್ವರ್ಥನಾಮ.

ಈ ಹಿಂದೆ ಮಹಿಷಾಸುರನೊಡನೆ ಯುದ್ಧ ಮಾಡುತ್ತಿದ್ದಾಗ ದೇವಿಯು ಹೆಚ್ಚು ಮಧುಪಾನ ಮಾಡಿದ್ದರಿಂದ, ದೇವಿಯಿಂದ ಶುಕ್ಲವು ಹೆಚ್ಚಾಗಿ ಉಕ್ಕಿ ಹರಿದು ಭೂಮಿಯಲ್ಲಿ ಜಾರಿಬಿದ್ದಿತು, ಅದು ಬಲಿಚಕ್ರವರ್ತಿಯ ನೆಲೆಯಾದ ಪಾತಾಳವನ್ನು ಹೊಕ್ಕಿತು. ಆ ರಂಧ್ರದಿಂದ ಪಾತಾಳಗಂಗೆಯು ಉಕ್ಕಿ ಬೆಳ್ಳಗಿರುವ ಪ್ರವಾಹವು ಹೊರಗೆ ಹರಿಯಿತು. ಈ ಕಾರಣದಿಂದ ಇದಕ್ಕೆ ಶುಕ್ಲತೀರ್ಥವೆಂಬ ಹೆಸರು ಇದೆ, ಇದರ ದಂಡೆಯಲ್ಲಿ ಶುಕ್ರನಿಂದ ಸ್ಥಾಪಿತವಾದ ಸಿದ್ಧೇಶ್ವರನ ದೇವಾಲಯವು ಇದೆ. ಈ ದೇವನು ಸಮಸ್ತರ ಮನದಣಿಕೆಗಳನ್ನು ಸಿದ್ಧಗೊಳಿಸುವನಾದುದರಿಂದ ಆ ಹೆಸರು ಅವನಿಗೆ ಅನ್ವರ್ಥ.

Sri Vidyabharathi Book Centre, Sringeri

CC-O. In Public Domain. Digitized by eGangotri



**ಗಂಧರ್ವ–ಸಿದ್ಧೋರಗ–ಕಿನ್ನರಾದ್ಯಾಃ ।**
**ಗಾಯಂತಿ ಸಂಧ್ಯಾತ್ರಿತಯೇಽತಿ ಭಕ್ತ್ಯಾ ॥**
**ವೇದೈಃ ತ್ರಿಭಿಃ ನಿತ್ಯಮಿಹೈವ ದೇವೀಂ ।**
**ಸಚ್ಚಿತ್ಸ್ವರೂಪಾಂ ಕುಟಜಾದ್ರಿಸಂಸ್ಥಾಃ** ॥೩೫
**ಇತ್ಥಂ ಶ್ರುತಂ ಮದ್ಗುರುವರ್ಯವಕ್ತ್ರಾತ್ ।**
**ನೃಣಾಂ ಇಹಾಮುತ್ರ ಸುಖಪ್ರದಂ ಯತ್ ॥**
**ಮಾಹಾತ್ಮ್ಯಂ ಏತಸ್ಯ ರಹಸ್ಯ ಬ್ರೂತ್ಯ ।**
**ಉಕ್ತೋಽಧುನಾ ಸಂಗ್ರಹ ಏವ ವಿಪ್ರಾಃ** ॥೩೬॥
**ಏವಂ ಶ್ರದ್ಧಾಭಕ್ತಿಯುಕ್ತೋ ನರೋ ಯಃ**
**ಕುರ್ಯಾತ್ ಏತತ್ ಕ್ಷೇತ್ರಯಾತ್ರಾಂ ಸ ಯಾತಿ ॥**
**ದೇವೀಲೋಕಂ ತಸ್ಯ ಪಿತ್ರಾದಯೋಽಪಿ ।**
**ಪ್ರೀತಾಃ ಸಂತೋ ಬ್ರಹ್ಮಲೋಕೇ ವಸ್ತನಿ** ॥೩೭॥

---

ಈ ದೇವಿಯ ಮುಂಭಾಗದಲ್ಲಿ ವಸಿಷ್ಠಾದಿ ಮುನಿಗಳಿಂದ ಸೇವಿತವಾದ ವಹ್ನಿತೀರ್ಥವೆಂಬುದಿರುವುದು. ಅಲ್ಲದೆ ಈಶನ ಅಂಶದಿಂದ ಹುಟ್ಟಿದ, ಮಹಾಪವಿತ್ರವಾದ ಪರುಶುರಾಮನಿಂದ ಕಲ್ಪಿತವಾದ ಭಾರ್ಗವತೀರ್ಥ ವೆಂದೆಂಬುದುಂಟು. ಇದು ಮಹಾಪವಿತ್ರವಾದುದು,

ದೇವಿಯ ಈಶ್ಯಾನ ಕೋಣದಲ್ಲಿ ವೀರಭದ್ರದೇವನೂ, ಆಗ್ನೇಯ ಕೋಣದಲ್ಲಿ ಷಣ್ಮುಖನೂ, ನೈರುತ್ಯ ಕೋಣದಲ್ಲಿ ಗಣಪತಿಯೂ ಮತ್ತು ವಾಯುವ್ಯ ಕೋಣದಲ್ಲಿ ಮಾರುತಿ ಅಂದರೆ ಆಂಜನೇಯಸ್ವಾಮಿಯೂ ಪ್ರತಿಷ್ಠಿತರಾಗಿರುತ್ತಾರೆ.

ಇದೂ ಅಲ್ಲದೆ ಸುತ್ತಲೂ ಇತರ ಅನೇಕ ದೇವತೆಗಳೂ ಪ್ರತಿಷ್ಠಿತ ರಾಗಿದ್ದಾರೆ. ಆಕುಟಜಾದ್ರಿಯಲ್ಲಿ ವಾಸವಾಗಿರುವ ಗಂಧರ್ವರೂ, ಸಿದ್ಧರೂ, ಕಿನ್ನರರೂ ಮತ್ತು ಉರಗರೂ ಎಂಬ ದೇವಯೋನಿಗಳು ಅತಿ ಭಕ್ತಿಯಿಂದ ಮೂರು ಸಂಧ್ಯಾಕಾಲಗಳಲ್ಲಿಯೂ ನಿತ್ಯವೂ ಮತ್ತು ಸತ್‌ಚಿತ್ ಸ್ವರೂ ಪಿಣಿಯೂ ಆದ ದೇವಿಯನ್ನು ಋಕ್, ಯಜುಸ್ ಮತ್ತು ಸಾಮ ಎಂಬ ಈ ವೇದತ್ರಯ ವಾಕ್ಯಗಳ ಮೂಲಕ ಗಾನ ಮಾಡುತ್ತಿರುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri



ತೀರ್ಥಸ್ನಾನಂ ದ್ರವ್ಯದಾನಂ ಸುರಾರ್ಚಾಂ ।
ವಿದ್ವದ್ಭಕ್ತಿಂ ತತ್ಕಥಾಕರ್ಣನಂ ಚ ॥
ಯೇ ಸೈ ಚಕ್ರುಃ ತೇ ಮಹಾಕ್ಷೇತ್ರಯಾತ್ರಾಂ ।
ಚಕ್ರುಃ ನೋ ಚೇತ್ ತೇ ಹಿ ನೋ ಚಕ್ರುರೇವ ॥

ಯೋವಾಲಸ್ಯಾತ್ ಮೋಹಿತೋ ವಾನ್ಯತೋ ವಾ ।
ಮರ್ತ್ಯಃ ಪ್ರಾಪ್ತಃ ಸನ್ಮಹಾಕ್ಷೇತ್ರಮತ್ರ ॥
ನೋ ಕುರ್ಯಾತ್ ತದ್ದೇವತಾರಾಧನಾದ್ಯಂ
ದೇವದ್ರೋಹೀ ಸ್ಯಾತ್ ಪಿತೃದ್ರೋಹವಾಂಶ್ಚ ॥ ೬೯

---

ಸೂತ ಮಹಾಮುನಿಯು ಮುಂದುವರಿಸಿ ಆ ಶೌನಕಾದಿ ಮುನಿಗಳನು ಕುರಿತು, ನನ್ನ ಗುರುಗಳಾದ ವೇದವ್ಯಾಸ ಮಹರ್ಷಿಗಳ ಮುಖದಿಂದ ನಾನು ಕೇಳಿದ ಈ ಕೋಲಾಪುರದಲ್ಲಿ ನೆಲೆಸಿರುವ ದೇವಿಯ ಮಹಾತ್ಮ್ಯೆಯ ರಹಸ್ಯವನ್ನು ನಿಮಗೆ ಸಂಗ್ರಹವಾಗಿ ವಿವರಿಸುತ್ತೇನೆ. ಇದು ಇಹಲೋಕ ಮತ್ತು ಪರಲೋಕದ ಸುಖಗಳನ್ನು ಸಾಧಿಸಿ ಕೊಡಬಲ್ಲದು ಎಂದು ಹೇಳಿದನು.

ಬ್ರಾಹ್ಮಣೋತ್ತಮರೇ ! ಕೇಳಿರಿ. ಶ್ರದ್ಧಾ ಭಕ್ತಿಯಿಂದ ಕೂಡಿದ ಯಾವ ಮಾನವನು ಅದೇ ಶ್ರದ್ಧಾಭಕ್ತಿಯಿಂದ ಕೂಡಿ ಪವಿತ್ರವೆನ್ನಿಸಿದ ಈ ಕ್ಷೇತ್ರ ಯಾತ್ರೆಯನ್ನು ಮಾಡಿದುದೇ ಆದರೆ ಅವನು ದೇವೀಲೋಕವನ್ನೇ ಗಳಿಸುವನು ಅಲ್ಲದೆ ಅಂಥವನನ್ನು ಪಿತೃಗಳೂ ಕೂಡ ಇದರಿಂದ ಸುಪ್ರೀತರಾಗಿ ಶಾಶ್ವತ ವಾದ ಬ್ರಹ್ಮಲೋಕವನ್ನು ಪಡೆಯುವರು.

ಈ ಕ್ಷೇತ್ರದಲ್ಲಿನ ತೀರ್ಥಗಳಲ್ಲಿ ಸ್ನಾನಮಾಡಿ, ಧನವನ್ನು ದಾನ ಮಾಡಿ, ದೇವಾರ್ಚನೆಯನ್ನು ನೆರವೇರಿಸಿ, ವಿದ್ವಾಂಸರಿಗೆ ಸಂತರ್ಪಣೆಯಿಂದ ತೃಪ್ತಿಪಡಿಸಿ, ಆ ದೇವಿಯ ಕಥೆಯನ್ನು ಆನಂದದಿಂದ ಯಾವನು ಕೇಳುವನೋ ಅವನು ಮಹಾಯಾತ್ರೆಯ ಫಲವನ್ನು ಅನುಭವಿಸುವನು. ಈ ಐದನ್ನು ನೆರವೇರಿಸದಿದ್ದರೆ ತೀರ್ಥಯಾತ್ರೆಯ ಫಲವು ಅವನಿಗೆ ದೊರಕದು. ಯಾವ ಮಾನವನು ಆಲಸ್ಯದಿಂದಾಗಲಿ ಮೋಹದಿಂದಾಗಲಿ ಅಥವಾ ಬೇರೆ ಯಾವ ಕಾರಣದಿಂದಾಗಲೀ ಈ ಕ್ಷೇತ್ರಕ್ಕೆ ಬಂದು ದೇವತಾರಾಧನೆ ಮಾಡದಿದ್ದಲ್ಲಿ, ಅಂಥವನು ದೈವದ್ರೋಹಿ [illegible] ಗಣಿಸಲ್ಪಡುವನು.

Sri Vidyabharathi Book Centre, Sringeri

CC-O. In Public Domain. Digitized by eGangotri



ಸಂಪೂಜ್ಯ ಸರ್ವಜನನೀಂ ಅತಿಭಕ್ತಿಯುಕ್ತೋ ।
ಮಹಾತ್ಮ್ಯಂ ಏತದಮಲಂ ಗುರುವರ್ಯವಕ್ತ್ರಾತ್ ॥
ಶ್ರುತ್ವಾಽಥ ಪುಸ್ತಕಮಿದಂ ಪರಿಪೂಜ್ಯ ಶಕ್ತ್ಯಾ ।
ವಕ್ತಾರಂ ಅಂಶುಕಮುಖೈಃ ಪರಿತೋಷಯೇತ್ ಚ ॥೪೦॥

ಇದಂ ಸಾರಭೂತಂ ಚರಿತ್ರಂ ಪವಿತ್ರಂ ।
ಪುರಾಣಂ ಪಠತ್ಯೇಕಚೇತಾಃ ನರೋ ಯಃ ॥
ಶೃಣೋತ್ಯೇವ ವಾ ಭಾಗ್ಯಶಾಲೀ ಸ ಏತತ್
ಮಹಾಕ್ಷೇತ್ರ ಯಾತ್ರಾಫಲಂ ಯಾತಿ ಸತ್ಯಂ ॥೪೧

ಪುನರೇತದ್ದಲಂ ಭವಾನ್ಯಾಃ ಪ್ರಾಂತೇ ।
ಸಕೃದಗ್ನಿಭುವೇ ಪುರಾರಿಣೋಕ್ತಂ ॥
ಶ್ರವಣಂ ಯದಿ ಸರ್ವಪಾಪಮುಕ್ತಃ ।
ಸ ಭವೇತ್ ಚಾಪಿ ಶಿವಾಕೃಪಾಸಪಾತ್ರಃ ॥೪೨॥

---

ಈ ಕಾರಣದಿಂದ ಈ ಕ್ಷೇತ್ರಕ್ಕೆ ಬಂದು ಲೋಕಮಾತೆಯೆನಿಸಿದ ದೇವಿಯನ್ನು ಅತಿ ಭಕ್ತಿಯಿಂದ ಪೂಜಿಸಿ, ಗುರುವರ್ಯರ ಮುಖದಿಂದ ಈ ಕ್ಷೇತ್ರದೊಳಗಣ ದೇವೀ ಮಹಾತ್ಮ್ಯೆಯನ್ನು ಕಿವಿಯಾರಕೇಳಿ ಬಳಿಕ ದೇವೀ ಮಹಾತ್ಮ್ಯೆಯೆಂಬ ಈ ಗ್ರಂಥವನ್ನು ಪೂಜಿಸಿ. ಇದನ್ನು ಶೃತ ಪಡಿಸುವವನಿಗೆ ವಸ್ತ್ರಾದಿ ದಾನಗಳಿಂದ ತೃಪ್ತಿ ಪಡಿಸಬೇಕಾದುದು ಅವಶ್ಯಕ.

ಯಾವ ಮನುಷ್ಯನು ಮಹಾ ಪವಿತ್ರವಾದ ಸಾರಭೂತವಾದ ಮತ್ತು ಪುರಾಣೋಕ್ತವಾದ ದೇವಿಯ ದಿವ್ಯ ಚರಿತ್ರೆಯನ್ನು ಪಠಿಸುತ್ತಾನೆಯೋ ಇಲ್ಲವೆ ಆದರದಿಂದ ಕೇಳುತ್ತಾನೆಯೋ ಅವನು ಮಹಾ ಭಾಗ್ಯಶಾಲಿ ಮತ್ತು ಮಹಾಕ್ಷೇತ್ರ ಯಾತ್ರೆಮಾಡಿದ ಫಲವನ್ನು ಪಡೆಯುತ್ತಾನೆ. ಈ ಮಾತರಿ ಸತ್ಯ.

ಈ ಹಿಂದೆ ಸಾಕ್ಷಾತ್ ಈಶ್ವರನಿಂದಲೇ ತನ್ನ ಮಗನಾದ ಗುಹನಿಗೆ ತಿಳಿಯಹೇಳಿದ ಈ ದೇವಿಯ ಆಖ್ಯಾನವನ್ನು ದೇವಿಯ ಬಳಿಯಲ್ಲಿ ಕುಳಿತು

Sri Vidyabharathi Book Centre, Sringeri

CC-O. In Public Domain. Digitized by eGangotri

ಅಧ್ಯಾಯತ್ರಿತಯಮಿದಂ ನಿತ್ಯಂ ।
ಭಕ್ತ್ಯನ್ವಿತಸ್ತು ಯಃ ಪಠತಿ ॥
ಪ್ರತಿಶುಕ್ರವಾರ ಮಥವಾ ।
ಸ ಸರ್ವಪೂಜ್ಯಂ ಪದಂ ಭಜತಿ ॥೪೩॥

ಪೀಯೂಷಾಂಭೋಧಿಮಧ್ಯೇ ‡ ಸಸುರಭುವನಃ–‡ ಸನ್ಮಣಿದ್ವೀಪ ಉಕ್ತಃ ।
ತಸ್ಮಿನ್ ಉತ್ತುಂಗಚಿಂತಾಮಣಿಭವನಮಿಹಾಃ ‡ ಜಾದಯಃ ಪಂಚಮಂ ಚಃ ॥

---

ಒಂದು ಸಲವಾದರೂ ಭಕ್ತಿಯಿಂದ ಪಾರಾಯಣ ಮಾಡಿದುದೇ ಆದರೆ, ಅಂಥವನು ತನಗಂಟಿರುವ ಸಮಸ್ತ ಪಾಪಗಳಿಂದಲೂ ಮುಕ್ತನಾಗಿ ಶಿವಾ ಅಂದರೆ ಶಿವನ ಪತ್ನಿಯಾದ ದೇವಿಯ ಕರುಣೆಗೆ ಪಾತ್ರನಾಗುತ್ತಾನೆ.

ಯಾವನು ದೇವೀ ಮಹಾತ್ಮ್ಯೆಯನ್ನು ವರ್ಣಿಸಿರುವ ಈ ಮೂರು ಅಧ್ಯಾಯಗಳನ್ನು ಪ್ರತಿನಿತ್ಯವೂ ಭಕ್ತಿಯಿಂದ ಪ್ರತಿ ಶುಕ್ರವಾರದ ದಿನ ಪಠಿಸುವನೋ ಅಂಥವನು ಸಮಸ್ತರಿಂದ ಪೂಜ್ಯವಾದ ಸ್ಥಾನವನ್ನು ಹೊಂದುತ್ತಾನೆ.

ಬ್ರಹ್ಮಲೋಕ, ವೈಕುಂಠ ಮತ್ತು ಕೈಲಾಸವೆಂಬ ತ್ರಿಮೂರ್ತಿಗಳ ವಾಸಸ್ಥಾನಗಳಿಗೂ ಆಚೆ ನೆಲೆಸಿರುವ ಕ್ಷೀರಸಮುದ್ರದ ಮಧ್ಯೆ ಇರುವ ಮತ್ತು ಕಲ್ಪವೃಕ್ಷಗಳಿಂದ ನಿಬಿಡವಾದ ವನದ ಮಧ್ಯಭಾಗದಲ್ಲಿ ರಚಿತವಾದ ಶ್ರೇಷ್ಠವಾದ ಮಣಿದ್ವೀಪವೆಂಬುದು ಆವುದುಂಟೋ ಅದರ ಮಧ್ಯದಲ್ಲಿ ನವರತ್ನಗಳಿಂದ ಶೋಭಿತವಾದ ಮಹಾ ಭವನದಲ್ಲಿ ಬ್ರಹ್ಮನೇ ಮೊದಲಾದ ಐವರಿಂದ ಬ್ರಹ್ಮ ವಿಷ್ಣು ರುದ್ರ ಮಹೇಶ್ವರರೇ ನಾಲ್ಕು ಕಾಲುಗಳಾಗಿಯೂ, ಸದಾಶಿವನೇ ಹಲಗೆಯಾಗಿದ್ದು ಅವರಿಂದ ಹೊರಡಲ್ಪಡುವ ಮಹಾಮಂಚದಲ್ಲಿ, ಪ್ರಳಯವಾಗಿ ಸೃಷ್ಟಿಯ ತತ್ಪೂರ್ವದಲ್ಲಿ, ಮೂಲಾಧಾರಾದಿ ಸಪ್ತಚಕ್ರಗಳಲ್ಲಿ ರೂಪಿಣಿಯಾಗಿ ವಿನೋದಾರ್ಥವಾಗಿ ಪರಶಿವನ ಎಡತೊಡೆಯಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri


ತತ್ರ ಕ್ರೀಡಾರ್ಥಮಂಜೇ ‡ ಕೃತವಪುತಪಸ- ‡ ನ್ಯಾತ್ಮಕಃ
ಶ್ರೀಮಹೇಶಃ ।
ತದ್ವಾಮಾಂಕೇ ನಿಷಣ್ಣೇऽ ‡ ಖಿಲಜನನೀಮಹಾ ‡ ಲಕ್ಷ್ಮಿ !
ನಿತ್ಯಂ ನಮಸ್ತೇ ॥

ಇತಿ ಸ್ಕಾಂದೇ ಶ್ರೀಕೋಲಾಪುರಕ್ಷೇತ್ರಮಹಾತ್ಮ್ಯೇ
ಪರದೇವತಾ-ಪ್ರಸಾದಸಾಧನವರ್ಣಂ ನಾಮ ತೃತೀಯೋऽಧ್ಯಾಯಃ

---

ಅವನ ಅರ್ಧಾಂಗಿಯಾಗಿ ಲೋಕಮಾತೆಯೆನಿಸಿದ ದೇವಿ ಮಹಾಲಕ್ಷ್ಮಿ ನೀನು ಕುಳಿತಿರುವೆ ಅಂತಹ ನಿನಗೆ ಇದೋ ನನ್ನ ಸಾಷ್ಟಾಂಗ ನಮಸ್ಕಾರಗಳು.

ಇಲ್ಲಿಗೆ ಸ್ಕಾಂದ ಪುರಾಣಾನ್ತರ್ಗತ ಶ್ರೀ ಕೋಲಾಪುರಕ್ಷೇತ್ರಮಹಾತ್ಮ್ಯೆಯಲ್ಲಿ ಪರದೇವತಾ ಪ್ರಸಾದವರ್ಣನೆ ಎಂಬ ಮೂರನೆಯ ಅಧ್ಯಾಯವು ಮುಗಿದಿದೆ.

---

Sri Vidyabharathi Book Centre, Sringeri

CC-O. In Public Domain. Digitized by eGangotri

# ಭಾರತದಲ್ಲಿ ಸ್ಥಾಪಿತವಾಗಿಸುವ ಶಕ್ತಿಸ್ವರೂಪಿಣಿಯಾದ ದೇವಿಯ ಹದಿನೆಂಟು ಶಕ್ತಿಸ್ಥಾನಗಳು

ಸುರುಟಿ ರಾಗಂ

ಮಂಗಳಂ ಮಂಗಳಂ ! ಭುವನೇಶ್ವರಿ ! ಮಂಗಳಂ ಮಂಗಳಂ ಧ್ರುವಂ॥ ಮಂಗಳಂ ಲಂಕಾಪುರ ವರಶಾಂಕರಿ ! ಮಂಗಳಂ ಕಾಂಚೀಕಾಮಾಕ್ಷಿ ದೇವಿ ! ॥ ಮಂಗಳಂ ಕರವೀಪುರ ಮಹಾಲಕ್ಷ್ಮಿ ! ಸುಮಂಗಳಂ ಕೋಲಾಪುರ-ಮೂಕಾಂಬಿಕೇ ! ಮಂಗಳಂ ॥೧॥

ದೇವೀ ! ಕ್ರೌಂಚದ್ವೀಪೇಶ್ವರಿ ! ಚಾಮುಂಡಿಕೇ ! ಪಾವನ ಕಾಶೀ-ಮಂಗಳಗೌರಿಕೇ ! ॥ ಭೂವರಾಲಂಪುರಾಲಯ ಜೋಗುಲಾಂಬಿಕೇ- ! ಪಾವಿತಲೋಕ ಶ್ರೀಶೈಲ ಭ್ರಮರಾಂಬಿಕೇ ! ॥ ಮಂಗಳಂ ॥೨॥

ಚಿತ್ರಕೂಟಾಶ್ರಿತಮಾಣಿಕ್ಯದೇವಿ ! । ಪವಿತ್ರ ಪ್ರಯಾಗವಾಸಿನಿ ! ಮಾಧವಿ ! ಕ್ಷೇತ್ರೋತ್ತಮ ಹಿಂಗುಳಾನಿಲಯಶಾಂಕರಿ । ಕ್ಷೇತ್ರೇಶಿ । ವೈರಿಣೀಪುರ ಪೀಠರೂಪಿಣಿ ! ॥ ಮಂಗಳಂ ॥ ೩ ॥

ಉಡ್ಯಾಣನಿಲಯ ವಿಜಯಾದೇವಿ ! ನಿಖಿಲ ಮು-। ನೀಡ್ಯಾ ಹಿ ಕ್ಷೇತ್ರಸ್ಥ ಕಾಳರೂಪಿ ! ಈಡ್ಯ ತುಲಜಾಪುರನಿಲಯ ಭವಾನಿ ! ದೇ-ವೇಡ್ಯವಂದಿತಮಧುರೇಶ್ವರಿ ಮೀನಾಕ್ಷಿ ! ॥ ಮಂಗಳಂ ॥೪॥

ಇಷ್ಟ ಜ್ವಾಲಾಮುಖಿ ನಿಷ್ಠಮಹಾಜ್ವಾಲೇ ಪುಷ್ಟಾತ್ತ್ರರೀಯೇರಾಡ ಲಕ್ಷ್ಮೀ ! ॥ ಅಷ್ಟಾದಶಪೀಠಶ್ರೇಷ್ಠವಾಸಿನಿ ! ಭಕ್ತಾಭೀಷ್ಟಧಾತ್ರಿ ಜಗದ್ಧಾತ್ರಿ । ನಮೋಽಸ್ತುತೇ ॥ ಮಂಗಳಂ ॥೫॥

Sri Vidyabharathi Book Centre, Sringeri

CC-O. In Public Domain. Digitized by eGangotri



# ದೇವೀಸ್ತುತಿಃ

ಓಂ ನಮೋ ದೇವ್ಯೈ ಮಹಾದೇವ್ಯೈ ಶಿವಾಯ್ಯೈ ಸತತಂ ನಮಃ ।
ನಮಃ ಪ್ರಕೃತ್ಯೈ ಭದ್ರಾಯ್ಯೈ ನಿಯತಾಃ ಪ್ರಣತಾಃ ಸ್ಮೃತಾಂ ॥

ರೌದ್ರಾಯ್ಯೈ ನಮೋ ನಿತ್ಯಾಯ್ಯೈ ಗೌರ್ಯ್ಯೈ ಧಾತ್ರ್ಯೈ ನಮೋ ನಮಃ ।
ಜೋತ್ಸ್ನಾಯ್ಯೈ ಚೇಂದುರೂಪಿಣ್ಯೈ ಸುಖಾಯ್ಯೈ ಸತತಂ ನಮಃ ॥

ಕಲ್ಯಾಣ್ಯೈ ಪ್ರಣತಾ ವೃದ್ಧ್ಯೈ ಸಿದ್ಧ್ಯೈ ಕುರ್ಮೋ ನಮೋ ನಮಃ ।
ನೈರ್ಋತ್ಯೈ ಭೂಭೃತಾಂಲಕ್ಷ್ಮ್ಯೈ ಶರ್ವಾಣ್ಯೈ ತೇ ನಮೋ ನಮಃ ॥

ದುರ್ಗಾಯ್ಯೈ ದುರ್ಗಾಪಾರಾಯ್ಯೈ ಸಾರಾಯ್ಯೈ ಸರ್ವಕಾರಿಣ್ಯೈ ।
ಖ್ಯಾತ್ಯೈ ತಥೈವ ಕೃಷ್ಣಾಯ್ಯೈ ಧೂಮ್ರಾಯ್ಯೈ ಸತತಂ ನಮಃ ॥

ಅತಿಸೌಮ್ಯಾತಿರೌದ್ರಾಯ್ಯೈ ನತಾಸ್ತಸ್ಯೈ ನಮೋ ನಮಃ ।
ನಮೋ ಜಗತ್ಪ್ರತಿಷ್ಠಾಯ್ಯೈ ದೇವ್ಯೈ ಕೃತ್ಯೈ ನಮೋ ನಮಃ ॥

ಯಾ ದೇವೀ ಸರ್ವಭೂತೇಷು ವಿಷ್ಣುಮಾಯೇತಿ ಶಬ್ದಿತಾ ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥

ಯಾ ದೇವೀ ಸರ್ವಭೂತೇಷು ಚೇತನೇತ್ಯಭಿಧೀಯತೇ ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥

ಯಾ ದೇವೀ ಸರ್ವಭೂತೇಷು ಬುದ್ಧಿರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ವಮಸ್ತಸ್ಯೈ ನಮೋ ನಮಃ ॥

ಯಾ ದೇವೀ ಸರ್ವಭೂತೇಷು ನಿದ್ರಾರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥

Sri Vidyabharathi Book Centre, Sringeri

CC-O. In Public Domain. Digitized by eGangotri



ಯಾ ದೇವೀ ಸರ್ವಭೂತೇಷು ‡ ಕ್ಷುಧಾರೂಪೇಣ ಸಂಸ್ಥಿತಾ।
ನಮಸ್ತಸ್ಯೈ ನಮಸ್ತಸ್ಯೈ ‡ ನಮಸ್ತಸ್ಯೈ ನಮೋ ನಮಃ ॥

ಯಾ ದೇವೀ ಸರ್ವಭೂತೇಷು ಛಾಯಾರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ‡ ನಮಸ್ತಸ್ಯೈ ನಮೋ ನಮಃ ॥

ಯಾ ದೇವೀ ಸರ್ವಭೂತೇಷು ‡ ಶಕ್ತಿರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ‡ ನಮಸ್ತಸ್ಯೈ ನಮೋ ನಮಃ ॥

ಯಾ ದೇವೀ ಸರ್ವಭೂತೇಷು ‡ ತೃಷ್ಣಾರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ‡ ನಮಸ್ತಸ್ಯೈ ನಮೋ ನಮಃ ॥

ಯಾ ದೇವೀ ಸರ್ವಭೂತೇಷು ‡ ಕ್ಷಾಂತಿರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ‡ ನಮಸ್ತಸ್ಯೈ ನಮೋ ನಮಃ ॥

ಯಾ ದೇವೀ ಸರ್ವಭೂತೇಷು ‡ ಜಾತಿರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ‡ ನಮಸ್ತಸ್ಯೈ ನಮೋ ನಮಃ ॥

ಯಾ ದೇವಿ ಸರ್ವಭೂತೇಷು ಲಜ್ಜಾರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ‡ ನಮಸ್ತಸ್ಯೈ ನಮೋ ನಮಃ ॥

ಯಾ ದೇವೀ ಸರ್ವಭೂತೇಷು ‡ ಶ್ರದ್ಧಾರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ‡ ನಮಸ್ತಸ್ಯೈ ನಮೋ ನಮಃ ॥

ಯಾ ದೇವೀ ಸರ್ವಭೂತೇಷು ‡ ಕಾಂತಿರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ‡ ನಮಸ್ತಸ್ಯೈ ನಮೋ ನಮಃ ॥

ಯಾ ದೇವೀ ಸರ್ವಭೂತೇಷು ‡ ಶಾಂತಿರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ‡ ನಮಸ್ತಸ್ಯೈ ನಮೋ ನಮಃ ॥

ಯಾ ದೇವೀ ಸರ್ವಭೂತೇಷು ‡ ಲಕ್ಷ್ಮೀರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ‡ ನಮಸ್ತಸ್ಯೈ ನಮೋ ನಮಃ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಯಾ ದೇವೀ ಸರ್ವಭೂತೇಷು ‡ ವೃತ್ತಿರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ‡ ನಮಸ್ತಸ್ಯೈ ನಮೋ ನಮಃ ॥

ಯಾ ದೇವಿ ಸರ್ವಭೂತೇಷು ‡ ಸ್ಮೃತಿರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ‡ ನಮಸ್ತಸ್ಯೈ ನಮೋ ನಮಃ ॥

ಯಾ ದೇವಿ ಸರ್ವಭೂತೇಷು ‡ ದಯಾರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ‡ ನಮಸ್ತಸ್ಯೈ ನಮೋ ನಮಃ ॥

ಯಾ ದೇವಿ ಸರ್ವಭೂತೇಷು ‡ ತುಷ್ಟಿರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ‡ ನಮಸ್ತಸ್ಯೈ ನಮೋ ನಮಃ ॥

ಯಾ ದೇವಿ ಸರ್ವಭೂತೇಷು ‡ ಮಾತೃರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ‡ ನಮಸ್ತಸ್ಯೈ ನಮೋ ನಮಃ ॥

ಯಾ ದೇವಿ ಸರ್ವಭೂತೇಷು ‡ ಭ್ರಾಂತಿರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ‡ ನಮಸ್ತಸ್ಯೈ ನಮೋ ನಮಃ ॥

ಇಂದ್ರಿಯಾಣಾಮಧಿಷ್ಠಾತ್ರೀ ‡ ಭೂತಾನಾಂ ಚಾಖಿಲೇಷು ಯಾ ।
ಭೂತೇಷು ಸತತಂ ತಸ್ಯೈ ‡ ವ್ಯಾಪ್ತಿದೇವ್ಯೈ ನಮೋ ನಮಃ ॥

ಚಿತಿರೂಪೇಣ ಯಾ ಕೃತ್ಸ್ನ ‡ ಮೇತದ್ವ್ಯಾಪ್ಯ ಸ್ಥಿತಾ ಜಗತ್ ।
ನಮಸ್ತಸ್ಯೈ ನಮಸ್ತಸ್ಯೈ ‡ ನಮಸ್ತಸ್ಯೈ ನಮೋ ನಮಃ ॥

ಸ್ತುತಾ ಸುರೈಃ ಪೂರ್ವಮಭೀಷ್ಟಸಂಶ್ರಯಾ-
ತ್ತಥಾಸುರೇಂದ್ರೇಣ ದಿನೇಷು ಸೇವಿತಾ ।
ಕರೋತು ಸಾ ನಃ ಶುಭಹೇತುರೀಶ್ವರೀ
ಶುಭಾನಿ ಭದ್ರಾಣ್ಯಭಿಹಂತು ಚಾಪದಃ ॥

ಯಾ ಸಾಂಪ್ರತಂ ಚೋದ್ಧತದೈತ್ಯತಾಪಿತೈ-
ರಸ್ಮಾಭಿರೀಶಾ ಚ ಸುರೈರ್ನಮಸ್ಯತೇ ।
ಯಾ ಚ ಸ್ಮೃತಾ ತತ್ಕ್ಷಣಮೇವ ಹಂತಿ ನಃ
ಸರ್ವಾಪದೋ ಭಕ್ತಿವಿನಮ್ರಮೂರ್ತಿಭಿಃ ॥

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri